ಸಂಪುಟ: 21, ಸಂಚಿಕೆ: 135, ಪುಟಗಳು: 8, ಶನಿವಾರ, 24 ಫೆಬ್ರವರಿ 2024 RNI NO. KARKAN/2002/08054
epaper: www.sanjemugilu.com



ನೇರ ಸಾರಥ್ಯದಲ್ಲಿ...

ಸುದ್ದಿಗಳ ಹೊನಲು
# ಸಂಜೆ ಮುಗಿಲು
ಕನ್ನಡ ಪ್ರಾದೇಶಿಕ ಸಂಜೆ ದಿನಪತ್ರಿಕೆ
ಬೆಂಗಳೂರು। ಬೆಂಗಳೂರು ಗ್ರಾಮಾಂತರ। ಕೋಲಾರ। ಚಿಕ್ಕಬಳ್ಳಾಪುರ। ರಾಮನಗರ। ಮಂಡ್ಯ। ಮೈಸೂರು। ಚಾಮರಾಜನಗರ

**ಸುಭಾಷಿತ**

ಸ್ವಲ್ಪ ಉಳ್ಳವನು ಬಡವನಲ್ಲ;
ಇನ್ನೂ ಬೇಕೆನ್ನುವವನು ಬಡವ

। ಸೆನೇಕಾ

**ಪಂಚಾಂಗ**

(ಶನಿವಾರ 24, ಫೆಬ್ರವರಿ -2024)

- ಶ್ರೀ ಶೋಭಕೃತನಾಮ ಸಂವತ್ಸರ
- ಉತ್ತರಾಯಣ, ಶಿಶಿರ ಋತು,
- ಮಾಘ ಮಾಸ, ಶುಕ್ಲ ಪಕ್ಷ,
- ಪಂಚಮಿ,
- ಆಶ್ಲೇಷ ನಕ್ಷತ್ರ.
- ರಾಹುಕಾಲ - 09:04AM 10:40 AM
- ಗುಳಿಕಕಾಲ - 05:52 AM 07:28 AM
- ಯಮಗಂಡಕಾಲ - 1:52 PM 3:28 PM

## ಸಂಕ್ಷಿಪ್ತ ಸುದ್ದಿ

### ಬೆಳಗಾವಿಯಲ್ಲಿ ಹೆಚ್ಚಾದ ಅಪಘಾತ 25 ಸಾವು




**ಬೆಳಗಾವಿ:** ಕಳೆದ ಮೂರು ದಿನಗಳಿಂದ ಬೆಳಗಾವಿ ಜಿಲ್ಲೆಯಲ್ಲಿ ಅಪಘಾತ ಪ್ರಕರಣಗಳು ಹೆಚ್ಚಾಗಿವೆ. ವಾಹನ ಚಾಲನೆ ವೇಳೆ ಚಾಲಕರಿಂದಾಗಿರುವ ಬೇಜವಾಬ್ದಾರಿತನ, ನಿರ್ಲಕ್ಷ್ಯಕ್ಕೆ ಹಲವು ಮಂದಿ ಪ್ರಾಣಗಳೆದುಕೊಂಡಿದ್ದಾರೆ. ಮೂರೇ ದಿನದಲ್ಲಿ 25 ಜನರು ಮೃತಪಟ್ಟಿದ್ದಾರೆ. ಬೈಕ್ ಅಪಘಾತ, ಕಾರು ಅಪಘಾತ ಸೇರಿದಂತೆ ಜಿಲ್ಲೆಯಲ್ಲಿ ಪುಟ 2

### ರೌಡಿಶೀಟರ್ ಮೆಂಟಲ್ ಮಂಜನ ಕೊಲೆ

**ಆನೇಕಲ್:** ಆನೇಕಲ್‌ನಲ್ಲಿ ರೌಡಿಗಳು ಹಾವಳಿ ಮಿತಿ ಮೀರಿದೆ. ಹಳೆ ವೈಷಮ್ಯ ಹಿನ್ನೆಲೆ ರೌಡಿಶೀಟರ್‌ನನ್ನ ಮಾರಕಾಸ್ತ್ರಗಳಿಂದ ಕೊಚ್ಚಿ ಕೊಲೆ ಮಾಡಿರುವ ಘಟನೆ ಆನೇಕಲ್ ಪಟ್ಟಣದ ವೀವರ್ಸ್ ಕಾಲೋನಿಯಲ್ಲಿ ನಡೆದಿದೆ.



ಮಂಜುನಾಥ್ ಅಲಿಯಾಸ್ ಮೆಂಟಲ್ ಮಂಜನನ್ನ ಕೊಲೆಯಾದ ರೌಡಿಶೀಟರ್ ಆಗಿದ್ದು, ಸಿನಿಮಾ ಶೈಲಿಯಲ್ಲಿ ರೌಡಿಶೀಟರ್‌ನನ್ನು ಅಟ್ಟಾಡಿಸಿ ದುಷ್ಕರ್ಮಿಗಳು ಕೊಲೆ ಮಾಡಿದ್ದಾರೆ. ಪುಟ 2

### ದೆಹಲಿಯಲ್ಲಿ ಪ್ರತಿಭಟಿಸ್ತಿರೋರು ರೈತರಲ್ಲ ದೇಶದ್ರೋಹಿಗಳು

**ಕಾರವಾರ:** ದೆಹಲಿಯಲ್ಲಿ ಪ್ರತಿಭಟನೆ ಮಾಡುತ್ತಿರುವವರು ದೇಶದ್ರೋಹಿಗಳು, ರೈತರೇ ಅಲ್ಲ ಎಂದು ಉತ್ತರ ಕನ್ನಡ ಜಿಲ್ಲೆಯ ಸಂಸದ ಅನಂತಕುಮಾರ್ ಹೆಗಡೆ ಕಿಡಿಕಾರಿದ್ದಾರೆ. ಜಿಲ್ಲೆಯ ಮುಂಡಗೋಡಿನಲ್ಲಿ ಮಾತನಾಡಿದ ಅವರು, ಅಲ್ಲಿ ಪ್ರತಿಭಟನೆಗೆ ಬರುವವರು ದೊಡ್ಡ ದೊಡ್ಡ ಗಾಡಿ ತೆಗೆದುಕೊಂಡು ಟೊಯೋಟಾ ಕಾರಲ್ಲಿ ಬರುತ್ತಾರೆ, ರೈತರ ಬಳಿ ಅಷ್ಟೆಲ್ಲಾ ದುಡ್ಡಿದೆಯಾ? ಪ್ರತಿಭಟನೆ ಪುಟ 2

## ಮುಸ್ಲಿಂ ವಿವಾಹ, ವಿಚ್ಛೇದನ ನೋಂದಣಿ ಕಾಯ್ದೆ ರದ್ದು

# ಅಸ್ಸಾಂ ಐತಿಹಾಸಿಕ ನಿರ್ಧಾರ

**ಗುವಾಹಟಿ:** ಶತಮಾನದಷ್ಟು ಹಳೆಯದಾದ ಅಸ್ಸಾಂ 'ಮುಸ್ಲಿಂ ವಿವಾಹ ಮತ್ತು ವಿಚ್ಛೇದನ ನೋಂದಣಿ ಕಾಯ್ದೆ 1935' ಅನ್ನು ಮುಖ್ಯಮಂತ್ರಿ ಹಿಮಂತ ಬಿಸ್ವ ಶರ್ಮಾ ನೇತೃತ್ವದ ಅಸ್ಸಾಂ ಸರ್ಕಾರ ರದ್ದುಗೊಳಿಸಲು ನಿರ್ಧರಿಸಿದೆ. ಅಸ್ಸಾಂನಲ್ಲಿ ಬಾಲ್ಯ ವಿವಾಹವನ್ನು ನಿಷೇಧಿಸುವ ನಿಟ್ಟಿನಲ್ಲಿ ಇದೊಂದು ಮಹತ್ವದ ಹೆಜ್ಜೆ ಎಂದು ಹೇಳಲಾಗುತ್ತಿದೆ. ಅದೇ ರೀತಿ ಏಕರೂಪ ನಾಗರಿಕ ಸಹಿತೆ ಜಾರಿ ನಿಟ್ಟಿನಲ್ಲಿ ಇದು ಮೊದಲ ಕ್ರಮವಾಗಿರಬಹುದು ಎಂದು ವಿಶ್ಲೇಷಿಸಲಾಗುತ್ತಿದೆ. ಶುಕ್ರವಾರ ಸಂಜೆ ನಡೆದ ಸಚಿವ ಸಂಪುಟ ಸಭೆಯಲ್ಲಿ ಈ ನಿರ್ಧಾರ ಕೈಗೊಳ್ಳಲಾಯಿತು.

ಸಚಿವ ಸಂಪುಟ ಸಭೆಯ ನಂತರ ಮಾಧ್ಯಮಗಳನ್ನು ಉದ್ದೇಶಿಸಿ ಮಾತನಾಡಿದ ಸಚಿವ ಜಯಂತ್ ಮಲ್ಲಬರುವ, ಮುಸ್ಲಿಂ



ವಿವಾಹ ಕಾಯ್ದೆ ರದ್ದತಿ ನಿರ್ಧಾರದ ಬಗ್ಗೆ ಮಾಹಿತಿ ನೀಡಿದರು. ಏಕರೂಪ ನಾಗರಿಕ ಸಂಹಿತೆ ನಿಟ್ಟಿನಲ್ಲಿ ಇದೊಂದು ದೊಡ್ಡ ಹೆಜ್ಜೆ. ಇನ್ನು ಮುಂದೆ ರಾಜ್ಯದಲ್ಲಿ ಮುಸ್ಲಿಂ ವಿವಾಹ ಮತ್ತು ವಿಚ್ಛೇದನಗಳ ನೋಂದಣಿಯನ್ನು ಜಿಲ್ಲಾಧಿಕಾರಿ ಮತ್ತು ಜಿಲ್ಲಾ ನೋಂದಣಾಧಿಕಾರಿಗಳು ಮಾಡಲಿದ್ದಾರೆ ಎಂದು ಸಚಿವರು ಮಾಹಿತಿ ನೀಡಿದರು.

**ಮುಸ್ಲಿಂ ರಿಜಿಸ್ಟ್ರಾರ್ ಗಳು ರದ್ದು: 2 ಲಕ್ಷ ರೂ. ಪರಿಹಾರ:** ಸದ್ಯ ಮುಸ್ಲಿಂ ವಿವಾಹ, ವಿಚ್ಛೇದನ ನೋಂದಣಿ ಕಾಯ್ದೆಯಡಿ ಕಾರ್ಯನಿರ್ವಹಿಸುತ್ತಿರುವ 94 ಮುಸ್ಲಿಂ ರಿಜಿಸ್ಟ್ರಾರ್‌ಗಳನ್ನು ತೆಗೆದುಹಾಕಲಾಗುವುದು. ಅವರೆಲ್ಲರಿಗೂ ತಲಾ 2 ಲಕ್ಷ ರೂಪಾಯಿಗಳ ಒಂದು ಬಾರಿಯ ಪರಿಹಾರವನ್ನು ನೀಡಲಾಗುವುದು ಎಂದು ಮಲ್ಲಬರುವ ಹೇಳಿದರು.

**ಸಿಎಂ ಹಿಮಂತ ಬಿಸ್ವ ಶರ್ಮಾ ಎಕ್ಸ್ ಸಂದೇಶ:** 2024ರ ಫೆಬ್ರವರಿ 23ರಂದು ಅಸ್ಸಾಂ ಕ್ಯಾಬಿನೆಟ್ ಹಳೆಯ ಅಸ್ಸಾಂ ಮುಸ್ಲಿಂ ವಿವಾಹಗಳು ಮತ್ತು ವಿಚ್ಛೇದನ ನೋಂದಣಿ ಕಾಯ್ದೆಯನ್ನು ರದ್ದುಗೊಳಿಸುವ ಮಹತ್ವದ ನಿರ್ಧಾರವನ್ನು ತೆಗೆದುಕೊಂಡಿದೆ. ಈ ಕಾಯ್ದೆಯು ವಧು ಮತ್ತು ವರರು ಕ್ರಮವಾಗಿ ಪುಟ 2

## ಟಾರ್ಗೆಟ್ 28, ಅಮಿತ್ ಶಾ ರಣತಂತ್ರ

# ಎಲ್ಲಾ ಕ್ಷೇತ್ರಗಳಲ್ಲೂ ಬಿಜೆಪಿ ಚುನಾವಣಾ ಕಚೇರಿ

**ಬೆಂಗಳೂರು:** ಲೋಕಸಭಾ ಚುನಾವಣೆಯ ಕಾರ್ಯತಂತ್ರಗಳ ಬಗ್ಗೆ ಖುದ್ದು ಬಿಜೆಪಿ ಚುನಾವಣಾ ಚಾಣಕ್ಯ ಅಮಿತ್ ಶಾ ಅವರೇ ತಂತ್ರಗಾರಿಕೆ ಶುರು ಮಾಡಿದ್ದಾರೆ. ರಾಜ್ಯದ ಎಲ್ಲಾ 28 ಲೋಕಸಭಾ ಕ್ಷೇತ್ರಗಳಲ್ಲೂ ಚುನಾವಣಾ ಕಚೇರಿಗಳು ಓಪನ್ ಆಗಲಿದೆ. ಎಲ್ಲಾ ಜಿಲ್ಲಾಧ್ಯಕ್ಷರುಗಳಿಂದ ಚುನಾವಣಾ ಕಚೇರಿಗಳು ಓಪನ್ ಆಗಲಿದೆ.

ಕಚೇರಿ ನಿರ್ವಹಣೆ ಸ್ಥಳೀಯ ಜಿಲ್ಲಾಧ್ಯಕ್ಷರುಗಳಿಗೇ ಜವಾಬ್ದಾರಿ ನೀಡಲಾಗಿದೆ. ಕ್ಷೇತ್ರಗಳ ಚುನಾವಣಾ ಕಚೇರಿಗಳಿಗೆ ರಾಜ್ಯ ಮಟ್ಟದಿಂದ ರಾಧಾ ಮೋಹನ್ ದಾಸ್ ಅಗರವಾಲ್ ನೇಮಕ ಮಾಡಲಾಗಿದೆ. ರಾಜ್ಯ ಮಟ್ಟದಲ್ಲಿ ಯಾವ ರೀತಿ ತಂತ್ರ ಮಾಡಲಾಗ್ತಿದೆ ಅನ್ನೋ ಬಗ್ಗೆ




ಅಮಿತ್ ಶಾಗೆ ರಾಧಾ ಮೋಹನ್‌ದಾಸ್ ಖುದ್ದು ಮಾಹಿತಿ ನೀಡಲಿದ್ದಾರೆ. ಪುಟ 2

## ಮಂಡ್ಯದಿಂದ ಸ್ಪರ್ಧೆ ಖಚಿತ ಪಡಿಸಿದ ಬೆನ್ನಲ್ಲೇ ಮಹತ್ವದ ಸಭೆ

# ಕುತೂಹಲದತ್ತ ಸುಮಲತಾ ನಡೆ

**ಮಂಡ್ಯ:** ಲೋಕ ಸಮರಕ್ಕೆ ಇನ್ನೇನು ಕೆಲವೇ ದಿನಗಳು ಬಾಕಿ ಇವೆ. ಈ ಮಧ್ಯೆ ರಾಜ್ಯದಲ್ಲಿ ಜೆಡಿಎಸ್ ಹಾಗೂ ಬಿಜೆಪಿ ಮೈತ್ರಿ ಮಾಡಿಕೊಂಡಿದ್ದು, ಸೀಟು ಹಂಚಿಕೆ ಸಂಬಂಧ ದೆಹಲಿಯಲ್ಲಿ ಬಿಜೆಪಿ ನಾಯಕರ ಜೊತೆ ದಳಪತಿಗಳು ಮಾತುಕತೆ ನಡೆಸಿದ್ದಾರೆ. ಇದೀಗ ರಾಜ್ಯದ ಗಮನ ಸೆಳೆದಿರೋ ಮಂಡ್ಯ ಕ್ಷೇತ್ರ ಬಹುತೇಕ ಜೆಡಿಎಸ್ ಗೆ ಫಿಕ್ಸ್ ಆಗಿದೆ. ಆದರೆ ಮಂಡ್ಯ ಕ್ಷೇತ್ರದ ಬಿಜೆಪಿ ಟಿಕೆಟ್ ಗೆ ಕಣ್ಣಿಟ್ಟಿರೋ ರೆಬಲ್ ಲೇಡಿ ಸುಮಲತಾ, ನಾನು ಸ್ಪರ್ಧೆ ಮಾಡೇ ಮಾಡುತ್ತೇನೆ ಎಂದು ಹೇಳುವ ಮೂಲಕ ಸವಾಲು ಒಡ್ಡಿದ್ದಾರೆ. ಹೀಗಾಗಿ ರೋಚಕ ತಿರುವಿನತ್ತ ಮಂಡ್ಯ ಲೋಕಾ ಅಖಾಡ ತಿರುಗಿದೆ. ಸಂಸದೆ ಸುಮಲತಾ ಅವರ ನಡೆ ತೀವ್ರ ಕುತೂಹಲ ಮೂಡಿಸಿದೆ. ಇಂದು ಪ್ರಮುಖ ಮುಖಂಡರ ಸಭೆ ಕರೆಯಲಾಗಿದೆ.

ಸುಮಲತಾ ಅವರು ಮಂಡ್ಯದಿಂದ ಸ್ಪರ್ಧೆ ಖಚಿತ ಪಡಿಸಿದ ಬೆನ್ನಲ್ಲೆ ಮಹತ್ವದ ಸಭೆ ಕರೆದಿದ್ದಾರೆ. ನಾಳೆ ಸಂಜೆ 4 ಗಂಟೆಗೆ ಬೆಂಗಳೂರು ನಿವಾಸದಲ್ಲಿ ಪ್ರಮುಖ ಮುಖಂಡರ ಜೊತೆ ಸುಮಲತಾ ಅವರು ಸಭೆ ನಡೆಸಲಿದ್ದಾರೆ. ಅಂಬರೀಶ್ ಹಾಗೂ ಸುಮಲತಾರ ಪ್ರಮುಖ ಬೆಂಬಲಿಗರು ಸಭೆಯಲ್ಲಿ ಭಾಗಿಯಾಗಲಿದ್ದಾರೆ. ಜೊತೆಗೆ ಕೆಲ ಕಾಂಗ್ರೆಸ್ ಹಾಗೂ ಬಿಜೆಪಿ ಮುಖಂಡರು ಕೂಡ ಸಭೆಯಲ್ಲಿ ಭಾಗಿ ಆಗುವ ಸಾಧ್ಯತೆ ಇದೆ. ಚುನಾವಣೆಗೆ ಸಿದ್ದತೆ ಕುರಿತು ಮುಖಂಡರೊಂದಿಗೆ ಸುದೀರ್ಘ ಚರ್ಚೆ ನಡೆಸಲಿದ್ದಾರೆ. ಬಿಜೆಪಿ ಟಿಕೆಟ್ ತಪ್ಪಿದ್ರೆ ಪಕ್ಷೇತರವಾಗಿ ಸ್ಪರ್ಧಿಸುವ ಬಗ್ಗೆ ಸಭೆಯಲ್ಲಿ ಅಭಿಪ್ರಾಯ ಸಂಗ್ರಹ ಮಾಡಲಾಗುತ್ತೆ.

ಮುಖಂಡರೊಂದಿಗೆ ಸಾಧಕ-ಬಾಧಕಗಳ ಕುರಿತು ಸಮಾಲೋಚನೆ ನಡೆಸಲಿದ್ದಾರೆ. ನಿನ್ನೆಯಷ್ಟೆ ಸ್ಪರ್ಧೆ ಖಚಿತಪಡಿಸಿದ್ದ



ಸುಮಲತಾ ಅಂಬರೀಶ್ ಅವರು ಇದೀಗ ಸಭೆ ಕರೆದಿರುವುದರಿಂದ ರಾಜಕೀಯ ಪಡಸಾಲೆಯಲ್ಲಿ ತೀವ್ರ ಚರ್ಚೆ ಶುರುವಾಗಿದೆ. ಮುಖಂಡರೊಂದಿಗೆ ಸಮಾಲೋಚನೆ ಬಳಿಕ ಮುಂದಿನ ನಿರ್ಧಾರ ಪ್ರಕಟಿಸುತ್ತಾರಾ ಅಥವಾ ಬಿಜೆಪಿ ನಡೆ ನೋಡಿಕೊಂಡು ಬಳಿಕ ಮುಂದಿನ ಹೆಜ್ಜೆ ಇಡುತ್ತಾರಾ ಎಂಬ ಬಗ್ಗೆ ಸ್ವಾಭಿಮಾನಿ ಪಡೆಗೆ ಸುಮಲತಾ ಸಂದೇಶ ರವಾನಿಸಲಿದ್ದಾರೆ.

ಮಂಡ್ಯ ಲೋಕಸಭಾ ಕ್ಷೇತ್ರ ಇದೀಗ ಇಡೀ ರಾಜ್ಯದ ಗಮನ ಸೆಳೆಯುತ್ತಿದೆ. ಕಳೆದ ಬಾರಿ ಲೋಕ ಸಮರದಲ್ಲಿ ಗೆದ್ದು ಬೀಗಿದ್ದ ಸ್ವಾಭಿಮಾನಿ ಸುಮಲತಾ, ಈ ಬಾರಿ ಮತ್ತೆ ಮಂಡ್ಯದಿಂದಲೇ ಸ್ಪರ್ಧೆ ಮಾಡುವ ಇಂಗಿತ ವ್ಯಕ್ತ ಪಡಿಸಿದ್ದಾರೆ. ಅದರಲ್ಲೂ ಬಿಜೆಪಿಯಿಂದಲೇ ಸ್ಪರ್ಧೆ ಮಾಡಲು, ದೆಹಲಿ ಮಟ್ಟದಲ್ಲಿ ದಾಳ ಉರುಳಿಸುತ್ತಿದ್ದಾರೆ. ಈಗಾಗಲೇ ಬಿಜೆಪಿಯ ಘಟಾನುಘಟಿ ನಾಯಕರನ್ನ ಭೇಟಿ ಮಾಡಿ, ಬಿಜೆಪಿ ಟಿಕೆಟ್ ನೀಡುವಂತೆ ಒತ್ತಡವನ್ನು ಕೂಡ ಹಾಕಿದ್ದಾರೆ. ಈ ಮಧ್ಯೆ ಮೊನ್ನೆ ಮಂಡ್ಯದಿಂದ ಟಿಕೆಟ್ ಸಿಗುವ ನಿರೀಕ್ಷೆ ಇದೆ ಅಂತಾ ಕೂಡ ತಿಳಿಸಿದ್ರು. ಇದರ ಬೆನ್ನಲ್ಲೆ ಮಾಜಿ ಸಿಎಂ ಹೆಚ್ ಡಿಕೆ, ದೆಹಲಿಗೆ ಹಾರಿ ಮೈತ್ರಿ ಟಿಕೆಟ್ ಸಂಬಂಧ ಅಮಿತ್ ಶಾ ಜೊತೆ ಕೂಡ ಮಾತುಕತೆ ನಡೆಸಿದ್ರು. ಮಂಡ್ಯ, ಹಾಸನ, ಕೋಲಾರ ಬಹುತೇಕ ಜೆಡಿಎಸ್ ಗೆ ಫಿಕ್ಸ್ ಅಂತ ಹೇಳಲಾಗುತ್ತಿದೆ. ಈ ಬೆಳವಣಿಗೆ ಮಧ್ಯೆ, ಬಿಜೆಪಿ ಟಿಕೆಟ್ ಗಾಗಿ ಪಟ್ಟು ಹಿಡಿದಿರೋ ಸುಮಲತಾ, ನನ್ನ ಸ್ಪರ್ಧೆ ಖಚಿತವೆಂದು ಮಂಡ್ಯದಲ್ಲಿ ಸ್ಪಷ್ಟಪಡಿಸಿದ್ದಾರೆ. ನನಗೆ ವಿಶ್ವಾಸ ಇವೆ. ಮಂಡ್ಯ ಬಿಜೆಪಿಗೆ ಸಿಗಲಿದೆ. ನನ್ನ ಹೋರಾಟ ಮಂಡ್ಯಕೋಸ್ಕರ. ಮಂಡ್ಯದಲ್ಲಿ ಬಿಜೆಪಿ ಸಂಘಟಿಸಲು ನನ್ನ ಹೋರಾಟ. ಪುಟ 2

## ಡಿಕೆ ಶಿವಕುಮಾರ್ ಕೈ ಸೇರಿದ 20 ಕ್ಷೇತ್ರಗಳ ಅಭ್ಯರ್ಥಿ ಪಟ್ಟಿ

# ಅಭಿಪ್ರಾಯ ಸಂಗ್ರಹ

**ಬೆಂಗಳೂರು:** ಲೋಕಸಭೆ ಚುನಾವಣೆಗೆ ಎರಡು ತಿಂಗಳು ಬಾಕಿ ಉಳಿದಿವೆ. ಎಲ್ಲ ರಾಜಕೀಯ ಪಕ್ಷಗಳು ಈಗಾಗಲೆ ಚುನಾವಣೆ ತಯಾರಿ ಆರಂಭಿಸಿವೆ. ರಾಜ್ಯದಲ್ಲೂ ಚುನಾವಣಾ ಅಖಾಡ ತಯಾರಿಯಾಗುತ್ತಿದೆ. ಎರಡು ರಾಷ್ಟ್ರೀಯ ಪಕ್ಷಗಳಾದ ಕಾಂಗ್ರೆಸ್ ಮತ್ತು ಬಿಜೆಪಿ ಹಾಗೂ ಇದರ ಮಿತ್ರ ಪಕ್ಷ ಜೆಡಿಎಸ್ ಚುನಾವಣೆಗೆ ಸಿದ್ದವಾಗುತ್ತಿದೆ. ಆದರೆ ಟಿಕೆಟ್ ಹಂಚಿಕೆ ವಿಚಾರವಾಗಿ ಎರಡೂ ರಾಷ್ಟ್ರೀಯ ಪಕ್ಷದಲ್ಲಿ ಸಾಕಷ್ಟು ಪ್ರಶ್ನೆಗಳು ಉದ್ಭವವಾಗಿವೆ. ಹಾಗೆ ತಲೆನೋವು ಆಗಿದೆ. ಆಯಾ ಕ್ಷೇತ್ರಗಳಿಗೆ ಸೂಕ್ತ ಅಭ್ಯರ್ಥಿಯನ್ನು ಕಣಕ್ಕಿಳಿಸಲು ಈಗಾಗಲೆ ಸರ್ವೆ ನಡೆದಿದ್ದು, ಪ್ರಾಥಮಿಕ ಹಂತದ ಪಟ್ಟಿ ಸಿದ್ದವಾಗಿದೆ. ಲೋಕಸಭೆ ಚುನಾವಣೆಗೆ ಅಭ್ಯರ್ಥಿಗಳನ್ನು ಕಣಕ್ಕೆ ಇಳಿಸುವ ವಿಚಾರವಾಗಿ ಕೆಪಿಸಿಸಿ ಅಧ್ಯಕ್ಷ ಡಿಕೆ ಶಿವಕುಮಾರ್ ಭಾರಿ ತಲೆಕೆಡಿಸಿಕೊಂಡಿದ್ದಾರೆ.

ಅಭ್ಯರ್ಥಿಗಳ ಪ್ರಾಥಮಿಕ ಪಟ್ಟಿ ಡಿಕೆ



ಶಿವಕುಮಾರ್ ಅವರ ಕೈ ಸೇರಿದ್ದು, ಶುಕ್ರವಾರ (ಫೆ.24) ರಂದು ನಡೆದ ತಮ್ಮ ಮನೆಯ ಕಾರ್ಯಕ್ರಮದಲ್ಲೂ ಈ ಬಗ್ಗೆ ಸಚಿವರೊಂದಿಗೆ ಚರ್ಚೆ ನಡೆಸಿದ್ದಾರೆ. ಪುಟ 2

## ಸರ್ಕಾರಿ ನೌಕರರಿಗೆ ಸಂಬಳ ನೀಡಲು ಸಿದ್ದರಾಮುಲ್ಲಾ ಖಾನ್ ಬಳಿ

# ಹಣವಿಲ್ಲ

**ಕಾರವಾರ:** ಸರ್ಕಾರಿ ನೌಕರರಿಗೆ ಸಂಬಳ ಕೊಡಲು ಸಿದ್ದರಾಮುಲ್ಲಾ ಖಾನ್ ಬಳಿ ಹಣವಿಲ್ಲ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ವಿರುದ್ಧ ಬಿಜೆಪಿ



ಸಂಸದ ಅನಂತಕುಮಾರ್ ಹೆಗಡೆ ವಾಗ್ದಾಳಿ ಮಾಡಿದ್ದಾರೆ. ಉತ್ತರ ಕನ್ನಡ ಜಿಲ್ಲೆಯ ಮುಂಡಗೋಡಿನಲ್ಲಿ ನಡೆದ ಕಾರ್ಯಕರ್ತರ ಸಭೆಯಲ್ಲಿ ಮಾತನಾಡಿದ ಅವರು, ಅಭಿವೃದ್ಧಿ ಯೋಜನೆಗಳಿಗೆ, ಶಾಸಕರಿಗೆ ಕೊಡಲು ಹಣ ಇಲ್ಲ ಅಂತಾರೆ. ಹಿಂದುಳಿದವರು, ಎಸ್ ಸಿ, ಎಸ್ ಟಿ ವರ್ಗದವರಿಗೆ ನೀಡಿದ್ದ 11 ಸಾವಿರ ಕೋಟಿ ರೂ. ನಾಪತ್ತೆಯಾಗಿದೆ. ರಾಜ್ಯ ಸರ್ಕಾರ ದಿವಾಳಿಯಾಗಿದೆ, ಮೋದಿ ಸರ್ಕಾರ ದಿವಾಳಿಯಾಗಿಲ್ಲ ಎಂದು ಹೇಳಿದರು. ಪುಟ 2

## ಕೋಲಾರದಲ್ಲಿ ನಿಸರ್ಗ ನಾರಾಯಣಸ್ವಾಮಿಗೆ

# ಮೈತ್ರಿ ಟಿಕೆಟ್?



**ಕೋಲಾರ:** ಲೋಕಸಭಾ ರಣಕಣ ದಿನದಿಂದ ದಿನಕ್ಕೆ ರಂಗೇರುತ್ತಿದೆ. ಕೋಲಾರದಲ್ಲಿ ಮೈತ್ರಿ ಅಭ್ಯರ್ಥಿ ಯಾರು ಆಗ್ಬೋದು ಅನ್ನೋ ಕುತೂಹಲವಿದೆ. ಕೋಲಾರದಲ್ಲಿ ಮಾಜಿ ಶಾಸಕ ನಿಸರ್ಗ ನಾರಾಯಣಸ್ವಾಮಿ ಕಣಕ್ಕಿಳಿಸಲು ದಳಪತಿಗಳ ಚಿಂತನೆ ನಡೆಸಿದ್ದಾರೆ ಎನ್ನಲಾಗಿದೆ.

ಕೋಲಾರ ಲೋಕಸಭಾ ಕ್ಷೇತ್ರದ ದಲಿತ ಬಲಗೈ ಸಮುದಾಯದ ಪ್ರಾಬಲ್ಯವಿರುವ ಕ್ಷೇತ್ರವಾಗಿರುವ ಹಿನ್ನೆಲೆ ಇದೇ ಸಮುದಾಯಕ್ಕೆ ಪುಟ 2

## ಒಡಹುಟ್ಟಿದ ಸಹೋದರನ ಮೇಲೆ ಪೆಟ್ರೋಲ್ ಸುರಿದು ಸಾಯಿಸಿದ ಅಣ್ಣ

# ಕಾರಿಗೆ ಕಿರಿಕ್

**ದೇವನಹಳ್ಳಿ:** ಅವರಿಬ್ಬರೂ ಒಂದೇ ತಾಯಿಯ ಹೊಟ್ಟೆಯಲ್ಲಿ ಹುಟ್ಟಿ ರಾಮ ಲಕ್ಷ್ಮಣರಂತಿದ್ದ ಅಣ್ಣ ತಮ್ಮಂದಿರು. ಆದ್ರೆ ಆ ಅಣ್ಣ ತಮ್ಮಂದಿರ ನಡುವೆ ಬಂದ ಕಾರು ಮತ್ತು ಕೋಟಿ ಕೋಟಿ ಜಮೀನು ಇದೀಗ ಸಹೋದರರನ್ನೆ ದಾಯಾದಿಗಳನ್ನಾಗಿ ಮಾಡಿದ್ದು ಸಣ್ಣ ವಿಚಾರಕ್ಕೆ ಶುರುವಾದ ಜಗಳ ಕೂಡಿ ಬೆಳೆದಿದ್ದ ಅಣ್ಣ ತಮ್ಮಂದಿರ ನಡುವೆ ಕೊಳ್ಳಿಯಿಟ್ಟಿಸಿದೆ. ಅದು ಯಾಕೆ ಅನ್ನೋದನ್ನ ನೀವೆ ನೋಡಿ. ಗ್ರಾಮದ ತುಂಬಾ ನೀರವ ಮೌನ ಆವರಿಸಿದೆ. ಜನರಿಂದ ತುಂಬಿದ್ದ ಮನೆಯಲ್ಲಿ ಇದೀಗ ಸೂತಕದ ಛಾಯೆ ಕವಿದಿದ್ದು ಮನೆ ಮಕ್ಕಳಲ್ಲೆ ಶೋಕಸಾಗರದಲ್ಲಿ ಮುಳುಗಿದ್ದಾರೆ. ಇನ್ನು ಸ್ಥಳಕ್ಕೆ ಬಂದ ಪೊಲೀಸರು ಎರಡೂ ಕಡೆಯವರನ್ನ ನಿಭಾಯಿಸಲು ಹರಸಾಹಸ ಪಟ್ಟಿದ್ದು ನೊಂದು ಬೆಂದಿದ್ದ ಮೃತದೇಹಕ್ಕೆ ಮುಕ್ತಿ ಕೊಡಿಸಲು ಹೆಣಗಾಡಿದ್ದಾರೆ. ಇನ್ನೂ ಇಷ್ಟೆಲ್ಲ ರಾದ್ಧಾಂತ ಗದ್ದಲ ಗಲಾಟೆಗೆ ಕಾರಣವಾಗಿದ್ದು ಇದೇ ಕಾರು ಅನ್ನೋದೆ ವಿಪರ್ಯಾಸ. ಪುಟ 2



ವೆಂಕಟೇಶ್



ಜಗದೀಶ್

## ದಯಾಮರಣ ಕೋರಿ ರಾಷ್ಟ್ರಪತಿ ಮತ್ತು ಸಿಎಂ ಸಿದ್ದರಾಮಯ್ಯಗೆ ಪತ್ರ ಬರೆದ

# ಪೊಲೀಸ್ ಸಿಬ್ಬಂದಿ




**ಬೆಂಗಳೂರು:** ರಾಜ್ಯ ಪೊಲೀಸ್ ಇಲಾಖೆಯಲ್ಲಿ ಸುಮಾರು ಮೂರು ವರ್ಷಗಳಿಂದ ಪತಿ-ಪತ್ನಿ ಯಾವುದೆ ಅಂತರ್ ಜಿಲ್ಲಾ ವರ್ಗಾವಣೆಯಾಗಿಲ್ಲ. ಇದರಿಂದ ನಮಗೆ ನೆಮ್ಮದಿಯಾಗಿ ಕರ್ತವ್ಯ ನಿರ್ವಹಿಸಲು ಸಾಧ್ಯವಾಗುತ್ತಿಲ್ಲವೆಂದು ಪೊಲೀಸ್ ಸಿಬ್ಬಂದಿ ದಯಾಮರಣ ಕೋರಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಮತ್ತು ರಾಷ್ಟ್ರಪತಿಗಳಿಗೆ ಪತ್ರ ಬರೆದಿದ್ದಾರೆ.

ಪತಿ ಒಂದು ಜಿಲ್ಲೆಯಲ್ಲಿ ವಾಸ, ಪತಿ ಒಂದು ಜಿಲ್ಲೆಯಲ್ಲಿ ವಾಸಿಸುತ್ತಿದ್ದಾರೆ. ಇದರಿಂದ ಗಂಡ-ಹೆಂಡತಿ ಜೊತೆಯಲ್ಲಿ ಇರಲು ಸಾಧ್ಯವಾಗುತ್ತಿಲ್ಲ. ವಿಚ್ಛೇದನ ಪ್ರಕರಣ ಕೂಡ ಹೆಚ್ಚುತ್ತಿವೆ. ಕೆಲ ಸಿಬ್ಬಂದಿ ವಯಸ್ಸಾದ ತಂದೆ ತಾಯಿಯನ್ನು ನೋಡಿಕೊಳ್ಳಬೇಕಿದೆ. ಹೀಗಾಗಿ ವರ್ಗಾವಣೆ ಕೋರಿ ಮನವಿ ಮಾಡಿದ್ದಾರೆ. ಮುಖ್ಯಮಂತ್ರಿಗಳು, ಪುಟ 2

## ವರ್ಷಾಂತ್ಯದ ವೇಳೆಗೆ ಬೆಂಗಳೂರು-ಚೆನ್ನೈ ಎಕ್ಸ್‌ಪ್ರೆಸ್‌ವೇ ಉದ್ಘಾಟನೆ

**ಬೆಂಗಳೂರು:** ಬೆಂಗಳೂರು-ಚೆನ್ನೈ ಎಕ್ಸ್‌ಪ್ರೆಸ್‌ವೇ ಮತ್ತು ಬೆಂಗಳೂರು ಸುತ್ತಮುತ್ತಲಿನ ಪಟ್ಟಣಗಳನ್ನು ಸಂಪರ್ಕಿಸುವ ರಿಂಗ್ ರಸ್ತೆಯ ಪ್ರಗತಿಯ ಬಗ್ಗೆ ಕೇಂದ್ರ ಸಾರಿಗೆ ಸಚಿವ ನಿತಿನ್ ಗಡ್ಕರಿ ಮಾಹಿತಿ ಹಂಚಿಕೊಂಡಿದ್ದಾರೆ. ಎರಡೂ ಯೋಜನೆಗಳು ಡಿಸೆಂಬರ್ 2024 ರೊಳಗೆ ಪೂರ್ಣಗೊಳ್ಳುವ ಹಾದಿಯಲ್ಲಿವೆ ಎಂದು ಹೇಳಿದ್ದಾರೆ.

ಬೆಂಗಳೂರು-ಚೆನ್ನೈ ಎಕ್ಸ್‌ಪ್ರೆಸ್‌ವೇ ಪೂರ್ಣಗೊಂಡ ನಂತರ ಎರಡು ನಗರಗಳ ನಡುವಿನ ಪ್ರಯಾಣದ ಸಮಯವನ್ನು ಕೇವಲ ಎರಡು ಗಂಟೆಗಳವರೆಗೆ ಗಮನಾರ್ಹವಾಗಿ ಕಡಿಮೆ ಮಾಡುವ ನಿರೀಕ್ಷೆಯಿದೆ. ಇದು ಸಂಪರ್ಕದಲ್ಲಿ ಗಮನಾರ್ಹ ಸುಧಾರಣೆಯಾಗಿದೆ.



ಈ ಬೆಳವಣಿಗೆಯು ದೇಶದ ಎರಡು ಪ್ರಮುಖ ಐಟಿ ಹಬ್‌ಗಳ ನಡುವಿನ ಸಂಪರ್ಕವನ್ನು ಬಲಪಡಿಸುತ್ತದೆ. ಸುಗಮ ವ್ಯಾಪಾರ ಕಾರ್ಯಾಚರಣೆಗಳನ್ನು ಸುಗಮಗೊಳಿಸುತ್ತದೆ ಮತ್ತು ಬಹುರಾಷ್ಟ್ರೀಯ ಕಂಪನಿಗಳು ಮತ್ತು ಕೈಗಾರಿಕೆಗಳ ನಡುವೆ ಹೆಚ್ಚಿದ ಸಹಯೋಗಕ್ಕೆ ದಾರಿ ಮಾಡಿಕೊಡುತ್ತದೆ ಎಂದು ನಿತಿನ್ ಗಡ್ಕರಿ ಹೇಳಿದ್ದಾರೆ. ಪುಟ 2

# ಬೈಕ್ ಟ್ಯಾಕ್ಸಿಗೆ ಕೇಂದ್ರ ಅಸ್ತು

**ಬೆಂಗಳೂರು:** ರಾಜ್ಯದಲ್ಲಿ ಬೈಕ್ ಟ್ಯಾಕ್ಸಿ ವಿರುದ್ಧ ಆಟೋ ಕ್ಯಾಬ್ ಚಾಲಕರು ಸಮರ ಸಾರಿದ್ದಾರೆ. ಈ ಹೊತ್ತಿನಲ್ಲಿ ಕೆಲ ಅಗ್ರಿಗೇಟರ್ ಕಂಪನಿಗಳು ಕೇಂದ್ರ ಸರ್ಕಾರಕ್ಕೆ ಮನವಿ ಮಾಡಿದ್ದು, ರಾಜ್ಯದಲ್ಲಿ ಬ್ಯಾನ್ ಆಗಿರುವ ಬೈಕ್ ಟ್ಯಾಕ್ಸಿಗೆ ಈಗ ಕೇಂದ್ರ ಒಪ್ಪಿಗೆ ನೀಡಿದೆ.



ವೈಟ್ ಬೋರ್ಡ್‌ನಲ್ಲಿ ಬೈಕ್ ಟ್ಯಾಕ್ಸಿ ನಡೆಸಬಹುದು. ರಾಜ್ಯ ಸಾರಿಗೆ ಇಲಾಖೆ ಅನುಮತಿ ನೀಡಬಹುದು ಎಂದು ರಾಜ್ಯ ಸಾರಿಗೆ ಇಲಾಖೆಗೆ ಕೇಂದ್ರ ಸಾರಿಗೆ ಇಲಾಖೆ ಸಲಹೆ ನೀಡಿದೆ. ಇದು ಸದ್ಯ ಆಟೋ ಕ್ಯಾಬ್ ಚಾಲಕರ ಆಕ್ರೋಶಕ್ಕೆ ಕಾರಣವಾಗಿದೆ. ರಾಜ್ಯ ಸಾರಿಗೆ ಇಲಾಖೆ ಯಾವುದೇ ಕಾರಣಕ್ಕೂ ಅನುಮತಿ ನೀಡಬಾರದು. ಒಂದು ವೇಳೆ ಅನುಮತಿ ನೀಡಿದ್ರೆ ಉಗ್ರವಾದ ಹೋರಾಟ ಮಾಡ್ತೀವಿ ಎಂದು ಚಾಲಕರು ಎಚ್ಚರಿಕೆ ಕೊಟ್ಟಿದ್ದಾರೆ. ಪುಟ 2

# ಕಡಿಮೆ ನೀರಿನಲ್ಲಿ ಬೆಳೆಗಳನ್ನು ಬೆಳೆಯಲು ರೈತರು ಮುಂದಾಗಿ



**ಮೈಸೂರು:** ಸೂಕ್ಷ್ಮ ನೀರಾವರಿ ತಾಂತ್ರಿಕತೆ ಅಳವಡಿಕೆಯಿಂದ ಕಡಿಮೆ ನೀರಿನಲ್ಲಿ ಹೆಚ್ಚಿನ ಪ್ರದೇಶದಲ್ಲಿ ಬೆಳೆಗಳನ್ನು ಬೆಳೆಯಲು ಸಾಧ್ಯ ಎಂದು ಉಪ ಕೃಷಿ ನಿರ್ದೇಶಕರಾದ ಡಾ.ಧನಂಜಯ ಬಿ.ಎನ್ ತಿಳಿಸಿದರು.

ನಾಗನಹಳ್ಳಿ ಜಿಲ್ಲಾ ಕೃಷಿ ತರಬೇತಿ ಕೇಂದ್ರದ ವತಿಯಿಂದ ಕೇಂದ್ರ ಪುರಸ್ಕೃತ ಪ್ರಧಾನಮಂತ್ರಿ ಕೃಷಿ ಸಿಂಚಾಯಿ ಯೋಜನೆಯಡಿ ನಡೆದ ?ತೆಂಗು ಮತ್ತು ಅಡಿಕೆ ಬೆಳೆಗಳಲ್ಲಿ ತಳಿ ಆಯ್ಕೆ, ಆಧುನಿಕ ಕೃಷಿ ಪದ್ದತಿಗಳು, ಸೂಕ್ಷ್ಮ ನೀರಾವರಿ ಮತ್ತು ರಸಾವರಿ ತಾಂತ್ರಿಕತೆಗಳ ಅಳವಡಿಕೆ ಮೂಲಕ ಅಧಿಕ ಲಾಭ? ಎಂಬ ಮೂರು ದಿನದ ತರಬೇತಿ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು, ಸೂಕ್ಷ್ಮ ನೀರಾವರಿ ಘಟಕಗಳಿಗೆ ಹಾಗೂ ವಿವಿಧ ಯಂತ್ರೋಪಕರಣಗಳಿಗೆ ಕೃಷಿ ಮತ್ತು ತೋಟಗಾರಿಕಾ ಇಲಾಖೆಗಳಲ್ಲಿ ಶೇಕಡ 90 ಸಹಾಯಧನ ನೀಡಲಾಗುತ್ತಿದ್ದು, ರೈತರು ಇದರ ಸದುಪಯೋಗ ಪಡೆದುಕೊಳ್ಳಬೇಕು ಎಂದರು.

ವಿಸ್ತರಣಾ ಶಿಕ್ಷಣ ಘಟಕದ ಮುಖ್ಯಸ್ಥರಾದ ಡಾ.ರಾಮಚಂದ್ರಪ್ಪ ಅವರು ಮಾತನಾಡಿ, ಇತ್ತೀಚಿನ ದಿನಗಳಲ್ಲಿ ವಾರ್ಷಿಕ ಮಳೆಯ ಪ್ರಮಾಣ ಕಡಿಮೆಯಾಗುತ್ತಿದ್ದು, ಬಿದ್ದಂತಹ ಮಳೆ ನೀರನ್ನು ವ್ಯರ್ಥವಾಗದಂತೆ ಸಂರಕ್ಷಿಸಿ ಸೂಕ್ಷ್ಮ ನೀರಾವರಿ ಪದ್ದತಿಗಳ ಅಳವಡಿಕೆಯಿಂದ ನೀರಿನ ಸದ್ಬಳಕೆ ಮಾಡುವುದು ಅವಶ್ಯಕ ಎಂದು ಹೇಳಿದರು. ಇಲವಾಲ ತೋಟಗಾರಿಕಾ ಮಹಾವಿದ್ಯಾಲಯದ ಸಹ ಪ್ರಾಧ್ಯಾಪಕರಾದ ಡಾ.ಸಿದ್ದಪ್ಪ ಅವರು ಮಾತನಾಡಿ, ತೆಂಗು ಮತ್ತು ಅಡಿಕೆ ಬೆಳೆಗಳಲ್ಲಿ ತಳಿಗಳ ಆಯ್ಕೆ, ಸಸಿಗಳ ನಾಟಿ ವಿಧಾನ ಹಾಗೂ ಮುಂಜಾಗ್ರತಾ ಕ್ರಮ ಹಾಗೂ ಆಧುನಿಕ ಕೃಷಿ ಪದ್ಧತಿಗಳ ಕುರಿತು ಮಾಹಿತಿ ನೀಡಿದರು. ಜೈನ್ ಇರಿಗೇಶನ್ ಸಿಸ್ಟಮ್ಸ್ನ ನೀರಾವರಿ ತಜ್ಞರಾದ ನಿರಂಜನ್ ಅವರು ಮಾತನಾಡಿ, ತೋಟಗಾರಿಕಾ ಬೆಳೆಗಳಲ್ಲಿ ಹನಿ ನೀರಾವರಿ ಪದ್ಧತಿಗಳ ಅಳವಡಿಕೆ, ನಿರ್ವಹಣೆ, ರಸಾವರಿ ಪದ್ಧತಿಗಳು, ಎಚ್ಚರಿಕೆ ಕ್ರಮಗಳು, ಸಮಸ್ಯೆ ಹಾಗೂ ಪರಿಹಾರಗಳ ಕುರಿತು ತಿಳಿಸಿದರು.

ತರಬೇತಿ ಕಾರ್ಯಕ್ರಮದ ಅಂಗವಾಗಿ ಎರಡನೇ ದಿನ ಗೋಪಾಲಪುರದ ದಿಲೀಪ್ ಮತ್ತು ಹುಯಿಲಾಳಿನ ಅವಿನಾಶ್ ಇವರ ಜಮೀನಿನಲ್ಲಿ ಕ್ಷೇತ್ರ ಭೇಟಿ ಹಮ್ಮಿಕೊಂಡು ಸಮಗ್ರ ಕೃಷಿ ಪದ್ದತಿ, ಸಾವಯವ ಕೃಷಿ, ಬೆಳಕಿನ ಬೇಸಾಯ, ಹನಿ ತುಂತುರು ನೀರಾವರಿ ಘಟಕಗಳ ಅಳವಡಿಕೆಯನ್ನು ಪ್ರಾಯೋಗಿಕವಾಗಿ ತಿಳಿಸಲಾಯಿತು.

ಮೂರನೇ ದಿನ ಮಂಡ್ಯ ವಲಯದ ಕೃಷಿ ಸಂಶೋಧನಾ ಕೇಂದ್ರದ ಸಹ ಪ್ರಾಧ್ಯಾಪಕರಾದ ಡಾ.ಅನಂತಕುಮಾರ್ ಎಂ.ಎ ಅವರು ತೆಂಗು ಮತ್ತು ಅಡಿಕೆ ಬೆಳೆಗಳ ಸಮಗ್ರ ಪೋಷಕಾಂಶ ನಿರ್ವಹಣೆ ಹಾಗೂ ರಸಾವರಿ ಮೂಲಕ ಇಳುವರಿ ಹೆಚ್ಚಿಸುವ ತಾಂತ್ರಿಕತೆಗಳ ಕುರಿತು ವೈಜ್ಞಾನಿಕ ಮಾಹಿತಿ ನೀಡಿದರು.

ನಾಗನಹಳ್ಳಿಯ ವಿಸ್ತರಣಾ ಶಿಕ್ಷಣ ಘಟಕದ ತಜ್ಞೆ ಡಾ.ಪುಷ್ಪ ಆರ್.ಎನ್ ಅವರು ತೆಂಗು ಮತ್ತು ಅಡಿಕೆ ಬೆಳೆಗಳಲ್ಲಿ ಕೀಟ ರೋಗಗಳ ಲಕ್ಷಣಗಳು ಅವುಗಳ ನಿರ್ವಹಣೆ ಕುರಿತು ವೈಜ್ಞಾನಿಕ ಮಾಹಿತಿ ನೀಡಿದರು.

ವರಕೋಡು ಗ್ರಾಮದ ಪ್ರಗತಿಪರ ರೈತರಾದ ಪೃಥ್ವಿರಾಜ್ ಡಿ.ವಿ ರವರು ಸಾವಯವ ಕೃಷಿ ಪದ್ಧತಿಗಳ ಕುರಿತು ಅನುಭವ ಹಂಚಿಕೊಂಡರೆ, ಆರ್ಥಿಕ ಸಲಹಾಗಾರರಾದ ವೆಂಕಟೇಶ್ ಡಿ.ಟಿ ರವರು ಆರ್ಥಿಕ ಸಾಕ್ಷರತೆ, ಬ್ಯಾಂಕ್ ವ್ಯವಹಾರಗಳ ಕುರಿತು ಮಾಹಿತಿ ಹಂಚಿಕೊಂಡರು.

ಕಾರ್ಯಕ್ರಮದಲ್ಲಿ ಸಹಾಯಕ ಕೃಷಿ ನಿರ್ದೇಶಕಿಯರಾದ ಮಮತಾ ಎಸ್.ಬಿ, ಮಧುಲತಾ ಹೆಚ್.ಬಿ ಹಾಗೂ ವಜ್ರೇಶ್ವರಿ ಎಸ್.ಕುಲಕರ್ಣಿ ಮತ್ತು ರೈತರು, ರೈತ ಮಹಿಳೆಯರು ಸೇರಿದಂತೆ ಮತ್ತಿತ್ತರರು ಉಪಸ್ಥಿತರಿದ್ದರು.

## ದೇವರಾಜ ಅರಸು, ಶಿವಕುಮಾರ ಸ್ವಾಮಿಗಳಿಗೆ ಭಾರತರತ್ನ ನೀಡಬೇಕು

**ಮೈಸೂರು:** ಮಾಜಿ ಮುಖ್ಯಮಂತ್ರಿ ಡಿ.ದೇವರಾಜ ಅರಸು ಮತ್ತು ಧಾರ್ಮಿಕ ನಾಯಕ ಸಿದ್ಧಗಂಗಾ ಮಠದ ಶಿವಕುಮಾರ ಸ್ವಾಮೀಜಿ ಅವರಿಗೆ ಭಾರತರತ್ನ (ಮರಣೋತ್ತರ) ಪ್ರಶಸ್ತಿ ನೀಡಬೇಕು ಎಂದು ವಿಧಾನಪರಿಷತ್ ಸದಸ್ಯ ಎಚ್. ವಿಶ್ವನಾಥ್ ಒತ್ತಾಯಿಸಿದರು. ಸುದ್ದಿಗೋಷ್ಠಿಯನ್ನುದ್ದೇಶಿಸಿ ಮಾತನಾಡಿದ ಅವರು, ಈ ವಿಚಾರದ ಕುರಿತು ರಾಜ್ಯ ಸರ್ಕಾರ ಕೇಂದ್ರಕ್ಕೆ ಶಿಫಾರಸು ಮಾಡಬೇಕು. ರಾಜ್ಯದ ಶಾಸಕರು ಮತ್ತು ಸಂಸದರು ದನಿಗೂಡಿಸಬೇಕು ಎಂದು ಆಗ್ರಹಿಸಿದರು. ಯಾವುದೇ ರಕ್ತಪಾತವಿಲ್ಲದೇ 21 ಲಕ್ಷ ಎಕರೆ ಭೂಮಿಯನ್ನು ಉಳುವವರಿಗೇ ಕೊಟ್ಟು ಶಾಶ್ವತವಾಗಿ ಅನ್ನ ನೀಡಿದವರು. ಐತಿಹಾಸಿಕ ಭೂ ಸುಧಾರಣೆ ಕಾಯ್ದೆ ಮೂಲಕ ಉಳ್ಳವರಿಂದ ಇಲ್ಲದವರಿಗೆ ಭೂಮಿ ಕೊಡಿಸಿದ ಅಭಿವೃದ್ಧಿಯ ಹರಿಕಾರ ಅರಸು. ಹಲವಾರು ಹಾಸ್ಟೆಲ್‌ಗಳನ್ನು ಸ್ಥಾಪಿಸಿ ಮಕ್ಕಳಿಗೆ ಶಾಶ್ವತವಾಗಿ ಅಕ್ಷರ ಕೊಟ್ಟವರು. ಹಾವನೂರು ವರದಿ ಮೂಲಕ ಒಕ್ಕಲಿಗ ಮತ್ತು ವೀರಶೈವ ಲಿಂಗಾಯತ ಸಮಾಜದವರು ಸೇರಿದಂತೆ ಎಲ್ಲ ವರ್ಗದವರಿಗೂ ಮೀಸಲಾತಿ ಕೊಟ್ಟವರು ಎಂದು ಅರಸು ಅವರನ್ನು ಸ್ಮರಿಸಿದರು. ಇದೇ ಸಂದರ್ಭದಲ್ಲಿ ರಾಜ್ಯಕ್ಕೆ ಅಪಾರ ಕೊಡುಗೆ ನೀಡಿದ ಹಾಗೂ ಸ್ವಾತಂತ್ರ್ಯ ಪೂರ್ವದಿಂದಲೂ ರಾಜ್ಯದ ಜನತೆಗೆ ಉತ್ತಮ ಆಡಳಿತ ನೀಡಿದ ಮೈಸೂರಿನ ಯದುವಂಶದ ಅರಸರಿಗೂ ಭಾರತರತ್ನ ಕೊಡಬೇಕಾಗಿತ್ತು? ಎಂದರು.



## ಮುಖ್ಯಮಂತ್ರಿಗೆ ಪತ್ರ



**ಮೈಸೂರು:** ಬಡವರ ಮೇಲೆ ಹೊರೆಯಾದ ಛಾಪ ಕಾಗದ (ಬಾಂಡ್ ಪೇಪರ್ ) ದರ ಹೆಚ್ಚಳ ಮಾಡಿದ್ದು ಸರ್ಕಾರ ಕೂಡಲೇ ಹೊಸದರವನ್ನು ಹಿಂಪಡೆದು, ಹಳೆ ದರದ ಪದ್ಧತಿಯನ್ನು ಮುಂದುವರೆಸಿ ಅಗ್ಗದರದಲ್ಲಿ ಸಿಗುವ ಹಾಗೆ ಚಾಪಾಕಾಗದ (ಬಾಂಡ್ ಪೇಪರ್ ) ವ್ಯವಸ್ಥೆ ಮಾಡಬೇಕು ಎಂದು ಅಖಿಲ ಭಾರತೀಯ ಗ್ರಾಹಕ ಪಂಚಾಯತ್ ಮೈಸೂರು ಘಟಕದ ಅಧ್ಯಕ್ಷರಾದ ಸಿ ಎಸ್ ಚಂದ್ರಶೇಖರ್ ಮನವಿ ಮಾಡಿದ್ದಾರೆ.

ನಗರದ ಚಾಮುಂಡಿಪುರಂನಲ್ಲಿರುವ ಅಪೂರ್ವ ಹೋಟೆಲ್ ಸಭಾಂಗಣದಲ್ಲಿ ನಡೆದ ಗ್ರಾಹಕರ ಹಿತರಕ್ಷಣ ಸಭೆಯಲ್ಲಿ ಸರ್ಕಾರದ ಛಾಪಾಕಾಗದ ಪರಿಷ್ಕೃತ ದರವನ್ನು ಹಿಂಪಡೆಯುವಂತೆ ಒತ್ತಾಯಿಸಲು ತೀರ್ಮಾನಿಸಲಾಯಿತು ಬಳಿಕ ಮಾತನಾಡಿದ ಅಖಿಲ ಭಾರತೀಯ ಗ್ರಾಹಕ ಪಂಚಾಯತ್ ಮೈಸೂರು ಘಟಕದ ಅಧ್ಯಕ್ಷರಾದ ಸಿ ಎಸ್ ಚಂದ್ರಶೇಖರ್ ರೈತರು, ಶಾಲಾ ಮಕ್ಕಳು, ಜನಸಾಮಾನ್ಯರು, ಕೂಲಿ ಕಾರ್ಮಿಕರು, ವ್ಯಾಪಾರಸ್ಥರು, ಸೇರಿದಂತೆ ಎಲ್ಲರೂ ಕರಾರು ಪತ್ರ, ಕೋರ್ಟ್ ಅಫಿಡವಿಟ್, ಜಾತಿ ಪ್ರಮಾಣ ಪತ್ರ ಸಣ್ಣ ಹಿಡುವಳಿದಾರರ ಪ್ರಮಾಣ ಪತ್ರ ಹೀಗೆ ಹಲವು ಕೆಲಸಗಳಿಗೆ 20, 50, 100, ರೂಪಾಯಿ ದರದಲ್ಲಿ ಚಾಪಾ ಕಾಗದ ಪತ್ರ (ಬಾಂಡ್ ಪೇಪರ್) ಸಿಗುತ್ತಿದ್ದವು. ಬಡವರಿಗೆ ಹಾಗೂ ಕೂಲಿ ಕಾರ್ಮಿಕರಿಗೆ ಈಗ ಮಾಡಿರುವ ನೂತನ. ದರ 100, 500, ಮುಖಬೆಲೆಯ ಚಾಪಾ ಕಾಗದ ಪತ್ರಗಳಿಂದ ಹೆಚ್ಚಿನ ಹೊರೆಯಾಗಿದೆ. 10ಪಟ್ಟು ಏರಿಕೆ ಮಾಡಿದ್ದು ಸರಿಯಲ್ಲ. ಈ ದರವನ್ನು ಸರ್ಕಾರ ಏಕಾಏಕಿ ಇಷ್ಟೊಂದು ಮಟ್ಟದಲ್ಲಿ ಏರಿಕೆ ಮಾಡಿರುವುದು ಪ್ರಥಮ ಬಾರಿಗೆ. ಇಷ್ಟೊಂದು ಹೆಚ್ಚಿನ ದರದಲ್ಲಿ ಚಾಪಾ ಕಾಗದ ಪತ್ರ (ಬಾಂಡ್ ಪೇಪರ್) ಮಾಡಿರುವುದು ಸರಿಯಲ್ಲ. ಬಡವರ ಮೇಲೆ ಹೊರೆಯಾಗುತ್ತದೆ. ತಕ್ಷಣವೇ ಹಳೆಯ ದರ ಪದ್ಧತಿಯನ್ನು ಜಾರಿಗೆ ತರಬೇಕು ಎಂದು ಗ್ರಾಹಕರ ಹಿತ ದೃಷ್ಟಿಯಿಂದ ಸರ್ಕಾರಕ್ಕೆ ಮನವಿ ಮಾಡಲಾಯಿತು. ಅಖಿಲ ಭಾರತೀಯ ಗ್ರಾಹಕ ಪಂಚಾಯತ್ ಮೈಸೂರು ಘಟಕದ ಪ್ರಧಾನ ಕಾರ್ಯದರ್ಶಿ ವಿಕ್ರಮ ಅಯ್ಯಂಗಾರ್, ಸಂಚಾಲಕರಾದ ದಯಾನಂದ್, ಅಪೂರ್ವ ಸುರೇಶ್ ,ಅಜಯ್ ಶಾಸ್ತ್ರಿ, ಸತೀಶ್, ಮೈಲಾ ವಿಜಯ್ ಕುಮಾರ್, ನಂಜುಂಡ, ಸರ್ವಮಂಗಳ, ಭಾಗ್ಯಶ್ರೀ ಹಾಗೂ ಇನ್ನಿತರರು ಸಭೆಯಲ್ಲಿ ಭಾಗವಹಿಸಿದ್ದರು.

# ಮಾನವೀಯ ಮೂರ್ತಿ ಗಾಂಧೀಜಿ

## ಗಾಂಧಿಯ ಪ್ರತಿ ಹೆಜ್ಜೆಯಲ್ಲೂ ಕಸ್ತೂರಬಾ ಇದ್ದರು: ಸಾಹಿತಿ ಬನ್ನೂರು ರಾಜು

**ಮೈಸೂರು:** ಅಹಿಂಸೆಯ ಅಸ್ತ್ರ ಮಾತ್ರದಿಂದಲೇ ನಮ್ಮಭಾರತಕ್ಕೆ ಸ್ವಾತಂತ್ರ್ಯ ತಂದು ಕೊಟ್ಟು ಇಡೀ ವಿಶ್ವವೇ ವಿಸ್ಮಯ ಗೊಳ್ಳುವಂತೆ ಮಾಡಿದ್ದ ಅಹಿಂಸಾವಾದಿ ಮಾನವೀಯ ಮೂರ್ತಿ ರಾಷ್ಟ್ರಪಿತ ಮಹಾತ್ಮಗಾಂಧಿಯ ಪ್ರತಿ ನೋವಿನಲ್ಲೂ, ಪ್ರತಿಯೊಂದು ಹೆಜ್ಜೆಯಲ್ಲೂ ಅವರ ಮಡದಿ ರಾಷ್ಟ್ರಮಾತೆ ಕಸ್ತೂರಬಾ ಇದ್ದರೆಂದು ಸಾಹಿತಿ ಬನ್ನೂರು ಕೆ.ರಾಜು ಹೇಳಿದರು.

ತಾಲೂಕಿನ ಕೇರ್ಗಳ್ಳಿಯ ಕಸ್ತೂರ ಬಾ ಗಾಂಧಿ ಬಾಲಿಕಾ ಸರ್ಕಾರಿ ವಸತಿ ವಿದ್ಯಾಲಯದಲ್ಲಿ ಮೈಸೂರು ನಗರದ ಹಿರಣ್ಮಯಿ ಪ್ರತಿಷ್ಠಾನ ಮತ್ತು ಕಾವೇರಿ ಬಳಗ ಸಂಯುಕ್ತವಾಗಿ ಹಮ್ಮಿಕೊಂಡಿದ್ದ ಕಸ್ತೂರಬಾ ಗಾಂಧಿ ಪುಣ್ಯ ಸ್ಮರಣೆ ಕಾರ್ಯ ಕ್ರಮವನ್ನು ಕಸ್ತೂರಬಾ ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡುವ ಮೂಲಕ ಉದ್ಘಾಟಿಸಿ ಮಾತನಾಡಿದ ಅವರು, ಮಹಾತ್ಮಗಾಂಧಿ ಎಂಬ ಉಜ್ವಲವಾದ ಅಹಿಂಸಾಜ್ಯೋತಿ ಭಾರತವನ್ನು ಪ್ರಖರವಾಗಿ ಬೆಳಗಲು ಚೈತನ್ಯ ಶಕ್ತಿಯಾಗಿ ಮಡದಿ ಕಸ್ತೂರಬಾ ಅವರು ಗಾಂಧಿಯೊಡನೆ ಇಲ್ಲದೇ ಹೋಗಿದ್ದರೆ 'ಗಾಂಧಿ' ಎಂಬ ಶಾಂತಿದೂತ 'ಮಹಾತ್ಮ' ಆಗಲು ಸಾಧ್ಯವಿರಲಿಲ್ಲವೆಂದರು.

ಮಹಾತ್ಮ ಗಾಂಧಿ ಕುರಿತಂತೆ ಜಗತ್ಪ್ರಸಿದ್ಧ ವಿಜ್ಞಾನಿ ಆಲ್ಬರ್ಟ್ ಐನ್ ಸ್ಟೀನ್ ಅವರು ಈ ಭೂಮಿಯ ಮೇಲೆ ಗಾಂಧಿಯಂತಹ ವ್ಯಕ್ತಿಯೊಬ್ಬ ನಡೆದಿದ್ದನೆಂದರೆ ಮುಂದಿನ ಪೀಳಿಗೆ ನಂಬಲಾರದು ಎಂದಿದ್ದರು. ಆದರೆ ವಾಸ್ತವವಾಗಿ ಅಲ್ಲಿ ಗಾಂಧಿ ಒಬ್ಬರೇ ನಡೆಯಲಿಲ್ಲ. ಕಸ್ತೂರಬಾ ಅವರು ಪತಿ ಗಾಂಧಿಯ ಜೊತೆ ಅವರ ನೆರಳಾಗಿ ಅದೇ ಹಾದಿಯಲ್ಲಿ ಅವರ ಹೆಜ್ಜೆಗೆ ಹೆಜ್ಜೆ ಹಾಕಿ ಜೊತೆಜೊತೆಯಲ್ಲಿ ನಡೆದಿದ್ದಾರೆ. ಗಾಂಧಿ ಅನುಭವಿಸಿದ ನೋವನ್ನು, ಯಾತನೆಯನ್ನು ಸ್ವತಃ ಕಸ್ತೂರಬಾ ಕೂಡ ಅನುಭವಿಸಿದ್ದಾರೆ.ಈ ದಿಶೆಯಲ್ಲಿ ಗಾಂಧಿಗೆ ದೊರೆತ ಎಲ್ಲಾ ರೀತಿಯ ಗೌರವಕ್ಕೆ, ಮನ್ನಣೆಗೆ ಕಸ್ತೂರಬಾ ಕೂಡ ಅರ್ಹರು. ಇಡೀ ದೇಶಕ್ಕೆ ಜೀವವಾಗಿದ್ದ, ಗುರುವಾಗಿದ್ದ ಮಹಾತ್ಮ ಗಾಂಧಿಗೇ ಮಹಾಜೀವವಾಗಿ ಮಹಾ ಗುರುವಾಗಿದ್ದವರು ಕಸ್ತೂರಬಾ ಗಾಂಧಿ ಎಂದ ಬನ್ನೂರು ರಾಜು ಅವರು, ವಿಪರ್ಯಾಸ ಎಂದರೆ ಗಾಂಧಿ ಯ ಬಗ್ಗೆ ದೇಶ ಮತ್ತು ವಿಶ್ವದ ತುಂಬಾ ಬೇಕಾದಷ್ಟು ಮಾಹಿತಿ ತುಂಬಿ ತುಳುಕುತ್ತಿದೆಯಾದರೂ ಕಸ್ತೂರಬಾ ಬಗ್ಗೆ ಹೆಚ್ಚು ಮಾಹಿತಿ ಲಭ್ಯವಿಲ್ಲ. ಚರಿತ್ರೆಯಲ್ಲಿ ಭಾರತ ಮತ್ತು ಜಗತ್ತು ಕಸ್ತೂರಬಾ ಅವರಿಗೆ ನ್ಯಾಯ ದೊರಕಿಸಿಲ್ಲ ಎಂದು ವಿಷಾದಿಸಿದರು.



ಪ್ರಧಾನ ಭಾಷಣಕಾರರಾಗಿ ಆಗಮಿಸಿದ್ದ ಖ್ಯಾತ ಸಂಖ್ಯಾ ಶಾಸ್ತ್ರಜ್ಞ ಎಸ್.ಜಿ.ಸೀತಾರಾಮ್ ಅವರು ಕಸ್ತೂರಬಾ ಗಾಂಧಿಯ ಬದುಕು, ಸಾಧನೆ, ಸಿದ್ದಿಯನ್ನು ಕುರಿತಂತೆ ಬಹಳ ಸರಳವಾಗಿ ಸವಿವರವಾಗಿ ವಿದ್ಯಾರ್ಥಿಗಳಿಗೆ ಸುಲಭವಾಗಿ ಅರ್ಥವಾಗುವಂತೆ ತಿಳಿಸಿಕೊಟ್ಟರು. ಕಾವೇರಿ ಬಳಗದ ಅಧ್ಯಕ್ಷೆ ಹಾಗೂ ವಿಶ್ರಾಂತ ಶಿಕ್ಷಕಿ ಗಾಯಕಿ ಎನ್. ಕೆ. ಕಾವೇರಿಯಮ್ಮ ಅವರು ಕಸ್ತೂರಬಾ ಗಾಂಧಿ ಮತ್ತು ಮಹಾತ್ಮ ಗಾಂಧಿ ಅವರುಗಳ ಬಗ್ಗೆ ಸುಶ್ರಾವ್ಯವಾಗಿ ಗೀತಾ ಗಾಯನ ಕಾರ್ಯಕ್ರಮ ನಡೆಸಿಕೊಟ್ಟರು.

ಇದೇ ವೇಳೆ ಕಸ್ತೂರಬಾ ಗಾಂಧಿಯ ಪುಣ್ಯ ಸ್ಮರಣೆಯ ಅಂಗವಾಗಿ ವಿದ್ಯಾರ್ಥಿನಿಯರಿ ಗಾಗಿ ವಿವಿಧ ಸ್ಪರ್ಧೆಗಳನ್ನು ಏರ್ಪಡಿಸಲಾಗಿತ್ತು. ಕಸ್ತೂರಬಾ ಕುರಿತ ಭಾಷಣ ಸ್ಪರ್ಧೆಯಲ್ಲಿ 8ನೇ ತರಗತಿಯ ಮಾನಸ (ಪ್ರ), ಯಶಸ್ವಿನಿ (ದ್ವಿ), ಸಾವಿತ್ರಿ ಬಾಪುಲೆ ಕುರಿತ ಭಾಷಣ ಸ್ಪರ್ಧೆಯಲ್ಲಿ ನವ್ಯಶ್ರೀ (ಪ್ರ), ಪ್ರಿಯಾ (ದ್ವಿ) ಕಿತ್ತೂರು ರಾಣಿ ಚೆನ್ನಮ್ಮ ಚಿತ್ರಕಲೆಯಲ್ಲಿ 7ನೇ ತರಗತಿಯ ವಸುಂಧರ (ಪ್ರ), ಸಂಧ್ಯಾ (ದ್ವಿ), ಒನಕೆ ಓಬವ್ವ ಚಿತ್ರಕಲೆಯಲ್ಲಿ ಪೂರ್ವಿಕ (ಪ್ರ), ಸ್ಪಂದನ(ದ್ವಿ), ಭಕ್ತಿಗೀತೆಯಲ್ಲಿ 6ನೇ ತರಗತಿಯ ಕವಿತಾ (ಪ್ರ), ರಮ್ಯಾ(ದ್ವಿ), ದೇಶಭಕ್ತಿ ಗಾಯನದಲ್ಲಿ 8ನೇ ತರಗತಿಯ ಸೋನಿಯಾ (ಪ್ರ), ದಿವ್ಯ (ದ್ವಿ), ರಂಗೋಲಿ ಸ್ಪರ್ಧೆ ಯಲ್ಲಿ 7ನೇ ತರಗತಿಯ ಸೌಜನ್ಯ (ಪ್ರ), ರಮ್ಯಾ (ತೃ)ಬಹುಮಾನ ಗಳಿಸಿದರು. ಇವರೆಲ್ಲರಿಗೂ ಹಿರಣ್ಮಯಿ ಪ್ರತಿಷ್ಠಾನದ ಅಧ್ಯಕ್ಷ ಎ.ಸಂಗಪ್ಪ ಬಹುಮಾನ ವಿತರಿಸಿದರು. ಹಾಗೂ 8ನೇ ತರಗತಿಯ ಮಾನಸ ಅವರಿಗೆ ಶಾಲೆಯ ಅತ್ಯುತ್ತಮ ವಿದ್ಯಾರ್ಥಿನಿ ಎಂಬ ಪ್ರಶಸ್ತಿ ನೀಡಿ ಗೌರವಿಸಲಾಯಿತು.

ಲೇಖಕಿ ಹಾಗೂ ಕಲಾವಿದೆ ಡಾ.ಜಮುನಾ ರಾಣಿ ಮಿರ್ಲೆ ಅಧ್ಯಕ್ಷತೆ ವಹಿಸಿ ಮಾತನಾಡಿದರು. ಶಾಲೆಯ ಮುಖ್ಯ ಶಿಕ್ಷಕಿ ಅಂಬಿಕಾ, ಶಿಕ್ಷಕಿಯರಾದ ಕೆ.ಬಿ. ಗೀತಾ,ಎಂ. ಸುಚಿತ್ರಾ, ವಿ.ಪದ್ಮಾ, ಎಂ.ರೂಪಾ, ನಿಲಯಪಾಲಕಿ ಹೆಚ್. ಕೆ. ಸೌಮ್ಯ, ಲೆಕ್ಕ ಸಹಾ ಯಕಿ ಅಪರ್ಣ, ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಮುಖ್ಯಶಿಕ್ಷಕಿ ಕಲ್ಪನಾ, ಪತ್ರಕರ್ತ ಹೊಮ್ಮ ಮಂಜುನಾಥ್, ಕಿಶೋರ್ ಇನ್ನಿತರರಿದ್ದರು. ಪ್ರಾರಂಭದಲ್ಲಿ ಶಿಕ್ಷಕಿ ಸುಚಿತ್ರಾ ಎಲ್ಲರನ್ನೂ ಆತ್ಮೀಯವಾಗಿ ಸ್ವಾಗತಿಸಿದರೆ, ಕೊನೆಯಲ್ಲಿ ಶಿಕ್ಷಕಿ ಅಪರ್ಣಾ ವಂದನಾರ್ಪಣೆ ಮಾಡಿದರು.ಕಾರ್ಯಕ್ರಮವನ್ನು ಶಿಕ್ಷಕಿ ಕೆ.ಬಿ. ಗೀತಾ ಅಚ್ಚುಕಟ್ಟಾಗಿ ನಿರ್ವಹಿಸಿದರು.

## ಮಾ.5 ರಂದು ಬಹಿರಂಗ ಹರಾಜು

**ರಾಮನಗರ:** ಅಗತ್ಯ ವಸ್ತುಗಳ ಕಾಯ್ದೆಯಡಿ ತಾಲ್ಲೂಕಿನಲ್ಲಿ ವಿವಿಧ ಪ್ರಕರಣಗಳಲ್ಲಿ ವಶಪಡಿಸಿಕೊಂಡಿರುವ ಅಕ್ಕಿ ದಾಸ್ತಾನನ್ನು ಇದೇ ಮಾರ್ಚ್ 5 ರಂದು ಬೆಳಿಗ್ಗೆ 11 ಗಂಟೆಗೆ ಬಿ.ಎಂ ರಸ್ತೆ ಕಬ್ಬಾಳಮ್ಮ ವೇ ಬ್ರಿಡ್ಜ್ ಹಿಂಬಾಗದಲ್ಲಿರುವ ಎಸ್.ಡಬ್ಲ್ಯೂ.ಸಿ (ಟಿ.ಎ.ಪಿ.ಸಿ.ಎಮ್.ಎಸ್ ಲಗತ್ತು ಕೆ.ಎಫ್.ಸಿ.ಎಸ್.ಸಿ) ಆಹಾರ ಸಗಟು ಮಳಿಗೆಯಲ್ಲಿ ಬಹಿರಂಗ ಹರಾಜು ನಡೆಸಲಾಗುವುದು. 133.21 ಕ್ವಿಂಟಾಲ್ ಅಕ್ಕಿ ಮತ್ತು 25.16 ಕ್ವಿಂಟಾಲ್ ಅಕ್ಕಿಯನ್ನು ಹಾಗೂ ಅದೇ ದಿನ ಮಧ್ಯಾಹ್ನ 1 ಗಂಟೆಗೆ ಜಾನಪದ ಲೋಕದ ಎದುರಿರುವ ಕೆ.ಎಫ್.ಸಿ.ಎಸ್.ಸಿ ಆಹಾರ ಸಗಟು ಮಳಿಗೆಯಲ್ಲಿ 27.40 ಕ್ವಿಂಟಾಲ್ ಅಕ್ಕಿ ಮತ್ತು 17.30 ಕ್ವಿಂಟಾಲ್ ಅಕ್ಕಿಯನ್ನು ಪ್ರತ್ಯೇಕವಾಗಿ ಷರತ್ತುಗಳಿಗೆ ಒಳಪಟ್ಟು ತಹಶೀಲ್ದಾರ್ ಅಥವಾ ಅವರಿಂದ ಅಧಿಕಾರ ಪಡೆದವರು ಸಾರ್ವಜನಿಕ ಬಹಿರಂಗ ಹರಾಜು ನಡೆಸುತ್ತಿದ್ದು ಆಸಕ್ತಿದಾರರು ಹರಾಜಿನಲ್ಲಿ ಭಾಗವಹಿಸಬಹುದಾಗಿದೆ. ಹೆಚ್ಚಿನ ಮಾಹಿತಿಗೆ ತಾಲ್ಲೂಕು ಕಚೇರಿಯನ್ನು ಸಂಪರ್ಕಿಸುವಂತೆ ಚನ್ನಪಟ್ಟಣ ತಾಲ್ಲೂಕು ತಹಶೀಲ್ದಾರರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಯಶಸ್ವಿನಿ ಯೋಜನೆಯ ನೋಂದಣಿ ಮತ್ತು ನವೀಕರಣ

**ಮಂಡ್ಯ:** 2023-24ನೇ ಸಾಲಿಗೆ ಯಶಸ್ವಿನಿ ಯೋಜನೆಯಲ್ಲಿ ಸದಸ್ಯರಾಗಲು ಮತ್ತು ನವೀಕರಣಗೊಳಿಸಲು ಫೆಬ್ರವರಿ 29 ರವರೆಗೆ ಕಾಲಾವಕಾಶ ಕಲ್ಪಿಸಲಾಗಿದೆ. 2022-23 ರಲ್ಲಿ ಈಗಾಗಲೇ ಯಶಸ್ವಿನಿ ಯೋಜನೆಯಲ್ಲಿ ನೋಂದಣಿಯಾಗಿರುವ ಸಂಘದಲ್ಲಿಯೇ ನವೀಕರಣಗೊಳಿಸಲು ಗ್ರಾಮಾಂತರ ಪ್ರದೇಶದಲ್ಲಿ ಪ್ರಧಾನ ಅರ್ಜಿದಾರ ಸೇರಿ 4 ಜನರಿಗೆ 500 ರೂ ಗಳು ಅದಕ್ಕಿಂತ ಹೆಚ್ಚಾದ ಒಬ್ಬ ವ್ಯಕ್ತಿಗೆ ತಲಾ 100 ರೂ ರಂತೆ ಹಾಗೂ ನಗರ ಪ್ರದೇಶಕ್ಕೆ 4 ಜನರಿಗೆ 1000 ರೂ ಗಳು ನಾಲ್ಕಕ್ಕಿಂತ ಒಬ್ಬ ವ್ಯಕ್ತಿ ಹೆಚ್ಚಾದಲ್ಲಿ 200 ರೂ ಗಳನ್ನು ಹೆಚ್ಚಿಗೆ ನೋಂದಣಿ ಶುಲ್ಕ ಪಾವತಿಸಿ ನವೀಕರಣ ಮಾಡಿಸಿಕೊಳ್ಳಬಹುದಾಗಿದೆ. ಪ್ರಸಕ್ತ ವರ್ಷದಲ್ಲಿ ಹೊಸದಾಗಿ ಯೋಜನೆಗೆ ಸದಸ್ಯರಾಗಲು ಯಾವುದೇ ಸಹಕಾರ ಸಂಘ/ ಸೌಹಾರ್ದ/ ಸ್ವಸಹಾಯ ಗುಂಪುಗಳಲ್ಲಿ ಸದಸ್ಯರಾಗಿ 3 ತಿಂಗಳು ಕಳೆದಿದ್ದು, ಗ್ರಾಮಾಂತರ ಪ್ರದೇಶಕ್ಕೆ ಪ್ರಧಾನ ಅರ್ಜಿದಾರ ಸೇರಿ 4 ಜನಕ್ಕೆ 500 ರೂ ಗಳು ಅದಕ್ಕಿಂತ ಹೆಚ್ಚಾದ ಒಬ್ಬ ವ್ಯಕ್ತಿಗೆ ತಲಾ 100 ರೂ ರಂತೆ ಹಾಗೂ ನಗರ ಪ್ರದೇಶಕ್ಕೆ 4 ಜನರಿಗೆ 1000 ರೂ ಗಳು ನಾಲ್ಕಕ್ಕಿಂತ ಒಬ್ಬ ವ್ಯಕ್ತಿ ಹೆಚ್ಚಾದಲ್ಲಿ ತಲಾ 200 ರೂಗಳನ್ನು ಹೆಚ್ಚಿಗೆ ನೋಂದಣಿ ಶುಲ್ಕ ಪಾವತಿಸಿ ನೋಂದಾಯಿಸಿಕೊಳ್ಳುವುದು. ಪ. ಜಾತಿ ಮತ್ತು ಪರಿಶಿಷ್ಟ ಪಂಗಡ ಸದಸ್ಯರ ನೋಂದಣಿ ಶುಲ್ಕ ಮತ್ತು ನವೀಕರಣ ಶುಲ್ಕವನ್ನು ಸರ್ಕಾರವೇ ಭರಿಸುತ್ತದೆ. ಯಶಸ್ವಿನಿ ಯೋಜನೆಯಡಿ ಫೆಬ್ರವರಿ 29 ರೊಳಗೆ ಹೊಸದಾಗಿ ನೋಂದಣಿ ಮತ್ತು ನವೀಕರಣಗೊಳಿಸಿಕೊಂಡು ಯೋಜನೆಯ ಪ್ರಯೋಜನವನ್ನು ಪಡೆಯಲು ಸಹಕಾರ ಸಂಘಗಳ ಉಪನಿಬಂಧಕರಾದ ಟಿ. ಆರ್. ರೇಖಾ ತಿಳಿಸಿರುತ್ತಾರೆ.

## ಪ್ರಭಾರ ತಹಸೀಲ್ದಾರ್‌ಆಗಿ ಲಕ್ಷ್ಮೀದೇವಮ್ಮ ನೇಮಕ

**ಚನ್ನಪಟ್ಟಣ:** ತಾಲೂಕು ತಹಸೀಲ್ದಾರ್ ಆಗಿ ಕಾರ್ಯನಿರ್ವಹಿಸುತ್ತಿದ್ದ ಎ.ಎಚ್. ಮಹೇಂದ್ರ ಅವರನ್ನು ಸಹಾಯಕ ಮುಖ್ಯ ಚುನಾವಣಾಧಿಕಾರಿಯಾಗಿ ನಿಯೋಜಿಸಿದ್ದು, ಗ್ರೇಡ್-2 ತಹಸೀಲ್ದಾರ್ ಲಕ್ಷ್ಮೀದೇವಮ್ಮ ಅವರನ್ನು ಗ್ರೇಡ್-1 ತಹಸೀಲ್ದಾರ್ ಆಗಿ ಪ್ರಭಾರಿಯಾಗಿ ನೇಮಿಸಿಲಾಗಿದೆ.

ಸಾರ್ವಜನಿಕ ಹಾಗೂ ಆಡಳಿತಾತ್ಮಕ ಹಿತದೃಷ್ಟಿಯಿಂದ ಎ.ಎಚ್.ಮಹೇಂದ್ರ ಅವರನ್ನು ಸಹಾಯಕ ಮುಖ್ಯ ಚುನಾವಣಾಧಿಕಾರಿಯಾಗಿ ಮುಖ್ಯ ಚುನಾವಣಾಧಿಕಾರಿಗಳ ಕಚೇರಿಗೆ ವರ್ಗಾಹಿಸಲಾಗಿದೆ. ತಕ್ಷಣದಿಂದ ಜಾರಿಗೆ ಬರುವಂತೆ ಹಾಗೂ ಮುಂದಿನ ಆದೇಶದವರೆಗೆ ಗ್ರೇಡ್-2 ತಹಸೀಲ್ದಾರ್ ಲಕ್ಷ್ಮೀದೇವಮ್ಮ ಅವರನ್ನು ಪ್ರಭಾರ ತಹಸೀಲ್ದಾರ್ ಆಗಿ ನಿಯೋಜಿಸಿ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆಯ ಸರ್ಕಾರದ ಅಧೀನ ಕಾರ್ಯದರ್ಶಿ ಆದೇಶ ಹೊರಡಿಸಿದ್ದಾರೆ.

## ಹಳೆ ಪಿಂಚಣಿ ಸೇರಿ ನಾನಾ ಸೌಲಭ್ಯಕ್ಕೆ ಆಗ್ರಹ



**ಮೈಸೂರು:** 7ನೇ ವೇತನ ಆಯೋಗದ ವರದಿ ಅನುಷ್ಠಾನ, ಹಳೆ ಪಿಂಚಣಿ ಯೋಜನೆ ಮರು ಜಾರಿ, ಆರೋಗ್ಯ ಸಂಜೀವಿನಿ ಲೋಕಾರ್ಪಣೆ ಸೇರಿದಂತೆ ವಿವಿಧ ಬೇಡಿಕೆಗಳ ಈಡೇರಿಕೆಗಾಗಿ ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘದಿಂದ ಫೆ.27ರಂದು ಬೆಂಗಳೂರಿನ ಅರಮನೆ ಮೈದಾನದ ಕೃಷ್ಣ ವಿಹಾರದಲ್ಲಿ ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಮಹಾ ಸಮ್ಮೇಳನ, ಪ್ರಜಾಸ್ನೇಹಿ ಕಾರ್ಯಾಗಾರ ಆಯೋಜಿಸಲಾಗಿದೆ ಎಂದು ಜಿಲ್ಲಾಧ್ಯಕ್ಷ ಗೋವಿಂದರಾಜು ತಿಳಿಸಿದರು. ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಕಾರ್ಯಾಗಾರಕ್ಕೆ ಹೈಕೋರ್ಟ್ ನ್ಯಾಯಮೂರ್ತಿ ಕೃಷ್ಣ ಎಸ್.ದೀಕ್ಷಿತ್ ಚಾಲನೆ ನೀಡುವರು. ನೌಕರರ ಆರೋಗ್ಯ ಹಾಗೂ ಒತ್ತಡ ನಿರ್ವಹಣೆ ಕುರಿತು ಹೃದ್ರೋಗ ತಜ್ಞ ಡಾ.ಸಿ.ಎನ್.ಮಂಜುನಾಥ್ ಕಾರ್ಯಾಗಾರ ನಡೆಸಿಕೊಡುವರು. ನಂತರ ಬೃಹತ್ ಸಮ್ಮೇಳನವನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಉದ್ಘಾಟಿಸುವರು. ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಮಂತ್ರಿಗಳು, ಸಂಸದರು, ಶಾಸಕರು ಭಾಗವಹಿಸಲಿದ್ದಾರೆ ಎಂದರು. ಸಮ್ಮೇಳನದಲ್ಲಿ ಮೈಸೂರು ನಗರ ಹಾಗೂ ಜಿಲ್ಲೆಯಿಂದ 8ರಿಂದ 10 ಸಾವಿರ ನೌಕರರು ಭಾಗವಹಿಸುತ್ತಿದ್ದು, ಅಂದು ಬೆಳಗ್ಗೆ 6ರಿಂದ 7.30 ರವರೆಗೆ ಧನ್ವಂತರಿ ರಸ್ತೆಯ ಜಿಲ್ಲಾ ಸಂಘದ ಬಳಿಯಿಂದ ಸಾರಿಗೆ ವ್ಯವಸ್ಥೆ ಮಾಡಲಾಗಿದೆ. ತಾಲೂಕು ನೌಕರರಿಗೆ ಆಯಾ ತಾಲೂಕುಗಳಲ್ಲೇ ಸಾರಿಗೆ ವ್ಯವಸ್ಥೆ ಮಾಡಲಾಗಿದೆ ಎಂದು ಮಾಹಿತಿ ನೀಡಿದರು. ಸುದ್ದಿಗೋಷ್ಠಿಯಲ್ಲಿ ಖಜಾಂಚಿ ರಮೇಶ್ ಕುಮಾರ್, ಗೌರವಾಧ್ಯಕ್ಷ ಸುರೇಶ್, ಜಿಲ್ಲಾ ಕಾರ್ಯದರ್ಶಿ ರೇವಣ್ಣ, ನಿರ್ದೇಶಕರಾದ ಗಿರೀಶ್, ಶ್ರೀನಿವಾಸ್, ರೇವಣ್ಣ ಇದ್ದರು.

## ಖಾಸಗಿ ಶಾಲೆಗಳಿಗಿಂತಲೂ ಉತ್ತಮ ಗುಣಾತ್ಮಕ ಶಿಕ್ಷಣ

**ಪಿರಿಯಾಪಟ್ಟಣ:** ಸರ್ಕಾರಿ ಶಾಲೆಗಳಲ್ಲಿ ಖಾಸಗಿ ಶಾಲೆಗಳಿಗಿಂತಲೂ ಉತ್ತಮ ಗುಣಾತ್ಮಕ ಶಿಕ್ಷಣ ದೊರೆಯುತ್ತದೆ ಎಂದು ತಾಲೂಕು ಆಶ್ರಯ ಸಮಿತಿ ಅಧ್ಯಕ್ಷ ನಿತಿನ್ ವೆಂಕಟೇಶ್ ತಿಳಿಸಿದರು.



ಪಿರಿಯಾಪಟ್ಟಣ ತಾಲೂಕು ಕಿತ್ತೂರು ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಶಿಕ್ಷಣ ಇಲಾಖೆ ಕೆಎಂಎಫ್ ಹಾಗೂ ಸತ್ಯಸಾಯಿ ಅನ್ನಪೂರ್ಣ ಟ್ರಸ್ಟ್ ವತಿಯಿಂದ ನೀಡಲಾದ ಸಾಯಿ ಶೂರ್ ರಾಗಿ ಹೆಲ್ತ್ ಮಿಕ್ಸ್ ಮಾಲ್ಟ್ ವಿತರಣಾ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು ಸರ್ಕಾರಿ ಶಾಲೆಗಳಲ್ಲಿ ಕಲಿಕೆಗೆ ಪೂರಕ ವಾತಾವರಣ, ಹಾಗೂ ನುರಿತ ಶಿಕ್ಷಕರಿದ್ದು ಗ್ರಾಮೀಣ ವಿದ್ಯಾರ್ಥಿಗಳ ಶೈಕ್ಷಣಿಕ ಪ್ರಗತಿಗೆ ಸರ್ಕಾರವು ಹಲವಾರು ಯೋಜನೆಗಳನ್ನು ರೂಪಿಸಿದ್ದು ಇದನ್ನು ಸದುಪಯೋಗಪಡಿಸಿಕೊಂಡು ಆದರ್ಶ ವಿದ್ಯಾರ್ಥಿಗಳಾಗಬೇಕು ಎಂದು ತಿಳಿಸಿದರು.

ಕ್ಷೇತ್ರ ಶಿಕ್ಷಣಾಧಿಕಾರಿ ಬಸವರಾಜು ಮಾತನಾಡಿ ಗ್ರಾಮೀಣ ವಿದ್ಯಾರ್ಥಿಗಳ ಶೈಕ್ಷಣಿಕ ಹಿತದೃಷ್ಟಿಯಿಂದ ಮುಖ್ಯಮಂತ್ರಿ ಎಸ್ ಎಂ ಕೃಷ್ಣ ರವರ ಕಾಲದಲ್ಲಿ ಬಿಸಿ ಊಟ ಯೋಜನೆಯನ್ನು ಜಾರಿಗೆ ತಂದಿದ್ದು ತದನಂತರ ಸರ್ಕಾರಿ ಶಾಲಾ ವಿದ್ಯಾರ್ಥಿಗಳಿಗೆ ಸರ್ಕಾರವು ವಿದ್ಯಾಭ್ಯಾಸಕ್ಕೆ ಅನುಕೂಲವಾಗುವ ಎಲ್ಲಾ ಸಾಮಗ್ರಿಗಳನ್ನು ಉಚಿತವಾಗಿ ನೀಡುತ್ತಿದ್ದ ಇದನ್ನು ಸದುಪಯೋಗ ಪಡಿಸಿಕೊಂಡು ಉತ್ತಮ ಪ್ರಜೆಗಳಾಗಬೇಕು ಎಂದು ತಿಳಿಸಿದರು.

ಅಕ್ಷರ ದಾಸೋಹ ಸಹಾಯಕ ನಿರ್ದೇಶಕ ಎಂ.ಸಿ ಪ್ರಶಾಂತ್ ಮಾತನಾಡಿ ಇಡೀ ದೇಶದಲ್ಲಿ ಮೊದಲ ಬಾರಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯನವರು ಕ್ಷೀರ ಭಾಗ್ಯ ಯೋಜನೆಯನ್ನು ಜಾರಿಗೆ ತಂದಿದ್ದು ಇದರ ಮೂಲ ಉದ್ದೇಶವೇ ನಮ್ಮ ಮಕ್ಕಳ ಅಪೌಷ್ಟಿಕತೆಯನ್ನು ಹೋಗಲಾಡಿಸಿ ಮಕ್ಕಳಿಗೆ ಪೌಷ್ಟಿಕಾಂಶಯುಕ್ತ ಆಹಾರವನ್ನು ನೀಡುವುದಾಗಿದ್ದು ಅದರ ಮುಂದುವರಿದ ಭಾಗವಾಗಿ ಹಾಲಿನ ಜೊತೆಗೆ ಸಾಯಿ ಶೂರ್ ಕಂಪನಿಯ ವತಿಯಿಂದ ನೀಡಲಾಗುತ್ತಿರುವ ರಾಗಿ ಹೆಲ್ತ್ ಮಿಕ್ಸ್ ಮಕ್ಕಳಲ್ಲಿ ಮತ್ತಷ್ಟು ಪೌಷ್ಟಿಕತೆಯನ್ನು ತುಂಬುವ ಯೋಜನೆಯಾಗಿದ್ದು ಈ ದಿನ ರಾಜ್ಯದ ವಿವಿಧ ಸ್ಥಳಗಳಲ್ಲಿ ರಾಗಿ ಮಾಲ್ಟ್ ವಿತರಣಾ ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದು ಇಂದು ನಾವು ನಮ್ಮ ಸಚಿವರು ಓದಿದಂತಹ ಶಾಲೆಯಲ್ಲಿ ಈ ಒಂದು ಕಾರ್ಯಕ್ರಮವನ್ನು ಹಮ್ಮಿಕೊಂಡಿರುವುದು ತುಂಬಾ ಸಂತೋಷದ ಸಂಗತಿಯಾಗಿದೆ ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಕ್ಷೇತ್ರ ಸಮನ್ವಯ ಅಧಿಕಾರಿ ಶಿವರಾಜ್ , ಎಸ್ ಡಿ ಎಂ ಸಿ ಅಧ್ಯಕ್ಷ ಚೆಲುವರಾಜು, ಸಿ ಆರ್ ಪಿ ಮಲ್ಲಿಕಾರ್ಜುನ್ , ಮುಖ್ಯೋಪಾಧ್ಯಾಯರಾದ ರಾಜೇಂದ್ರ ಶಿಕ್ಷಕರ ಸಂಘದ ನಿರ್ದೇಶಕ ಸೋಮಶೇಖರ್, ಗುರುಮೂರ್ತಿ ಹಾಜರಿದ್ದರು.

# ರಾಸುಗಳಿಂದ ಅಧಿಕ ಹಾಲು ಕರೆಯುವ ಸ್ಪರ್ಧೆ

**ಚನ್ನಪಟ್ಟಣ:** ರಾಮನಗರ ಜಿಲ್ಲಾ ಪಂಚಾಯತಿ, ಚನ್ನಪಟ್ಟಣ ತಾಲ್ಲೂಕು ಪಂಚಾಯತಿ, ಪಶು ಪಾಲನೆ ಮತ್ತು ಪಶು ವೈದ್ಯಕೀಯ ಸೇವಾ ಇಲಾಖೆ, ಬಮೂಲ್ ಚನ್ನಪಟ್ಟಣ ಶಿಬಿರ ಕಚೇರಿ, ಚನ್ನಪಟ್ಟಣ ತಾಲ್ಲೂಕು ಹಾಲು ಉತ್ಪಾದಕರ ಸಹಕಾರ ಸಂಘಗಳ ಒಕ್ಕೂಟ ಹಾಗೂ ಎ.ವಿ.ಹಳ್ಳಿ (ಅಗ್ರಹಾರ ವಳಗೆರೆಹಳ್ಳಿ) ಹಾಲು ಉತ್ಪಾದಕರ ಸಹಕಾರ ಸಂಘದ ಸಂಯುಕ್ತ ಆಶ್ರಯದಲ್ಲಿ ಎ.ವಿ.ಹಳ್ಳಿ ಗ್ರಾಮದಲ್ಲಿ ಗುರುವಾರ ತಾಲ್ಲೂಕು ಮಟ್ಟದ ರಾಸುಗಳಿಂದ ಅಧಿಕ ಹಾಲು ಕರೆಯುವ ಸ್ಪರ್ಧೆ ಹಮ್ಮಿಕೊಳ್ಳಲಾಗಿತ್ತು.



ಸ್ಪರ್ಧೆಗೆ ಚಾಲನೆ ನೀಡಿದ ಪಶು ಪಾಲನೆ ಮತ್ತು ಪಶು ವೈದ್ಯಕೀಯ ಸೇವಾ ಇಲಾಖೆ ಉಪ ನಿರ್ದೇಶಕ ಡಾ.ಅಂಜನಪ್ಪ ಮಾತನಾಡಿ, 2023-24 ನೇ ಸಾಲಿನ ವಿಸ್ತರಣಾ ಘಟಕಗಳ ಬಲಪಡಿಸುವಿಕೆ ಯೋಜನೆ ಅಡಿಯಲ್ಲಿ ಹಾಲು ಕರೆಯುವ ಸ್ಪರ್ಧೆ ಆಯೋಜಿಸಿದ್ದು, ಅತಿ ಹೆಚ್ಚು ಹಾಲು ಉತ್ಪಾದಿಸುತ್ತಿರುವ ಜಾನುವಾರುಗಳನ್ನು ಗುರುತಿಸಿ ಅವುಗಳ ಮಾಲೀಕರನ್ನು ಪ್ರೋತ್ಸಾಹಿಸುವ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದರು.

ಬಮೂಲ್ ಚನ್ನಪಟ್ಟಣ ಶಿಬಿರ ಕಚೇರಿ ಉಪ ನಿರ್ದೇಶಕ ಡಾ.ವೈ.ಎಚ್.ಹೇಮಂತ್ ಮಾತನಾಡಿ,

ಹೈನುಗಾರಿಕೆ ಕಡಿಮೆ ಯಾಗುತ್ತಿರುವಂತಹ ಈ ಸಂದರ್ಭದಲ್ಲಿ ಇಂತಹ ಕಾರ್ಯಕ್ರಮಗಳನ್ನು ರೂಪಿಸುವುದರಿಂದ ರೈತರು ಆರ್ಥಿಕ ಸಂಕಷ್ಟಗಳಿಂದ ಪಾರಾಗುವುದು ಸುಲಭ ಇಂತಹ ಕಾರ್ಯಕ್ರಮಗಳಿಂದ ಇನ್ನೂ ಹೆಚ್ಚಿನ ರೈತರು ಹೈನುಗಾರಿಕೆಯ ಕಡೆಗೆ ಒಲವು ತೋರುವಂತಾಗಲಿ ಎಂದು ಹಾರೈಸಿದರು.

ಸ್ಪರ್ಧೆಯಲ್ಲಿ ವಿವಿಧ ಹಳ್ಳಿಗಳಿಂದ 18 ಹೈನುಗಾರರು ಭಾಗವಹಿಸಿದ್ದರು. ಸೋಗಾಲದ ಬೈರೇಶ್ ಪ್ರಥಮ ಬಹುಮಾನ ಹತ್ತು ಸಾವಿರ ರೂ.ಗಳಿಸಿದರೆ, ಎ.ವಿ.ಹಳ್ಳಿಯ ಮೋಹನ್ ದ್ವಿತೀಯ ಬಹುಮಾನ ಏಳೂವರೆ ಸಾವಿರ ರೂ. ಹಾಗೂ ಎ.ವಿ.ಹಳ್ಳಿಯ ಹರ್ಷಿತಾ ತೃತೀಯ ಬಹುಮಾನ ಐದು ಸಾವಿರ ಪಡೆದರು. ಉಳಿದ ಹದಿನೈದು ಮಂದಿ ಹೈನುಗಾರರಿಗೆ ತಲಾ ಒಂದು ಸಾವಿರ ರೂ.ಪ್ರೋತ್ಸಾಹ ಧನ ನೀಡಲಾಯಿತು.

ಪಶು ಇಲಾಖೆ, ಡಾ.ಅಭಿಲಾಷ್ ಹಾಗೂ ಬಮೂಲ್ ಶಿಬಿರ ಕಚೇರಿ ಮೊದಲ ಮೂರು ಬಹುಮಾನಗಳನ್ನು ಕೊಡಮಾಡಿದರೆ, ಪ್ರೋತ್ಸಾಹ ಧನದ ಪ್ರಾಯೋಜಕತ್ವವನ್ನು ಬಾಲಾಜಿ, ಶ್ರೀನಿವಾಸ ಹಾಗೂ ಶ್ರೀಕೃಷ್ಣ ಪಶು ಔಷಧಾಲಯ ಮಾರಾಟ ಮಾಲೀಕರು ವಹಿಸಿಕೊಂಡಿದ್ದರು.

ಪಶು ಪಾಲನೆ ಮತ್ತು ಪಶು ವೈದ್ಯಕೀಯ ಸೇವಾ ಇಲಾಖೆಯ ಡಾ.ವಿವೇಕಾನಂದ, ಸುಳ್ಳೇರಿ ಗ್ರಾಪಂ ಅಧ್ಯಕ್ಷೆ ಸಿದ್ದಮ್ಮ, ಉಪಾಧ್ಯಕ್ಷ ವಿ.ಪಿ.ಯೋಗೇಶ್, ಗ್ರಾಪಂ ಸದಸ್ಯರು, ಎ.ವಿ.ಹಳ್ಳಿ ಡೇರಿ ಅಧ್ಯಕ್ಷ ಗಿರಿಗೌಡ ಹಾಗೂ ನಿರ್ದೇಶಕರು, ಮುಖ್ಯ ಕಾರ್ಯವಾಹಕ ಶಿವರಾಜೇಗೌಡ, ಜಿಲ್ಲೆಯ ಚನ್ನಪಟ್ಟಣ, ರಾಮನಗರ, ಕನಕಪುರ ಹಾಗೂ ಮಾಗಡಿ ತಾಲ್ಲೂಕುಗಳ ಮುಖ್ಯ ಪಶು ವೈದ್ಯಾಧಿಕಾರಿಗಳು (ಆಡಳಿತ),

ಚಕ್ಕಲೂರು ಕೇಂದ್ರದ ಹಿರಿಯ ಪಶು ವೈದ್ಯಕೀಯ ಪರೀಕ್ಷಕ ಡಾ.ಎ.ಸಿ.ಕೃಷ್ಣ, ಸಹಾಯಕ ಆರ್.ಸುಹಾಸ್ ಗೌಡ ಹಾಗೂ ಇಲಾಖೆಯ ಸಿಬ್ಬಂದಿ, ಬಮೂಲ್ ಸಿಬ್ಬಂದಿ, ಎ.ವಿ.ಹಳ್ಳಿ ಹಾಗೂ ಸುತ್ತಮುತ್ತಲಿನ ಗ್ರಾಮದ ಹೈನುಗಾರರು ಭಾಗವಹಿಸಿದ್ದರು.

# ಎನ್ ಆರ್ ಕಾಲೋನಿ ಡೇರಿ ಕಟ್ಟಡಕ್ಕೆ ಧರ್ಮಸ್ಥಳ ಸಂಸ್ಥೆ ಆರ್ಥಿಕ ನೆರವು

**ಚನ್ನಪಟ್ಟಣ:** ತಾಲ್ಲೂಕಿನ ಕೆಂಗಲ್ ಯೋಜನಾ ವ್ಯಾಪ್ತಿಯ ಎನ್ ಆರ್ ಕಾಲೋನಿ ಹಾಲು ಉತ್ಪಾದಕರ ಸಹಕಾರ ಸಂಘಕ್ಕೆ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ವತಿಯಿಂದ ಡೇರಿ ಕಟ್ಟಡ ನಿರ್ಮಾಣಕ್ಕಾಗಿ

ಎರಡು ಲಕ್ಷ ರೂಪಾಯಿ ಮೊತ್ತದ ಮಂಜೂರಾತಿ ಪತ್ರವನ್ನು ನೀಡಲಾಯಿತು. ಧರ್ಮಸ್ಥಳ ಸಂಸ್ಥೆಯ ರಾಮನಗರ ಜಿಲ್ಲಾ ನಿರ್ದೇಶಕ ಜಯಕರ್ ಶೆಟ್ಟಿ, ಮೈಸೂರಿನ ಮಾನವ ಸಂಪನ್ಮೂಲ ತರಬೇತಿ ಕೇಂದ್ರ, ಪ್ರಾಂಶುಪಾಲ ದಿನೇಶ್ ಪೂಜಾರಿ, ಕೆಂಗಲ್ ಯೋಜನಾಧಿಕಾರಿ ನಾಗಭೂಷಣ್ ಪೈ, ಹಾಲು ಉತ್ಪಾದಕರ ಸಹಕಾರ ಸಂಘದ ಅಧ್ಯಕ್ಷ ಹಾಗೂ ನಿರ್ದೇಶಕರು, ಸದಸ್ಯರು, ಸಂಸ್ಥೆಯ ಮೇಲ್ವಿಚಾರಕಿ ಕುಮಾರಿ, ಸೇವಾ ಪ್ರತಿನಿಧಿ ಸೌಮ್ಯ ಹಾಗೂ ಸ್ಥಳೀಯ ಗ್ರಾಮಸ್ಥರು ಉಪಸ್ಥಿತರಿದ್ದರು.



# ಕಬ್ಬು ಬೆಳೆಗಾರರ ಸಂಘದಿಂದ ಕೇಂದ್ರ ಸರ್ಕಾರದ ಅಣುಕು ಶವಯಾತ್ರೆ




**ಚಾಮರಾಜನಗರ:** ದೆಹಲಿ ಚಲೋ ವೇಳೆ ಪ್ರತಿಭಟನಾನಿರತ ರೈತರ ಮೇಲೆ ಅಶ್ರುವಾಯು ಸಿಡಿಸಿ ಓರ್ವ ರೈತನ ಸಾವಿಗೆ ಕಾರಣರಾದ ಪೊಲೀಸರು, ಕೇಂದ್ರ ಸರ್ಕಾರದ ವಿರುದ್ಧ ರಾಜ್ಯ ಕಬ್ಬು ಬೆಳೆಗಾರರ ಸಂಘದ ವತಿಯಿಂದ ನಗರದಲ್ಲಿ ಅಣುಕುಶವಯಾತ್ರೆ ನಡೆಸಲಾಯಿತು.

ನಗರದ ಶ್ರೀಚಾಮರಾಜೇಶ್ವರ ದೇವಾಲಯದ ಮುಂಭಾಗದಲ್ಲಿ ಹೊರಟ ಅಣಕು ಶವಯಾತ್ರೆ, ಭುವನೇಶ್ವರಿ ವೃತ್ತಕ್ಕೆ ತೆರಳಿ ಅಲ್ಲಿ ಹಾದಿಹೋಗಿರುವ ರಾಷ್ಟ್ರೀಯ ಹೆದ್ದಾರಿಯಲ್ಲಿ ರಸ್ತೆತಡೆ ನಡೆಸಿ ಕೇಂದ್ರ ಸರ್ಕಾರ, ಪೊಲೀಸ್ ವಿರುದ್ಧ ಘೋಷಣೆ ಕೂಗಿ ಬಿ.ರಾಚಯ್ಯ ಜೋಡಿರಸ್ತೆ ಮೂಲಕ ಜಿಲ್ಲಾಡಳಿತ ಭವನಕ್ಕೆ ತೆರಳುತ್ತಿದ್ದಂತೆ ಪೊಲೀಸರು ಶವದ ಪ್ರತಿಕೃತಿಯನ್ನು ವಶಪಡಿಸಿಕೊಂಡರು ಈ ವೇಳೆ ಪ್ರತಿಭಟನಾನಿರತರು, ಪೊಲೀಸರ ನಡುವೆ ಮಾತಿನ ಚಕಮಕಿ ನಡೆಯಿತು. ನಂತರ ಮೆರವಣಿಗೆಯಲ್ಲಿ ಪ್ರತಿಭಟನಾಕಾರರು ಜಿಲ್ಲಾಡಳಿತ ಭವನಕ್ಕೆ ತೆರಳಿ ಕೆಲಕಾಲ ಪ್ರತಿಭಟನೆ ಜಿಲ್ಲಾಧಿಕಾರಿಗಳಿಗೆ ಮನವಿ ಸಲ್ಲಿಸಿದರು.

ಪ್ರತಿಭಟನೆ ನೇತೃತ್ವ ವಹಿಸಿದ್ದ ಸಂಘದ ರಾಜ್ಯ ಸಂಘಟನಾ ಕಾರ್ಯದರ್ಶಿ ಅತ್ತಹಳ್ಳಿದೇವರಾಜು ಮಾತನಾಡಿ, ಕೇಂದ್ರ ಸರ್ಕಾರ ರೈತರ ಬೇಡಿಕೆಗಳ ಈಡೇರಿಸುವಲ್ಲಿ ಸಂಪೂರ್ಣ ವಿಫಲವಾಗಿದೆ. ಪೊಲೀಸರನ್ನು ಬಳಸಿಕೊಂಡು ನಮ್ಮ ಹೋರಾಟವನ್ನು ಹತ್ತಿಕ್ಕುವ ಕೆಲಸ ಮಾಡಿದೆ ಎಂದು ಆರೋಪಿಸಿದರು. ತಮ್ಮ ಹಕ್ಕುಗಳಾಗಿ ಹೋರಾಟ ಮಾಡುತ್ತಿರುವ ರೈತರ ಮೇಲೆ ಪಂಜಾಬ್ ಹರಿಯಾಣ ರಾಜ್ಯಗಳ ರೈತರ ಮೇಲೆ ಪೊಲೀಸರು ದೌರ್ಜನ್ಯ ಖಂಡನೀಯ. ಸರ್ಕಾರವೇ ನಿಗದಿ ಮಾಡುವ ಬೆಂಬಲ ಖಾತರಿ ಕಾನೂನು ಕೇಳುತ್ತಿದ್ದೇವೆ. ದೇಶದ ರೈತರ ಕತ್ತಲಿನಲ್ಲಿಟ್ಟಿದ್ದಾರೆ. ಸರ್ಕಾರವೇ ನಿಗದಿ ಮಾಡುವ ಬೆಲೆಗೆ ಶಾಸನಬದ್ಧ ಖಾತರಿ ನೀಡಬೇಕು ಎಂದು ಹೋರಾಟ ಮಾಡಿದರೆ ರೈತರ ಮೇಲೆ ಅಶ್ರುವಾಯು ಸಿಡಿಸಿ ರೈತರನ್ನು ಉಗ್ರಗಾಮಿಗಳ ರೀತಿಯಲ್ಲಿ ಕೊಲೆ ಮಾಡುತ್ತಿದ್ದಾರೆ. ರೈತ ಹೋರಾಟಗಾರನ್ನು ಭಯೋತ್ಪಾದಕರು, ದೇಶದ್ರೋಹಿಗಳು ಎಂದು ಹೇಳಿ ಅವರ ಮೇಲೆ ದೌರ್ಜನ್ಯ ನಡೆಸಲಾಗುತ್ತಿದೆ. ಮಾನವಹಕ್ಕುಗಳನ್ನು ದಮನ ಮಾಡುತ್ತಿದೆ ಎಂದು ಕಿಡಿಕಾಡಿದರು.

ಪ್ರತಿಭಟನೆಯಲ್ಲಿ ಜಿಲ್ಲಾಧ್ಯಕ್ಷ ಪಿ.ಸೋಮಶೇಖರ, ಜಿಲ್ಲಾ ಪ್ರಧಾನ ಕಾರ್ಯದರ್ಶಿಗಳಾದ ಎಚ್.ಮೂಕಳ್ಳಿ ಮಹದೇವಸ್ವಾಮಿ, ಕಿರಗಸೂರು ಶಂಕರ್, ಬಣ್ಣದಪುರ ನಾಗರಾಜು, ಉಪಾಧ್ಯಕ್ಷ ಪಟೇಲ್ ಶಿವಮೂರ್ತಿ,ಕಾಯಾಧ್ಯಕ್ಷ ಉಡಿಗಾಲ ರೇವಣ್ಣ, ತಾಲೂಕು ಸತೀಶ್ ನಂಜದೇವನಪುರ, ತಿ.ನರಸೀಪುರ ತಾಲೂಕು ಅಧ್ಯಕ್ಷ ಕುರುಬೂರು ಸಿದ್ದೇಶ್, ತಾಲೂಕು ಕಾರ್ಯದರ್ಶಿ ಉಡಿಗಾಲ ಸುಂದ್ರಪ್ಪ, ಸಂಘಟನಾ ಕಾರ್ಯದರ್ಶಿ ಕುರುಬೂರು ಪ್ರದೀಪ್, ಉಡಿಗಾಲಪ್ರಸಾದ್, ರಘು ಉಡಿಗಾಲ, ಎಚ್.ಮೂಕಳ್ಳಿ ಗೌಡರ ಕುಮಾರ್, ಜಗದೀಶ್, ಶಿವಶಂಕರ ಕರಿನಂಜನಪುರ, ಕೆಂಪರಾಜು ದೊಡ್ಡಹಂಪಾಪುರ, ನಿಂಗರಾಜು, ಜೀವನ್, ಸುನೀಲ್, ಎಂಸಿ ಮಹದೇವಸ್ವಾಮಿ, ವೀರನಪುರ ನವೀನ, ಉಡಿಗಾಲಗುರು ಮಹದೇವಪ್ರಸಾದ್, ಚುಂಚರಾಯನಹುಂಡಿ ಗಿರೀಶ್, ರೇವಣ್ಣ ಮೂಡ್ಲುಪುರ, ನಾಗೇಂದ್ರ ಇತರರು ಭಾಗವಹಿಸಿದ್ದರು.

## ನಂದಿನಿ ಉತ್ಪನ್ನಗಳ ಮೂಲಕ ಸಂವಿಧಾನ ಜಾಗೃತಿ

**ಚಾಮರಾಜನಗರ:** ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್ ಮತ್ತು ಸಮಾಜ ಕಲ್ಯಾಣ ಇಲಾಖೆಯ ಸಂಯುಕ್ತಾಶ್ರಯದಲ್ಲಿ ಜಿಲ್ಲಾದ್ಯಂತ ಸಂವಿಧಾನ ಜಾಗೃತಿ ಜಾಥಾವನ್ನು ಯಶಸ್ವಿಯಾಗಿ ನಡೆಸುತ್ತಿದ್ದು, ಜಿಲ್ಲಾ ಹಾಲು ಉತ್ಪಾದಕರ ಸಹಕಾರ ಸಂಘಗಳ ಒಕ್ಕೂಟ (ಚಾಮುಲ್) ದಿಂದಲೂ ಜಾಗೃತಿ ಮೂಡಿಸಲಾಗುತ್ತಿದೆ. ಸಂವಿಧಾನ ಅಂಗೀಕಾರಗೊಂಡ 75ನೇ ವರ್ಷದ ಆಚರಣೆ ಅಂಗವಾಗಿ ಫೆ.24 ಮತ್ತು 25 ರಂದು ಬೆಂಗಳೂರಿನಲ್ಲಿ ನಡೆಯಲಿರುವ ಭಾರತ ಸಂವಿಧಾನ ಹಾಗು ರಾಷ್ಟ್ರೀಯ ಐಕ್ಯತಾ ಸಮಾವೇಶ ಸಂಭ್ರಮದ ಪ್ರಯುಕ್ತ ರಾಜ್ಯ ಸರ್ಕಾರದ ವತಿಯಿಂದ ಸಂವಿಧಾನ ಜಾಗೃತಾ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ ಎಂದುಜಿಲ್ಲಾಧಿಕಾರಿ ಶಿಲ್ಪಾನಾಗ್ ಅವರು ತಿಳಿಸಿದ್ದಾರೆ. ಈ ಪ್ರಯುಕ್ತ ಚಾಮುಲ್ ಸಂಸ್ಥೆಯ ನೆರವಿನಿಂದ ಜಿಲ್ಲೆ ಹಾಗೂ ನೆರೆಯ ರಾಜ್ಯಗಳ ನಂದಿನಿ ಗ್ರಾಹಕರು, ಗಡಿ ಭಾಗದ ತಮಿಳುನಾಡು, ಕೇರಳ ರಾಜ್ಯಗಳ ಗ್ರಾಹಕರಲ್ಲೂ ಪ್ರತಿನಿತ್ಯ ಮುಂಜಾನೆಯಿಂದಲೇ ಸಂವಿಧಾನ ಜಾಗೃತಿ ಉಂಟು ಮಾಡಲಾಗುತ್ತಿದೆ ಎಂದು ತಿಳಿಸಿದ್ದಾರೆ.

ಚಾಮುಲ್ ತಯಾರಿಸುವ ನಂದಿನಿ ಉತ್ಪನ್ನಗಳ ಮೇಲೆ 'ಸಂವಿಧಾನ ನಮ್ಮ ಹೆಮ್ಮೆ ಬನ್ನಿ ಸಂವಿಧಾನ ಸಂಭ್ರಮಿಸೋಣ' ಎನ್ನುವ ಘೋಷವಾಕ್ಯವನ್ನು ಮುದ್ರಿಸಲಾಗಿದ್ದು, ಪ್ರತಿನಿತ್ಯ 5 ಲಕ್ಷ ಗ್ರಾಹಕರಿಗೆ ಜಾಗೃತಿ ಮೂಡಿಸಲಾಗುತ್ತಿದೆಎಂದು ಹೇಳಿದ್ದಾರೆ. ನೆರೆಯ ಕೇರಳ ಹಾಗೂ ತಮಿಳುನಾಡು ಸೇರಿದಂತೆ ಮಂಡ್ಯ, ಮೈಸೂರು ಜಿಲ್ಲೆಗಳ ಭಾಗದ ಜನರಲ್ಲೂ ಕೂಡ ಪ್ರತಿನಿತ್ಯ ಅರಿವು ಮೂಡಿಸಲಾಗುತ್ತದೆ. ಸಂವಿಧಾನ ಜಾಗೃತಿ ಕಾರ್ಯಕ್ರಮ ಪೂರ್ಣಗೊಳ್ಳುವ ತನಕ ಈ ಚಟುವಟಿಕೆ ನಿರಂತರವಾಗಿ ನಡೆಯುತ್ತದೆ. ಜಿಲ್ಲೆಯ ಈ ಕಾರ್ಯಕ್ರಮಕ್ಕೆ ಸಾರ್ವಜನಿಕರಿಂದ ಅಭೂತಪೂರ್ವ ಬೆಂಬಲ ವ್ಯಕ್ತವಾಗಿದೆ ಎಂದು ತಿಳಿಸಿದ್ದಾರೆ. ಅಲ್ಲದೆ ನೆರೆಯ ರಾಜ್ಯದ ನಂದಿನಿ ಬ್ರಾಂಡ್‌ನ ಅಭಿಮಾನಿಗಳು ಖುದ್ದು ಕರೆಮಾಡುವ ಮೂಲಕ ಶ್ಲಾಘಿಸುತ್ತಿದ್ದಾರೆ. ಫೆ.12ರಿಂದ ಇನ್ನು ಒಂದು ತಿಂಗಳ ವರೆವಿಗೂ ಸದರಿ ಚಟುವಟಿಕೆ ಮುಂದುವರಿಯುತ್ತದೆ. ಈವರೆವಿಗೆ 50 ಲಕ್ಷ ಹಾಲಿನ ಪ್ಯಾಕೇಟ್‌ಗಳ ಮೇಲೆ ಮುದ್ರಿಸಲಾಗಿದೆ ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಕೆ.ಸಿ.ಪಾಳ್ಯದ ಅಂತರಘಟ್ಟಮ್ಮ ಜಾತ್ರೆಗೆ ತೆರೆ



ಹುಳಿಯಾರು: ಹುಳಿಯಾರು ಹೋಬಳಿಯ ಕೆ.ಸಿ.ಪಾಳ್ಯ ಗ್ರಾಮದ ಗ್ರಾಮ ದೇವತೆ ಅಂತರಘಟ್ಟೆ ಅಮ್ಮನವರ 3 ನೇ ವರ್ಷದ ಜಾತ್ರಾ ಮಹೋತ್ಸವದ ಅಂಗವಾಗಿ ಗುರುವಾರ ಏರ್ಪಡಿಸಿದ್ದ ಕಳಶೋತ್ಸವವು ಶ್ರದ್ಧಾಭಕ್ತಿಯಿಂದ ಯಶಸ್ವಿಯಾಗಿ ನೆರವೇರಿತು. ಫೆ.18 ರ ಭಾನುವಾರ ಬೆಳಗ್ಗೆ ಆರಂಭವಾದ ಜಾತ್ರಾ ಮಹೋತ್ಸವವು ಅಮ್ಮನವರಿಗೆ ಅಭಿಷೇಕ, ಮಹಾಮಂಗಳಾರತಿ, ವಿಶೇಷ ಅಲಂಕಾರ, ಆರತಿ ಬಾನ, ಸಂಜೆ ಮದುವಣಗಿತ್ತಿ ಕಾರ್ಯಕ್ರಮ ನಡೆಯಿತು. ಫೆ.19 ರ ಬುಧವಾರ ಮೂಲದೇವರಿಗೆ ಅಭಿಷೇಕ, ಆಂಜನೇಯಸ್ವಾಮಿಗೆ ಬೆಳಗ್ಗೆ ಮಹಾಮಂಗಳಾರತಿ ನಂತರ ಅಭಿಷೇಕ ನಡೆಯಿತು. ಫೆ.20 ರ ಮಂಗಳವಾರ ಆರತಿಬಾನ ಹಾಗೂ ಮದುವಣಗಿತ್ತಿ ಸೇವೆ ನಡೆದು ಫೆ.21 ರ ಬುಧವಾರ ರಾತ್ರಿ, ಗೌಡಗೆರೆ ದುರ್ಗಮ್ಮ, ಹುಳಿಯಾರು ದುರ್ಗಮ್ಮ, ಹೊಸಹಳ್ಳಿಪಾಳ್ಯದ ಅಂತರಘಟ್ಟಮ್ಮನವರ ಕೂಡು ಭೇಟಿ ನಡೆಯಿತು. ಫೆ.22 ರ ಗುರುವಾರ ಬೆಳಗ್ಗೆ ಗ್ರಾಮದ ಗಂಗಸ್ನಾನ ಬಾವಿ ಹತ್ತಿರ ಆಗಮಿಸಿ ಕಳಶೋತ್ಸವಕ್ಕೆ ಚಾಲನೆ ನೀಡಲಾಯಿತು. ಪಟ್ಟದ ಕಳಸದೊಂದಿಗೆ ಗ್ರಾಮದ 30 ಮಂದಿ ಹೆಣ್ಣು ಮಕ್ಕಳು ಅಂತರಘಟ್ಟಮ್ಮನವರ ಕಳಸ ಹೊತ್ತು ಶ್ರದ್ಧೆಭಕ್ತಿಯಿಂದ ನಡೆಮುಡಿ ಉತ್ಸವದೊಂದಿಗೆ ಮೂಲಸ್ಥಾನಕ್ಕೆ ದಯಮಾಡಿಸಲಾಯಿತು. ನಂತರ ಓಕಳಿ ಸೇವೆ ಮಾಡಿ ಜಾತ್ರೆಗೆ ತೆರೆ ಎಳೆಯಲಾಯಿತು. ಕಳಸೋತ್ಸವಕ್ಕೆ ಬಂದಿದ್ದ ಭಕ್ತರಿಗೆ ಗ್ರಾಮಸ್ಥರ ಎತ್ತಿನಗಾಡಿ ಮತ್ತು ಟ್ರ್ಯಾಕ್ಟರ್‌ಗಳಿಂದ ಪಾನಕ, ಫಲಹಾರ, ಮಜ್ಜಿಗೆ, ಅನ್ನಸಂತರ್ಪಣೆ ಮಾಡಲಾಯಿತು, ಹುಳಿಯಾರು, ಸೋಮಜ್ಜನ ಪಾಳ್ಯ, ಲಿಂಗಪ್ಪನಪಾಳ್ಯ, ಗೌಡಗೆರೆ, ಕುರಿಹಟ್ಟಿ ಸೇರಿದಂತೆ ಆಜುಬಾಜಿನ ಗ್ರಾಮಸ್ಥರು ಭಾಗವಹಿಸಿದ್ದರು.




**ಚಿಕ್ಕನಾಯಕನಹಳ್ಳಿ ತಾಲೂಕು ಹಂದನಕೆರೆ ಹೋಬಳಿಯ ಸಬ್ಬೇನಹಳ್ಳಿ ಗ್ರಾಮಕ್ಕೆ ಮತದಾನ ಕೇಂದ್ರ ಕಲ್ಪಿಸುವಂತೆ ಎಸಿ ಶಿಲ್ಪಶ್ರೀ ರವರಿಗೆ ಕೆಆರ್‌ಎಸ್ ಪಕ್ಷದ ಮುಖಂಡ ಸಬ್ಬೇನಹಳ್ಳಿ ಶ್ರೀನಿವಾಸ್ ಮನವಿ ಸಲ್ಲಿಸಿದರು. ಮನವಿಗೆ ಸ್ಪಂದಿಸಿ ಮುಂದಿನ ಚುನಾವಣೆ ಒಳಗೆ ಮತದಾನ ಕೇಂದ್ರ ಮಂಜೂರು ಮಾಡಿಕೊಡುವುದಾಗಿ ಭರವಸೆ ನೀಡಿದರು. ಈ ಸಂದರ್ಭದಲ್ಲಿ ಪ್ರಕಾಶ್, ಚಿದಾನಂದ್ ಜೊತೆಗಿದ್ದರು.**

### ಲೋಕಸಭಾ ಚುನಾವಣೆ ಹಿನ್ನೆಲೆ

# ಮತಗಟ್ಟೆಗಳಲ್ಲಿ ಸೌಕರ್ಯ ಕಲ್ಪಿಸಿ




**ಚಾಮರಾಜನಗರ:** ಚಾಮರಾಜನಗರ ಲೋಕಸಭಾ ಕ್ಷೇತ್ರ ವ್ಯಾಪ್ತಿಗೆ ಒಳಪಡುವ 8 ವಿಧಾನಸಭಾ ಕ್ಷೇತ್ರಗಳಲ್ಲಿ ಬರುವ ಮತಗಟ್ಟೆಗಳಲ್ಲಿ ಮೂಲ ಸೌಕರ್ಯಗಳನ್ನು ಪರಿಶೀಲಿಸಿ ಸಮರ್ಪಕವಾಗಿ ಇವೆಯೇ ಎಂಬುದನ್ನು ಖಾತರಿ ಪಡಿಸಿಕೊಳ್ಳುವಂತೆ ಚಾಮರಾಜನಗರ ಜಿಲ್ಲಾಧಿಕಾರಿ ಶಿಲ್ಪಾ ನಾಗ್ ಹಾಗೂ ಮೈಸೂರು ಜಿಲ್ಲಾಧಿಕಾರಿ ಡಾ. ಕೆ.ವಿ. ರಾಜೇಂದ್ರ ಅವರು ಅಧಿಕಾರಿಗಳಿಗೆ ಸೂಚನೆ ನೀಡಿದರು.

ಗುಂಡ್ಲುಪೇಟೆ ತಾಲೂಕಿನ ಬಂಡೀಪುರ ಪ್ರವಾಸಿಮಂದಿರದಲ್ಲಿಂದು ಚಾಮರಾಜನಗರ ಲೋಕಸಭಾ ಕ್ಷೇತ್ರದ ಚುನಾವಣೆ ಕುರಿತ ಪೂರ್ವ ಸಿದ್ದತಾ ಸಭೆಯಲ್ಲಿ ಉಭಯ ಜಿಲ್ಲೆಗಳ ಜಿಲ್ಲಾಧಿಕಾರಿಗಳು ಮಾತನಾಡಿದರು.

ಚಾಮರಾಜನಗರ ಲೋಕಸಭಾ ಕ್ಷೇತ್ರ ವ್ಯಾಪ್ತಿಗೆ ಚಾಮರಾಜನಗರ ಜಿಲ್ಲಾ ವ್ಯಾಪ್ತಿಯ 4 ವಿಧಾನಸಭಾ ಕ್ಷೇತ್ರಗಳು ಹಾಗೂ ಮೈಸೂರು ಜಿಲ್ಲಾ ವ್ಯಾಪ್ತಿಯ 4 ವಿಧಾನಸಭಾ ಕ್ಷೇತ್ರಗಳು ಒಳಪಡಲಿವೆ. ಈ ಎಲ್ಲಾ 8 ವಿಧಾನಸಭಾ ಕ್ಷೇತ್ರಗಳಲ್ಲಿರುವ ಮತಗಟ್ಟೆಗಳಲ್ಲಿ ಕುಡಿಯುವ ನೀರು, ಶೌಚಾಲಯ, ವಿದ್ಯುತ್ ಸೇರಿದಂತೆ ಅಗತ್ಯ ಮೂಲ ಸೌಲಭ್ಯಗಳ ಬಗ್ಗೆ ಪರಿಶೀಲಿಸಿ ದೃಡೀಕರಣವನ್ನು ಮಾರ್ಚ್ 6 ರೊಳಗೆ ಸಲ್ಲಿಸುವಂತೆ ಜಿಲ್ಲಾಧಿಕಾರಿಗಳು ನಿರ್ದೇಶನ ನೀಡಿದರು. ಎರಡೂ ಜಿಲ್ಲೆಯ ಗಡಿಭಾಗಗಳಲ್ಲಿ ಅಂತರರಾಜ್ಯ ಚೆಕ್‌ಪೋಸ್ಟ್ ಗುರುತಿಸಬೇಕಿದೆ. ಉಭಯ ಜಿಲ್ಲೆಗಳ ಅಧಿಕಾರಿಗಳು ಈ ಕಾರ್ಯವನ್ನು ಕೈಗೊಂಡು ಗಡಿ ಪ್ರದೇಶಗಳಲ್ಲಿ ಚೆಕ್‌ಪೋಸ್ಟ್‌ಗಳನ್ನು ಸ್ಥಾಪನೆ ಮಾಡಬೇಕಿದೆ. ಜಿಲ್ಲೆಯಿಂದ ಆಗಮಿಸುವ ಹಾಗೂ ನಿರ್ಗಮಿಸುವ ವಾಹನಗಳನ್ನು ಚೆಕ್‌ಪೋಸ್ಟ್‌ಗಳಲ್ಲಿ ಕಟ್ಟುನಿಟ್ಟಾಗಿ ತಪಾಸಣೆ ಮಾಡಬೇಕು. ಚೆಕ್‌ಪೋಸ್ಟ್ ಇರುವ ಬಗ್ಗೆ ಅರಿವು ಮೂಡಿಸುವ ಫಲಕಗಳನ್ನು ಅಳವಡಿಸಬೇಕೆಂದು ಜಿಲ್ಲಾಧಿಕಾರಿಗಳು ಸೂಚಿಸಿದರು.

ಗಡಿ ರಾಜ್ಯಗಳಿಂದ ಅಕ್ರಮ ಮದ್ಯ, ಹಣ, ಇತರೆ ಮಾದಕ ವಸ್ತುಗಳು ಸಾಗಾಣಿಕೆಯಾಗದಂತೆ ಕಟ್ಟೆಚ್ಚರ ವಹಿಸಬೇಕಿದೆ. ಗಡಿಭಾಗಗಳಲ್ಲಿ ಅರಣ್ಯ ಪ್ರದೇಶಗಳು ಹೆಚ್ಚಿರುವುದರಿಂದ ತೀವ್ರ ನಿಗಾ ಇಡಬೇಕಿದೆ. ಅಲ್ಲದೇ ಅರಣ್ಯದ ಅಂಚಿನಲ್ಲಿ ಬರುವ ನದಿ ಪಾತ್ರಗಳಲ್ಲಿ ತೆಪ್ಪಗಳ ಮೂಲಕ ಸಾಗಿಸುವ ವಸ್ತುಗಳನ್ನು ಪರಿಶೀಲಿಸಬೇಕಿದೆ. ಅರಣ್ಯ ಇಲಾಖೆಯ ಸಿಬ್ಬಂದಿ ತಂಡಗಳನ್ನು ರಚಿಸಿ ವರದಿ ಪಡೆದುಕೊಳ್ಳಬೇಕಿದೆ ಎಂದರು.

ಚೆಕ್‌ಪೋಸ್ಟ್‌ಗಳಲ್ಲಿ ಕರ್ತವ್ಯ ನಿರ್ವಹಣೆಗೆ ಹೆಚ್ಚುವರಿ ತಂಡಗಳನ್ನು ನಿಯೋಜನೆ ಮಾಡಬೇಕು. ಈ ತಂಡಗಳು ಪ್ರತಿದಿನ ಬೇರೆ ಬೇರೆ ಸ್ಥಳಗಳಲ್ಲಿ ತೆರಳಿ ಕಾರ್ಯ ನಿರ್ವಹಿಸಬೇಕಾಗುತ್ತದೆ. ಚೆಕ್‌ಪೋಸ್ಟ್‌ಗಳನ್ನು ನಿರ್ಮಿಸುವಾಗ ಶಾಮಿಯಾನ ಬದಲು ಸುಭದ್ರವಾದ ಶೀಟ್‌ಗಳನ್ನು ಬಳಸಿ ನಿಮಾಣ ಮಾಡಬೇಕು. ಕುಡಿಯುವ ನೀರು, ಶೌಚಾಲಯದಂತಹ ಮೂಲ ಸೌಕರ್ಯಗಳು ಇರಬೇಕು ಎಂದು ಜಿಲ್ಲಾಧಿಕಾರಿಗಳು ತಿಳಿಸಿದರು. ಚಾಮರಾಜನಗರ ಲೋಕಸಭಾ ಕ್ಷೇತ್ರದ ಚುನಾವಣೆಗೆ ಎರಡು ಜಿಲ್ಲೆಗಳ ಅಧಿಕಾರಿಗಳು ಸಮನ್ವಯದಿಂದ ಚುನಾವಣಾ ಕರ್ತವ್ಯವನ್ನು ನಿರ್ವಹಿಸಬೇಕಾಗುತ್ತದೆ. ಚುನಾವಣಾ ಕಾರ್ಯಕ್ಕೆ ನಿಯೋಜಿತವಾಗುವ ತಂಡಗಳು ಯಾವುದೇ ಲೋಪಗಳಿಗೆ ಆಸ್ಪದವಾಗದಂತೆ ಹೊಣೆಗಾರಿಕೆಯಿಂದ ವಹಿಸಿದ ಕೆಲಸಗಳನ್ನು ನಿರ್ವಹಿಸಬೇಕು ಎಂದು ಜಿಲ್ಲಾಧಿಕಾರಿಗಳಾದ ಶಿಲ್ಪಾ ನಾಗ್ ಹಾಗೂ ಮೈಸೂರು ಜಿಲ್ಲಾಧಿಕಾರಿ ಡಾ. ಕೆ.ವಿ. ರಾಜೇಂದ್ರ ಅವರು ಸೂಚನೆ ನೀಡಿದರು.

ಮೈಸೂರು ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕಾಧಿಕಾರಿ ಕೆ.ಎಂ. ಗಾಯಿತ್ರಿ, ಚಾಮರಾಜನಗರ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಪದ್ಮಿನಿ ಸಾಹು, ಮೈಸೂರು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಸೀಮಾ ಲಾಟ್ಕರ್, ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶ ಅರಣ್ಯ ಸಂರಕ್ಷಣಾಧಿಕಾರಿ ಹಾಗೂ ನಿರ್ದೇಶಕರಾದ ರಮೇಶ್‌ಕುಮಾರ್, ಚಾಮರಾಜನಗರ ಜಿಲ್ಲೆಯ ಹೆಚ್ಚುವರಿ ಜಿಲ್ಲಾಧಿಕಾರಿ ಗೀತಾ ಹುಡೇದ, ಉಪವಿಭಾಗಾಧಿಕಾರಿ ಮಹೇಶ್, ಉಭಯ ಜಿಲ್ಲೆಗಳ ತಹಶೀಲ್ದಾರರು, ಸಹಾಯಕ ಚುನಾವಣಾಧಿಕಾರಿಗಳು, ಪ್ರಾದೇಶಿಕ ಸಾರಿಗೆ ಅಧಿಕಾರಿಗಳು, ಅರಣ್ಯ, ಅಬಕಾರಿ, ಪೊಲೀಸ್, ಇನ್ನಿತರ ಇಲಾಖೆಗಳ ಅಧಿಕಾರಿಗಳು ಸಭೆಯಲ್ಲಿ ಉಪಸ್ಥಿತರಿದ್ದರು.

# ಸಂವಿಧಾನ ಜಾಗೃತಿ ಜಾಥಾ



**ಚಾಮರಾಜನಗರ:** ಗುಂಡ್ಲುಪೇಟೆ ತಾಲೂಕಿನ ಚಿಕ್ಕಾಟಿ ಗ್ರಾಮದಲ್ಲಿಂದು ಸಂವಿಧಾನ ಜಾಗೃತಿ ಜಾಥಾಗೆ ಸಡಗರ ಸಂಭ್ರಮದಿಂದ ನಡೆಯಿತು.

ಸ್ತಬ್ಧ ಚಿತ್ರದಲ್ಲಿ ಡಾ. ಬಿ.ಆರ್. ಅಂಬೇಡ್ಕರ್ ಪ್ರತಿಮೆಗೆ ಮಾಲಾರ್ಪಣೆ ಮಾಡಿ ಬರಮಾಡಿಕೊಳ್ಳಲಾಯಿತು. ವೀರಗಾಸೆ, ಡೊಳ್ಳು ಕುಣಿತ, ನಗಾರಿ, ಸತ್ತಿಗೆ ಸೂರಪಾನಿ, ಬೈಕ್ ರ್ಯಾಲಿ, ಅಲಂಕೃತ ಎತ್ತಿನಗಾಡಿಗಳು ಮೆರವಣಿಗೆಯ ವಿಶೇಷವಾಗಿದ್ದವು. ಮಹಿಳೆಯರು ಪೂರ್ಣಕುಂಭ ಸ್ವಾಗತ ನೀಡಿದರು. ಶಾಲಾ ಮಕ್ಕಳು ಬ್ಯಾಂಡ್ ವಾದನ ಮೂಲಕ ಉತ್ಸಾಹದಿಂದ ಭಾಗವಹಿಸಿದರು.

ಗ್ರಾಮದ ಬೀದಿಗಳಲ್ಲಿ ಮೆರವಣಿಗೆ ನಡೆದ ಬಳಿಕ ಸರ್ಕಾರಿ ಪ್ರೌಢಶಾಲೆ ಮೈದಾನದಲ್ಲಿ ವೇದಿಕೆ ಕಾರ್ಯಕ್ರಮ ನಡೆಯಿತು. ಕಾರ್ಯಕ್ರಮದಲ್ಲಿ ಉಪನ್ಯಾಸ ನೀಡಿದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಸಹ ಶಿಕ್ಷಕರಾದ ರಮೇಶ್ ಅವರು ಭಾರತದ ಸಂವಿಧಾನ ಶ್ರೇಷ್ಠ ಸಂವಿಧಾನ. ಇದರಿಂದ ಭಾರತದ ಎಲ್ಲಾ ಪ್ರಜೆಗಳಿಗೆ ಸಮಾನ ಅವಕಾಶ ದೊರಕಿದೆ. ಸಮಾನತೆ ಹಾಗೂ ಭಾತೃತ್ವ ಭಾವನೆ ಮೂಡಲು ಸಾಧ್ಯವಾಗಿದೆ ಎಂದು ತಿಳಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಗ್ರಾಮ ಪಂಚಾಯತಿ ಅಧ್ಯಕ್ಷರಾದ ಹೊಣಕಾರ ನಾಯಕ ವಹಿಸಿದ್ದರು. ಜಿಲ್ಲಾ ಪಂಚಾಯತಿ ಮಾಜಿ ಅಧ್ಯಕ್ಷರಾದ ಮುನಿರಾಜು, ಗ್ರಾಮ ಪಂಚಾಯತಿ ಸದಸ್ಯರಾದ ಪದ್ಮ, ಮಹೇಶ್, ಭಾಗ್ಯ, ಸಿ.ಎಸ್. ಚೈತ್ರ, ಶಿವಣ್ಣ ನಾಯಕ, ವೆಂಕಟನಾಯಕ, ಮಹದೇವ ಕುಮಾರ್, ಪಿ.ಎಂ. ಭವ್ಯ, ಜಯಣ್ಣ, ಅಶ್ವಿನಿ, ಬಂಗಾರ ನಾಯಕ ಟಿ.ಎಸ್ ರಾಜಪ್ಪ, ಮಹದೇವಮ್ಮ, ಚಿನ್ನಮ್ಮ ತಾಲೂಕು ಪಂಚಾಯಿತಿ ಮಾಜಿ ಉಪಾಧ್ಯಕ್ಷರಾದ ಬಂಗಾರ ನಾಯಕ, ಸಮಾಜ ಕಲ್ಯಾಣ ಇಲಾಖೆಯ ಸಹಾಯಕ ನಿರ್ದೇಶಕರಾದ ಬಿ.ಯು. ಮೋಹನ್ ಕುಮಾರ್, ಪಶುಸಂಗೋಪನೆ ಇಲಾಖೆಯ ಸಹಾಯಕ ನಿರ್ದೇಶಕರಾದ ಡಾ. ಮೋಹನ್ ಕುಮಾರ್, ಪಂಚಾಯತ್ ಅಭಿವೃದ್ಧಿ ಅಧಿಕಾರಿ ಶಕುಂತಲ ಭಾಗವಹಿಸಿದ್ದರು. ಶಾಲಾ ಮಕ್ಕಳಿಗೆ ವಿವಿಧ ಸ್ಪರ್ಧೆಗಳನ್ನು ಏರ್ಪಡಿಸಿ ಬಹುಮಾನ ವಿತರಣೆ ಮಾಡಲಾಯಿತು, ಪುಸ್ತಕ ಜೋಳಿಗೆ ಕಾರ್ಯಕ್ರಮದ ಮೂಲಕ ಗ್ರಾಮಸ್ಥರಿಂದ ಪುಸ್ತಕಗಳನ್ನು ಸಂಗ್ರಹಿಸಿ ಗ್ರಾಮ ಪಂಚಾಯಿತಿ ಗ್ರಂಥಾಲಯಕ್ಕೆ ನೀಡಲಾಯಿತು.



**ತುಮಕೂರಿನಲ್ಲಿ ಗುರುವಾರ ನಡೆದ ರಾಜ್ಯ ಸರ್ಕಾರಿ ನೌಕರರ ಜಿಲ್ಲಾ ಮಟ್ಟದ ಕ್ರೀಡಾಕೂಟದ ಯೋಗ ಸ್ಪರ್ಧೆಯಲ್ಲಿ ಹುಳಿಯಾರಿನ ಇಂದಿರಮ್ಮ, ಶಕುಂತಲಮ್ಮ, ಶಿರಾ ಜಗದಾಂಭ, ಕೊರಟಗೆರೆ ಸುಶೀಲಮ್ಮ ಅವರುಗಳು ವಿಜೇತರಾಗಿ ರಾಜ್ಯ ಮಟ್ಟಕ್ಕೆ ಆಯ್ಕೆಯಾಗಿದ್ದಾರೆ.**

# ವಿಜಯಪುರ ಡೇರಿ ಸಂಘದಲ್ಲಿ ಜೆಡಿಎಸ್ ಬೆಂಬಲಿತರ ಗೆಲುವು



**ವಿಜಯಪುರ:** ವಿಜಯಪುರ ಕಳೆದ ಒಂದು ವಾರಗಳಿಂದಲೂ ಪಟ್ಟಣದಲ್ಲಿ ತೀವ್ರ ಕುತೂಹಲ ಮೂಡಿಸಿದ್ದ ಹಾಲು ಉತ್ಪಾದಕ ಸಹಕಾರ ಸಂಘದ ಚುನಾವಣೆ ಕಾಂಗ್ರೆಸ್ ಹಾಗೂ ಜೆಡಿಎಸ್ ಪಕ್ಷಗಳ ಪ್ರತಿಷ್ಠೆಯ ವಿಷಯವಾಗಿ ನಡೆದಿದ್ದು, ಕೊನೆಗೆ ಗುರುವಾರದಂದು ಚುನಾವಣೆ ನಡೆದು, ಮತ ಎಣಿಕೆಯ ನಂತರ 12 ಮಂದಿ ನಿರ್ದೇಶಕ ಸ್ಥಾನದ ಪೈಕಿ, ಏಳು ಮಂದಿ ಜೆಡಿಎಸ್ ಹಾಗೂ ಬಿಜೆಪಿ ಬೆಂಬಲಿತ ಅಭ್ಯರ್ಥಿಗಳು ಮೂವರು ಕಾಂಗ್ರೆಸ್ ಬೆಂಬಲಿತ ಅಭ್ಯರ್ಥಿಗಳು, ಇಬ್ಬರು ಪಕ್ಷೇತರರು ಆಯ್ಕೆಯಾಗಿದ್ದು, ಒಟ್ಟಾರೆ ಪಟ್ಟಣದ ಹಾಲು ಉತ್ಪಾದಕ ಸಹಕಾರ ಸಂಘದಲ್ಲಿ ಸುಮಾರು 20 ವರ್ಷಗಳಿಗೂ ಹೆಚ್ಚು ಕಾಲದಿಂದ ಜೆಡಿಎಸ್ ಬೆಂಬಲಿತ ಅಭ್ಯರ್ಥಿಗಳೇ ಆಯ್ಕೆಯಾಗುತ್ತ ಡೇರಿಯ ಅಧಿಕಾರ ಹಿಡಿದಿರುವುದು ಮುಂದುವರೆಯುತ್ತದೆ. ಈ ಸಂದರ್ಭದಲ್ಲಿ ಜೆಡಿಎಸ್ ಟೌನ್ ಅಧ್ಯಕ್ಷರಾದ ಸಿ ನಾರಾಯಣಸ್ವಾಮಿ ರವರು ಮಾತನಾಡಿ, ವ್ಯಕ್ತಿಗಿಂತ ಪಕ್ಷ ಮುಖ್ಯವಾಗಿದ್ದು ಈ ಚುನಾವಣೆಯಲ್ಲಿ ಅದು ಸಾಬೀತಾಗಿದೆ ಎಂದು ತಿಳಿಸಿ, ಎಚ್ ಡಿ ದೇವೇಗೌಡರು ಹಾಗೂ ಹೆಚ್ ಡಿ ಕುಮಾರಸ್ವಾಮಿ ರವರ ಮಾರ್ಗದರ್ಶನದಲ್ಲಿ ಡೇರಿ ಇನ್ನೂ ಹೆಚ್ಚಿನ ಅಭಿವೃದ್ಧಿ ಹೊಂದಲು ಶ್ರಮಿಸುವುದಾಗಿ ತಿಳಿಸಿದ್ದು, ಎನ್.ಡಿ.ಎ ಮೈತ್ರಿಕೂಟದ ಭಾಗವಾಗಿರುವ ಜೆಡಿಎಸ್ ಪಕ್ಷದ ಅಭ್ಯರ್ಥಿಗಳನ್ನು ಬಿಜೆಪಿ ಮತ್ತಿತರರು ಬೆಂಬಲಿಸಿದ್ದು, ಬಿಜೆಪಿ ಪಕ್ಷದ ಅಧ್ಯಕ್ಷರು ಹಾಗೂ ಪದಾಧಿಕಾರಿಗಳಿಗೂ ಅಭಿನಂದನೆ ತಿಳಿಸುವುದಾಗಿ ಹೇಳಿದರು. ಚುನಾವಣಾ ಅಧಿಕಾರಿಯಾಗಿ ಚೇತನರವರು ಕಾರ್ಯನಿರ್ವಹಿಸಿದ್ದು ಗೆದ್ದ ಜೆಡಿಎಸ್ ಪಕ್ಷದ ಅಭ್ಯರ್ಥಿಗಳು ಪಟ್ಟಣದ ಮುಖ್ಯಬೀದಿಗಳಲ್ಲಿ ಮೆರವಣಿಗೆ ನಡೆಸುವ ಮೂಲಕ ವಿಜಯೋತ್ಸವ ಆಚರಿಸಿದರು. ಚುನಾವಣೆ ಮತ ಎಣಿಕೆ ಸಂದರ್ಭದಲ್ಲಿ ಜೆ.ಡಿ.ಎಸ್ ನ ಮುಖಂಡರಾದ ಮಹೇಶ್, ಪ್ರಕಾಶ್, ಪುರಸಭಾ ಸದಸ್ಯರಾದ ರವಿ, ಮಹಬೂಬ್ ಪಾಷಾ, ಕಾಂಗ್ರೆಸ್ ಮುಖಂಡರಾದ ಅನೀಫುಲ್ಲಾ, ವಿ.ಎಂ.ನಾಗರಾಜು, ನಾರಾಯಣಸ್ವಾಮಿ, ಮತ್ತಿತರರು ಉಪಸ್ಥಿತರಿದ್ದರು. ಈ ಬಾರಿಯು ಹಾಲೂ ಉತ್ಪಾದಕರ ಸಹಕಾರ ಸಂಘದ ಚುನಾವಣೆಯು ಎರಡು ಪಕ್ಷಗಳ ಗೆಲುವು ತುಂಬಾ ಪ್ರತಿಷ್ಠೆಯಾಗಿತ್ತು. ಬೆಳಗ್ಗೆ ಹತ್ತು ಗಂಟೆಗೆ ಮತ ಹಾಕುವುದು ಶುರವಾದ ಹಿನ್ನಲೆಯಿಂದ ಸಂಜೆ ಮೂರು ಗಂಟೆಯವರೆಗೂ ಮತವನ್ನು ಚಲಾಯಿಸುತ್ತಿರುವುದು ಕಂಡು ಬಂತು. ಇನ್ನೂ ಮತ ಹಾಕಲು ಬಂದ ಮತದಾರರ ಓಲೈಕೆಗಾಗಿ ಎರಡು ಪಕ್ಷದ ಕಾರ್ಯಕರ್ತರು ಮುಗಿಬಿದ್ದು ದೃಶ್ಯಗಳು ಕಂಡು ಬಂತು. ಇನ್ನೂ ಎರಡು ಪಕ್ಷಗಳು ಗೆಲ್ಲಬೇಕೆಂಬ ದೃಷ್ಟಿಯಿಂದ ಎರಡು ಪಕ್ಷಗಳು ಮತದಾರರಿಗೆ ಹಲವಾರು ಉಡುಗೊರೆ ಜೊತೆಗೆ ಹಣದ ಹೊಳೆಯನ್ನು ನೀಡಿದ್ದಾರೆ ಎಂದು ಸಾರ್ವಜನಿಕ ವಲಯದಲ್ಲಿ ತಿಳಿದುಬಂತು.

# ಆರಂಭವಾಗದ ಕೊಬ್ಬರಿ ನೊಂದಣಿ

**ಹುಳಿಯಾರು:** ಸೋಮವಾರ ವಿಧಾನ ಪರಿಷತ್‌ನಲ್ಲಿ ಕೃಷಿ ಮಾರುಕಟ್ಟೆ ಸಚಿವ ಶಿವಾನಂದ್ ಪಾಟೀಲರು ರಾಜ್ಯದೆಲ್ಲೆಡೆ ಬುಧವಾರದಿಂದ ನೋಂದಣಿ ಪ್ರಕ್ರಿಯೆ ಆರಂಭವಾಗಲಿದೆ ಎಂದು ತಿಳಿಸಿದ್ದರು. ಆದರೆ ಬುಧವಾರ



ನೊಂದಣಿ ಆರಂಭವಾಗದ ಹಲವಾರು ರೈತರು ಕಾದು ಕಾದು ವಾಪಸ್ ಆಗಿದ್ದಾರೆ. ಸಂಬಂಧಿಸಿದ ಅಧಿಕಾರಿಗಳನ್ನು ಪ್ರಶ್ನಿಸಿದರೆ ನಮಗೇನು ಗೊತ್ತಿಲ್ಲ, ಮಾಹಿತಿ ಇಲ್ಲ ಅನ್ನುವ ಉತ್ತರ ನೀಡುತ್ತಿದ್ದಾರೆ, ನೋಂದಣಿ ಪ್ರಕ್ರಿಯೆ ಪ್ರರಬಿಸುವ ದಿನಾಂಕವನ್ನು ಪ್ರಕಟಿಸದಿರುವುದು ರೈತರ ಆತಂಕಕ್ಕೆ ಕಾರಣವಾಗಿದೆ ಎಂದು ಕೆಆರ್‌ಎಸ್ ಪಕ್ಷದ ಮುಖಂಡ ಸಬ್ಬೇನಹಳ್ಳಿ ಶ್ರೀನಿವಾಸ್ ತಿಳಿಸಿದ್ದಾರೆ. ಕಳೆದ ಬಾರಿ ನೋಂದಣಿ ಪ್ರಕ್ರಿಯೆ ಆರಂಭವಾದ ನಂತರ ಎಲ್ಲಾ ರೈತರು ಕೊಬ್ಬರಿ ಸುಲಿದು ಮಾರಲು ಕಾಯುತ್ತಿದ್ದರು. ಈಗ ಹಳೆಯ ನೊಂದಣಿ ರದ್ದಾಗಿ ಹೊಸ ನೊಂದಣಿ ಮಾಡಿಕೊಳ್ಳುವುದಾಗಿ ಹೇಳಿದ್ದರು. ಈಗ ಹೊಸ ನೊಂದಣಿ ಆರಂಭಿಸದೆ ದಿನ ದೂಡುತ್ತಿರುವುದು ಕೊಬ್ಬರಿ ಸುಲಿದಿರುವ ರೈತರಲ್ಲಿ ಕೊಬ್ಬರಿಯ ಗುಣಮಟ್ಟ ಹಾಳಾಗುವ ಆತಂಕ ಕಾಡುತ್ತಿದೆ. ಹಾಳಾದ ಕೊಬ್ಬರಿಗೆ ಸರ್ಕಾರ ಹಾಗೂ ಅಧಿಕಾರಿಗಳೇ ಹೊಣೆ ರೈತರ ಜೊತೆ ಚೆಲ್ಲಾಟವಾಡದೆ ಶೀಘ್ರ ನೊಂದಣಿ ಆರಂಭಿಸಿ ಖರೀಧಿ ಪ್ರಕ್ರಿಯೆ ಆರಂಭಿಸಬೇಕು. ತಡವಾದರೆ ಹಾಳಾಗಿರುವ ಕೊಬ್ಬರಿ ಸುಲಿದು ಪ್ರತಿಭಟನೆ ಮಾಡಬೇಕಾಗುತ್ತದೆ. ಸರ್ಕಾರದ ವಿಳಂಬಧೋರಣೆಯಿಂದ ರೈತರಿಗಾದ ನಷ್ಟದ ಪರಿಹಾರಕ್ಕಾಗಿ ನ್ಯಾಯಾಲಯದ ಮೊರೆ ಹೋಗಬೇಕಾಗುತ್ತದೆ ಎಂದು ಶ್ರೀನಿವಾಸ್ ಎಚ್ಚರಿಕೆ ನೀಡಿದ್ದಾರೆ.

# ಅಗ್ನಿ ಅವಘಡಗಳ ಪ್ರಾತ್ಯಕ್ಷಿಕೆ



**ಚಾಮರಾಜನಗರ:** ಅಗ್ನಿಶಾಮಕ ಮತ್ತು ತುರ್ತು ಸೇವಾ ಇಲಾಖೆ ವತಿಯಿಂದ ಅಗ್ನಿ ಅವಘಡಗಳ ಅರಿವು ಮತ್ತು ಅನಾಹುತ ತಡೆಗಟ್ಟುವ ದಿನದ ಅಂಗವಾಗಿ ಇಂದು ನಗರದಲ್ಲಿ ಅಗ್ನಿ ಅನಾಹುತ ಮತ್ತು ಮುನ್ನೆಚ್ಚರಿಕೆ ಕ್ರಮಗಳ ಬಗ್ಗೆ ಉಪನ್ಯಾಸ, ಪ್ರಾತ್ಯಕ್ಷಿಕೆ ಮೂಲಕ ಅರಿವು ಮೂಡಿಸುವ ಕಾರ್ಯಕ್ರಮ ನಡೆಸಲಾಯಿತು.

2010 ಫೆಬ್ರವರಿ 23ರಂದು ಬೆಂಗಳೂರಿನ ಕಾರ್ಟನ್ ಟವರ್ ಬಹುಮಹಡಿ ಕಟ್ಟಡದಲ್ಲಿ ಸಂಭವಿಸಿದ ಅಗ್ನಿ ದುರಂತದಲ್ಲಿ ಸುಮಾರು 50 ಜನ ಗಾಯಗೊಂಡು, 9 ಜನ ಮೃತರಾದರು. ಈ ಸ್ಮರಣಾರ್ಥವಾಗಿ ಸರ್ಕಾರ ಫೆಬ್ರವರಿ 23ರಂದು ಪ್ರತಿ ವರ್ಷ ಅಗ್ನಿ ಅವಘಡಗಳ ಅರಿವು ಮತ್ತು ಅನಾಹುತ ತಡೆಗಟ್ಟುವ ದಿನವನ್ನಾಗಿ ಆಚರಿಸಲಾಗುತ್ತಿದೆ.

ಈ ಹಿನ್ನೆಲೆಯಲ್ಲಿ ಚಾಮರಾಜನಗರ ಜಿಲ್ಲೆಯ ತಾಲೂಕುಗಳಲ್ಲಿ ಮತ್ತು ಜಿಲ್ಲಾ ಕೇಂದ್ರದಲ್ಲಿ ಬೆಳಿಗ್ಗೆ ಮೌನಾಚರಣೆ ಮೂಲಕ ಗೌರವ ಸಲ್ಲಿಸಲಾಯಿತು. ಶಾಲೆ, ಕಾಲೇಜುಗಳು, ಬಸ್‌ನಿಲ್ದಾಣ ಹಾಗೂ ಡಿಪೋ, ಕೆ.ಇ.ಬಿ ಕಚೇರಿ ಜನನಿಬಿಡ ಪ್ರದೇಶಗಳಲ್ಲಿ ಜನರಲ್ಲಿ ಅಗ್ನಿ ಅನಾಹುತ ಮತ್ತು ಮುನ್ನೆಚ್ಚರಿಕೆ ಕ್ರಮಗಳ ಬಗ್ಗೆ ಬಿತ್ತಿಪತ್ರ, ಪ್ರದರ್ಶನ ಮತ್ತು ಉಪನ್ಯಾಸ, ಪ್ರಾತ್ಯಕ್ಷಿಕೆ ಮೂಲಕ ಅರಿವು ಮೂಡಿಸುವ ಕಾರ್ಯಕ್ರಮವನ್ನು ನಡೆಸಲಾಯಿತು. ಕಾರ್ಯಕ್ರಮದಲ್ಲಿ ಮಾತನಾಡಿದ ಜಿಲ್ಲಾ ಅಗ್ನಿಶಾಮಕ ಅಧಿಕಾರಿ ಕೆ.ಪಿ ಗುರುರಾಜ್ ಅವರು ಯಾವುದೇ ಅನಾಹುತ, ಪ್ರಕೃತಿ ವಿಕೋಪಗಳು ಸಂಭವಿಸಿದಾಗ ಜನರು ದೃತಿಗೆಡದೆ ಅವಸರದ ಅಪಾಯದ ನಿರ್ಧಾರಗಳಿಗೆ ಮುಂದಾಗಬಾರದು. ರಕ್ಷಣೆಗೆ ಅಗ್ನಿಶಾಮಕ ಇಲಾಖೆ ಸದಾ ಕಟಿಬದ್ಧವಾಗಿದ್ದು, ನಮ್ಮ ಅಧಿಕಾರಿ ಸಿಬ್ಬಂದಿ ಅಗ್ನಿಶಾಮಕ ವಾಹನಗಳೊಂದಿಗೆ ನಿಮ್ಮ ರಕ್ಷಣೆಗಾಗಿ ಧಾವಿಸಿ ಬರುತ್ತಾರೆ ಎಂದರು.

ಅನಾಹುತ ಸಂಭವಿಸಿದ ಸಂದರ್ಭದಲ್ಲಿ ಕಟ್ಟಡದಿಂದ ಜಿಗಿಯುದಾಗಲಿ, ನೀರಿಗೆ ಹಾರುವಂತಹ ಅಪಾಯದ ನಿರ್ಧಾರವನ್ನ ತೆಗೆದುಕೊಂಡು ಜೀವಕ್ಕೆ ತೊಂದರೆ ಮಾಡಿಕೊಳ್ಳಬಾರದು. ಹಾಗೆಯೇ ಯಾವುದೇ ಅನಾಹುತಗಳು ಸಂಭವಿಸಿದ ಮೇಲೆ ಎಚ್ಚೆತ್ತುಕೊಳ್ಳುವುದಕ್ಕಿಂತ ಯಾವುದೇ ಅವಘಡಗಳು ಸಂಭವಿಸದಂತೆ ಮುನ್ನೆಚ್ಚರಿಕೆ ವಹಿಸುವುದು ಮುಖ್ಯ ಎಂದು ಗುರುರಾಜ್ ಅವರು ತಿಳಿಸಿದರು. ಅಗ್ನಿಶಾಮಕ ಅಧಿಕಾರಿ ಶಿವಾಜಿರಾವ್ ಪವಾರ್, ಇತರೆ ಸಿಬ್ಬಂದಿ ಇದ್ದರು.

# ಮಕ್ಕಳ ಕವಿಗೆ 'ಲಕ್ಷರೂ. ಹಮ್ಮಿಣಿ'ಯ ಧನ್ಯವಾದ

**ಕಲಬುರಗಿ:** ಮಕ್ಕಳ ಸಾಹಿತ್ಯ ಕ್ಷೇತ್ರದ ಅದ್ವಿತೀಯ ಸಾಧನೆಗೈದ ಹಿರಿಯ ಲೇಖಕರಾದ ಎ.ಕೆ. ರಾಮೇಶ್ವರ ಅವರು 50 ವರ್ಷ ಸಲ್ಲಿಸಿದ ಸಾಹಿತ್ಯದ ಸೇವೆಯ ಹಿನ್ನೆಲೆಯಲ್ಲಿ ಒಂದು ಲಕ್ಷ ರೂ.ಹಮ್ಮಿಣಿ ಕೊಡುವ ಮೂಲಕ ಗೌರವಿಸುವಂಥ ವಿಶಿಷ್ಟ ಮತ್ತು ವಿಭಿನ್ನ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ ಎಂದು ಕಾರ್ಯಕ್ರಮದ ಆಯೋಜಕರೂ ಆಗಿರುವ ಪತ್ರಕರ್ತ, ಸಾಹಿತಿ ಮಹಿಪಾಲರೆಡ್ಡಿ ಮುನ್ನೂರ್ ತಿಳಿಸಿದ್ದಾರೆ.

91 ವರ್ಷದ ಹಿರಿಯ ಲೇಖಕರಾದ ಎ.ಕೆ.ರಾಮೇಶ್ವರ ಅವರು ಮಕ್ಕಳ ಸಾಹಿತ್ಯ ಕ್ಷೇತ್ರಕ್ಕೆ ಸುಮಾರು 12 ಕವನ ಸಂಕಲನಗಳನ್ನು ಕೊಟ್ಟಿರುವ ಏಕೈಕ ಕವಿಯಾಗಿದ್ದು, ಕಲಬುರಗಿ ನೆಲದಲ್ಲಿದ್ದುಕೊಂಡು, ಇಡೀ ಕರ್ನಾಟಕವನ್ನು ಈಕಡೆ ನೋಡುವಂತೆ ಮಾಡಿದ್ದಾರೆ. ಮಕ್ಕಳ ಸಾಹಿತ್ಯ ಸಂದರ್ಭದಲ್ಲಿ ಎ.ಕೆ.ರಾಮೇಶ್ವರ ಅವರದು ಅದ್ವಿತೀಯ ಸಾಧನೆಯಾಗಿದ್ದು, ಇದನ್ನು ಮನಗಂಡು, ಕಲಬುರಗಿ ನೆಲದ ಸಾಹಿತ್ಯಾಭಿಮಾನಿಗಳು ಅವರಿಗೆ 'ಧನ್ಯವಾದ' ಹೇಳುವುದಕ್ಕಾಗಿ ವಿಶಿಷ್ಟವಾದ ಕೃತಿಯೊಂದನ್ನು ಅರ್ಪಿಸುವುದಲ್ಲದೇ, ಒಂದು ಲಕ್ಷ ರೂ. ಹಮ್ಮಿಣಿಯನ್ನು ನೀಡಿ ಗೌರವಿಸಲಾಗವುದು ಎಂದು ಅವರು ತಿಳಿಸಿದ್ದಾರೆ.

ರಾಮೇಶ್ವರ ಅವರು ಬರೆದಿರುವ 12 ಮಕ್ಕಳ ಸಾಹಿತ್ಯ ಕೃತಿಗಳನ್ನು ಕ್ರೋಢೀಕರಿಸಿ, ಅವುಗಳಲ್ಲಿ 19 ವಿಶಿಷ್ಟ ವೈವಿಧ್ಯಮಯ ವಿಷಯಗಳ ವಸ್ತುಗಳ ಬಗ್ಗೆ 19 ಲೇಖಕರಿಂದ ಸಂಶೋಧನಾತ್ಮಕ ಲೇಖನಗಳನ್ನು ಬರೆಯಿಸಿ, ಮಹಿಪಾಲರೆಡ್ಡಿ ಸೇಡಂ ನುಡಿಸಾರಥ್ಯದ 'ಬಿಸಿಲನಾಡಿನ ಬೆಳದಿಂಗಳು' ಎಂಬ ವಿಭಿನ್ನ ಕೃತಿಯನ್ನು, ಮಾ.3 ರಂದು ಕಲಬುರಗಿ ನಗರದ ಚೇಂಬರ್ ಆಫ್ ಕಾಮರ್ಸ್ ಸಭಾಂಗಣದಲ್ಲಿ ಸಂಜೆ 4 ಕ್ಕೆ ಲೋಕಾರ್ಪಣೆ ಮಾಡಲಾಗುವುದು. ಸಚಿವರು, ಶಾಸಕರು ಸೇರಿದಂತೆ ಗಣ್ಯರು ಭಾಗವಹಿಸುವ ಈ ಸಮಾರಂಭದಲ್ಲಿ ಹಿರಿಯ ಲೇಖಕರು, ಸಾಹಿತಿಗಳು, ಪತ್ರಕರ್ತರು ಸೇರಿದಂತೆ ಸಾಹಿತ್ಯಾಸಕ್ತರು ಭಾಗವಹಿಸುವರು. 'ಬಿಸಿಲನಾಡಿನ ಬೆಳದಿಂಗಳು' ಈ ಕೃತಿಯಲ್ಲಿ ಎ.ಕೆ.ರಾಮೇಶ್ವರರ ಮಕ್ಕಳ ಕಾವ್ಯದಲ್ಲಿ 'ವಸ್ತು' ಕುರಿತು ಕಲಬುರಗಿ ರಂಗಾಯಣದ ನಿಕಟಪೂರ್ವ ನಿರ್ದೇಶಕ ಪ್ರಭಾಕರ ಜೋಶಿ ಅವರ ಲೇಖನ, ಎ.ಕೆ.ಆರ್.ಕಾವ್ಯದಲ್ಲಿ 'ಶಾಲೆ' ಕುರಿತು ಗುಲ್ಬರ್ಗ ವಿವಿಯ ಕನ್ನಡ ಪ್ರಾಧ್ಯಾಪಕ ಡಾ.ಎಂ.ಬಿ.ಕಟ್ಟಿ, 'ದೇಶಭಕ್ತಿ' ಬಗ್ಗೆ ಲೇಖಕರಾದ ಡಾ.ಗವಿಸಿದ್ದಪ್ಪ ಪಾಟೀಲ, 'ತಾಯಿ'ಕುರಿತು ಲೇಖಕಿಯಾಗಿರುವ ಡಾ.ವಿಶಾಲಾಕ್ಷಿ ಕರಡ್ಡಿ, ಕಾವ್ಯದ 'ಶೈಲಿ' ಬಗ್ಗೆ ವಿಮರ್ಶಕ ಗುರುಶಾಂತಯ್ಯ ಭಂಟನೂರು, 'ಗೇಯತೆಯ ಕಾವ್ಯ' ಕುರಿತು ಡಾ.ಲಕ್ಷ್ಮೀ ಶಂಕರ ಜೋಶಿ, 'ಶರಣ ಸಂಸ್ಕೃತಿ'ಯ ಕುರಿತು ಪ್ರೊ. ಶೋಭಾದೇವಿ ಚೆಕ್ಕಿ, 'ದಾರ್ಶನಿಕರು' ಕುರಿತು ರಂಗತಜ್ಞೆ ಡಾ.ಸುಜಾತಾ ಜಂಗಮಶೆಟ್ಟಿ, 'ಪಕ್ಷಿ-ಪ್ರಾಣಿ ಪ್ರಪಂಚ' ಬಗ್ಗೆ ಲೇಖಕಿ ಪ್ರೇಮಾ ಹೂಗಾರ ಬೀದರ್, 'ಶ್ರೀ ಸಾಮಾನ್ಯ' ಬಗ್ಗೆ ಕನ್ನಡ ಪ್ರಾಧ್ಯಾಪಕ ಡಾ.ಮಲ್ಲಿನಾಥ ತಳವಾರ, 'ಹಬ್ಬಗಳು'ಬಗ್ಗೆ ಲೇಖಕಿ ಡಾ.ಶೈಲಜಾ ಬಾಗೇವಾಡಿ, 'ಕಥನ ಕಾವ್ಯ' ಕುರಿತು ಮಕ್ಕಳ ಸಾಹಿತಿ ಮಂಡಲಗಿರಿ ಪ್ರಸನ್ನ, 'ಕ್ರೀಡೆ' ಬಗ್ಗೆ ಅಫಜಲಪುರದ ಶಿಕ್ಷಕ ಡಿ.ಎಂ.ನದಾಫ, 'ಮಹಾಪುರುಷರು' ಬಗ್ಗೆ ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಮಾಜಿ ಸದಸ್ಯ ಸುರೇಶ ಬಡಿಗೇರ, 'ಮಗು'ವಿನ ಬಗ್ಗೆ ಶಿಕ್ಷಕಿ ಪರವಿನ್ ಸುಲ್ತಾನಾ, 'ದೈವತ್ವ'ದ ಬಗ್ಗೆ ಲೇಖಕ ಜಗನ್ನಾಥ ತರನಳ್ಳಿ, ಕಾವ್ಯದಲ್ಲಿ 'ಪರಿಸರ' ಕುರಿತು ಲೇಖನವನ್ನು ಕಿರಣ್ ಪಾಟೀಲ ಲೇಖನಗಳನ್ನು ಬರೆದಿದ್ದಾರೆ. ಎ.ಕೆ.ರಾಮೇಶ್ವರ ಅವರು ಬರೆದ ಕವಿತೆಗಳಲ್ಲಿ ಕೆಲವು ಪಠ್ಯ ಪುಸ್ತಕಗಳಲ್ಲಿ ಬಳಸಲಾಗಿದ್ದು, ಅದರನ್ವಯ 'ಪಠ್ಯವಾದ ಪದ್ಯಗಳು' ಕುರಿತು ಡಾ.ಸುಜಾತಾ ಪಾಟೀಲ ಮತ್ತು 'ದಣಿವರಿಯದ ಸಾಧಕ' ಎಂಬ ಲೇಖನವನ್ನು ಲೇಖಕಿ ಡಾ.ಚಂದ್ರಕಲಾ ಬಿದರಿ ಅವರು ಬರೆದಿದ್ದಾರೆ ಎಂದು ಸಂಪಾದಕ ಮಹಿಪಾಲರೆಡ್ಡಿ ಮುನ್ನೂರ್ ತಿಳಿಸಿದ್ದಾರೆ.

# ರಾಸುಗಳಿಂದ ಅಧಿಕ ಹಾಲು ಕರೆಯುವ ಸ್ಪರ್ಧೆ

**ಚನ್ನಪಟ್ಟಣ:** ರಾಮನಗರ ಜಿಲ್ಲಾ ಪಂಚಾಯತಿ, ಚನ್ನಪಟ್ಟಣ ತಾಲ್ಲೂಕು ಪಂಚಾಯತಿ, ಪಶು ಪಾಲನೆ ಮತ್ತು ಪಶು ವೈದ್ಯಕೀಯ ಸೇವಾ ಇಲಾಖೆ, ಬಮೂಲ್ ಚನ್ನಪಟ್ಟಣ ಶಿಬಿರ ಕಚೇರಿ, ಚನ್ನಪಟ್ಟಣ ತಾಲ್ಲೂಕು ಹಾಲು ಉತ್ಪಾದಕರ ಸಹಕಾರ ಸಂಘಗಳ ಒಕ್ಕೂಟ ಹಾಗೂ ಎ.ವಿ.ಹಳ್ಳಿ ಹಾಲು ಉತ್ಪಾದಕರ ಸಹಕಾರ ಸಂಘದ ಸಂಯುಕ್ತ ಆಶ್ರಯದಲ್ಲಿ ಎ.ವಿ.ಹಳ್ಳಿ ಗ್ರಾಮದಲ್ಲಿ ತಾಲ್ಲೂಕು ಮಟ್ಟದ ರಾಸುಗಳಿಂದ ಅಧಿಕ ಹಾಲು ಕರೆಯುವ ಸ್ಪರ್ಧೆ ಹಮ್ಮಿಕೊಳ್ಳಲಾಗಿತ್ತು.

ಸ್ಪರ್ಧೆಗೆ ಚಾಲನೆ ನೀಡಿದ ಪಶು ಪಾಲನೆ ಮತ್ತು ಪಶು ವೈದ್ಯಕೀಯ ಸೇವಾ ಇಲಾಖೆ ಉಪ ನಿರ್ದೇಶಕ ಡಾ.ಅಂಜನಪ್ಪ ಮಾತನಾಡಿ,2023-24 ನೇ ಸಾಲಿನ ವಿಸ್ತರಣಾ ಘಟಕಗಳ ಬಲಪಡಿಸುವಿಕೆ ಯೋಜನೆ ಅಡಿಯಲ್ಲಿ ಹಾಲು ಕರೆಯುವ ಸ್ಪರ್ಧೆ ಆಯೋಜಿಸಿದ್ದು, ಅತಿ ಹೆಚ್ಚು ಹಾಲು ಉತ್ಪಾದಿಸುತ್ತಿರುವ ಜಾನುವಾರುಗಳನ್ನು ಗುರುತಿಸಿ ಅವುಗಳ ಮಾಲೀಕರನ್ನು ಪ್ರೋತ್ಸಾಹಿಸುವ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದರು.

ಬಮೂಲ್ ಚನ್ನಪಟ್ಟಣ ಶಿಬಿರ ಕಚೇರಿ ಉಪ ನಿರ್ದೇಶಕ ಡಾ.ವೈ.ಎಚ್.ಹೇಮಂತ್ ಮಾತನಾಡಿ,

ಹೈನುಗಾರಿಕೆಕಡಿಮೆಯಾಗುತ್ತಿರುವಂತಹಈಸಂದರ್ಭದಲ್ಲಿ ಇಂತಹ ಕಾರ್ಯಕ್ರಮಗಳನ್ನು ರೂಪಿಸುವುದರಿಂದ ರೈತರು ಆರ್ಥಿಕ ಸಂಕಷ್ಟಗಳಿಂದ ಪಾರಾಗುವುದು ಸುಲಭ ಇಂತಹ



ಕಾರ್ಯಕ್ರಮಗಳಿಂದ ಇನ್ನೂ ಹೆಚ್ಚಿನ ರೈತರು ಹೈನುಗಾರಿಕೆಯ ಕಡೆಗೆ ಒಲವು ತೋರುವಂತಾಗಲಿ ಎಂದು ಹಾರೈಸಿದರು.

ಸ್ಪರ್ಧೆಯಲ್ಲಿ ವಿವಿಧ ಹಳ್ಳಿಗಳಿಂದ 18 ಹೈನುಗಾರರು ಭಾಗವಹಿಸಿದ್ದರು. ಸೋಗಾಲದ ಬೈರೇಶ್ ಪ್ರಥಮ ಬಹುಮಾನ ಹತ್ತು ಸಾವಿರ ರೂ.ಗಳಿಸಿದರೆ, ಎ.ವಿ.ಹಳ್ಳಿಯ ಮೋಹನ್ ದ್ವಿತೀಯ ಬಹುಮಾನ ಏಳೂವರೆ ಸಾವಿರ ರೂ. ಹಾಗೂ ಎ.ವಿ.ಹಳ್ಳಿಯ ಹರ್ಷಿತಾ ತೃತೀಯ ಬಹುಮಾನ ಐದು ಸಾವಿರ ಪಡೆದರು. ಉಳಿದ ಹದಿನೈದು ಮಂದಿ ಹೈನುಗಾರರಿಗೆ ತಲಾ ಒಂದು ಸಾವಿರ ರೂ.ಪ್ರೋತ್ಸಾಹ ಧನ ನೀಡಲಾಯಿತು.

ಪಶು ಇಲಾಖೆ, ಡಾ.ಅಭಿಲಾಷ್ ಹಾಗೂ ಬಮೂಲ್ ಶಿಬಿರ ಕಚೇರಿ ಮೊದಲ ಮೂರು ಬಹುಮಾನಗಳನ್ನು ಕೊಡಮಾಡಿದರೆ, ಪ್ರೋತ್ಸಾಹ ಧನದ ಪ್ರಾಯೋಜಕತ್ವವನ್ನು ಬಾಲಾಜಿ, ಶ್ರೀನಿವಾಸ ಹಾಗೂ ಶ್ರೀಕೃಷ್ಣ ಪಶು ಔಷಧಾಲಯ ಮಾರಾಟ ಮಾಲೀಕರು ವಹಿಸಿಕೊಂಡಿದ್ದರು.

ಪಶು ಪಾಲನೆ ಮತ್ತು ಪಶು ವೈದ್ಯಕೀಯ ಸೇವಾ ಇಲಾಖೆಯ ಡಾ.ವಿವೇಕಾನಂದ, ಸುಳ್ಳೇರಿ ಗ್ರಾಪಂ ಅಧ್ಯಕ್ಷೆ ಸಿದ್ದಮ್ಮ, ಉಪಾಧ್ಯಕ್ಷ ವಿ.ಪಿ.ಯೋಗೇಶ್, ಗ್ರಾಪಂ ಸದಸ್ಯರು, ಎ.ವಿ.ಹಳ್ಳಿ ಡೇರಿ ಅಧ್ಯಕ್ಷ ಗಿರಿಗೌಡ ಹಾಗೂ ನಿರ್ದೇಶಕರು, ಮುಖ್ಯ ಕಾರ್ಯವಾಹಕ ಶಿವರಾಜೇಗೌಡ, ಜಿಲ್ಲೆಯ ಚನ್ನಪಟ್ಟಣ, ರಾಮನಗರ, ಕನಕಪುರ ಹಾಗೂ ಮಾಗಡಿ ತಾಲ್ಲೂಕುಗಳ ಮುಖ್ಯ ಪಶು ವೈದ್ಯಾಧಿಕಾರಿಗಳು (ಆಡಳಿತ),

ಚಕ್ಕಲೂರು ಕೇಂದ್ರದ ಹಿರಿಯ ಪಶು ವೈದ್ಯಕೀಯ ಪರೀಕ್ಷಕ ಡಾ.ಎ.ಸಿ.ಕೃಷ್ಣ, ಸಹಾಯಕ ಆರ್.ಸುಹಾಸ್ ಗೌಡ ಹಾಗೂ ಇಲಾಖೆಯ ಸಿಬ್ಬಂದಿ, ಬಮೂಲ್ ಸಿಬ್ಬಂದಿ, ಎ.ವಿ.ಹಳ್ಳಿ ಹಾಗೂ ಸುತ್ತಮುತ್ತಲಿನ ಗ್ರಾಮದ ಹೈನುಗಾರರು ಭಾಗವಹಿಸಿದ್ದರು.

# ಪಿರಿಯಾಪಟ್ಟಣ ಪುರಸಭಾ ಆಯವ್ಯಯ ಮಂಡನೆ

**ಪಿರಿಯಾಪಟ್ಟಣ:** ಪಟ್ಟಣದ ಅಭಿವೃದ್ಧಿ ಹಾಗೂ ಪ್ರವಾಸಿಗರನ್ನು ಆಕರ್ಷಿಸುವ ಸಲುವಾಗಿ ಪಟ್ಟಣದ ಅರಸನ ಕೆರೆ ಪಾರ್ಕನ್ನು ಅಭಿವೃದ್ಧಿ ಪಡಿಸಲು ರೂ .45 ಲಕ್ಷಗಳನ್ನು ಮೀಸಲಿರಿಸಲಾಗಿದೆ ಎಂದು ಪುರಸಭೆ ಮುಖ್ಯಾಧಿಕಾರಿ ಕುಟ್ಟತ್ತೀರ ಮುತ್ತಪ್ಪ ತಿಳಿಸಿದರು.

ಪಟ್ಟಣದ ಪುರಸಭಾ ಕಚೇರಿಯ ಶುಕ್ರವಾರ 2024-25 ನೇ ಸಾಲಿನ ಬಜೆಟ್ ಮಂಡನ ಸಭೆಯಲ್ಲಿ ಮಾತನಾಡಿದರು. 2024 - 25 ನೇ ಸಾಲಿನಲ್ಲಿ ವಿವಿಧ ಆದಾಯ ಮೂಲಗಳಿಂದ ಪುರಸಭೆಗೆ 21.80 ಕೋಟಿ ರೂ ಆದಾಯ ನಿರೀಕ್ಷಿಸಲಾಗಿದ್ದು, ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಮತ್ತು ಆಡಳಿತ ವೆಚ್ಚ ಹಾಗೂ ನಿರ್ವಹಣಾ ವೆಚ್ಚವಾಗಿ 21.53 ಕೋಟಿ ರೂ ವ್ಯಯವಾಗಲಿದ್ದು 27.25 ಲಕ್ಷ ರೂ ಉಳಿತಾಯ ನಿರೀಕ್ಷಿಸಲಾಗಿದೆ ಎಂದರು.

ಆಸ್ತಿ ತೆರಿಗೆ ಮತ್ತು ಮನೆ ಕಂದಾಯ ತೆರಿಗೆಯಿಂದ 2 ಕೋಟಿ ರೂ, ನೀರಿನ ತೆರಿಗೆಯಿಂದ 1.30 ಕೋಟಿ ರೂ, ವಾಣಿಜ್ಯ ಮಳಿಗೆ ಬಾಡಿಗೆಯಿಂದ 1.30 ಕೋಟಿ ರೂ, ಎಸ್ ಎಫ್ ಸಿ ವಿಶೇಷ ಅನುದಾನದ ಮೂಲಕ 7 ಕೋಟಿ ರೂ, ಎಸ್ ಎಫ್ ಸಿ ವೇತನಾನುದಾನ ದಿಂದ 2.22 ಕೋಟಿ ರೂ, ಸಚಿವರ ಪ್ರೋತ್ಸಾಹ ಧನ ಅನುದಾನ 1.00 ಕೋಟಿ ರೂ ಸೇರಿದಂತೆ ವಿವಿಧ ಆದಾಯಗಳ ಮೂಲಕ ಒಟ್ಟು 21.80 ಕೋಟಿ ರೂ ನಿರೀಕ್ಷಿಸಲಾಗಿದೆ ಎಂದರು.

ಪುರಸಭೆ ಆಡಳಿತ ಮತ್ತು ಕಚೇರಿಯ ನಿರ್ವಹಣಾ ವೆಚ್ಚವಾಗಿ 4.54 ಕೋಟಿ ರೂ, ಕುಡಿಯುವ ನೀರು ಸರಬರಾಜು ವೆಚ್ಚವಾಗಿ 1.45 ಕೋಟಿ ರೂ, ಘನ ತ್ಯಾಜ್ಯ ನಿರ್ವಹಣೆ ವೆಚ್ಚವಾಗಿ 2.32 ಕೋಟಿ ರೂ, ಬೀದಿ ದೀಪ ನಿರ್ವಹಣೆ ವೆಚ್ಚವಾಗಿ 2.26 ಕೋಟಿ ರೂ, ಪುರಸಭೆ ವ್ಯಾಪ್ತಿಯಲ್ಲಿ ವಿವಿಧ ಅಭಿವೃದ್ಧಿ ವೆಚ್ಚವಾಗಿ 10.40 ಕೋಟಿ ರೂ ಸೇರಿದಂತೆ ಒಟ್ಟು 21.53 ಕೋಟಿ ರೂ ವ್ಯಯವಾಗಲಿದೆ ಪುರಸಭಾ ವ್ಯಾಪ್ತಿಯಲ್ಲಿ ಇಂದಿರಾ ಕ್ಯಾಂಟ್ ನಿರ್ಮಾಣ ಮಾಡಲು 50 ಲಕ್ಷ ರೂ, ಮಾರುಕಟ್ಟೆ ಅಭಿವೃದ್ಧಿಗಾಗಿ 1.00 ಕೋಟಿ ರೂ, ಉದ್ಯಾನವನಗಳ ಅಭಿವೃದ್ಧಿಗಾಗಿ 25 ಲಕ್ಷ ರೂ, 15ನೇ ಹಣಕಾಸು ಅನುದಾನದಲ್ಲಿ ರಸ್ತೆ ಮತ್ತು ಚರಂಡಿ ಅಭಿವೃದ್ಧಿಗಾಗಿ 75.ಲಕ್ಷ ರೂ, ಹಾಗೂ ಎಸ್ಎಫ್ ಸಿ ವಿಶೇಷ ಅನುದಾನದಲ್ಲಿ ಪುರಸಭಾ ವ್ಯಾಪ್ತಿಯಲ್ಲಿ ರಸ್ತೆ ಚರಂಡಿ ಮತ್ತು ಇತರೆ ಅಭಿವೃದ್ಧಿಗಾಗಿ 7.00 ಕೋಟಿ ರೂ ಮೀಸಲಿಡಲಾಗಿದೆ ಎಂದರು.

ಈ ಸಂದರ್ಭದಲ್ಲಿ ಪುರಸಭಾ ಮಾಜಿ ಅಧ್ಯಕ್ಷರಾದ ಮಂಜುನಾಥ ಸಿಂಗ್, ಕೆ.ಮಹೇಶ್, ಸದಸ್ಯರಾದ ಎಚ್.ಕೆ.ಮಂಜುನಾಥ್, ಶ್ಯಾಮ್, ಹರ್ಷದ್, ಪಿ.ಎನ್.ವಿನೋದ್, ರತ್ನಮ್ಮ, ಆಶಾ, ಮಂಜುಳಾ, ಪುಷ್ಪಲತಾ, ಸುವರ್ಣ, ಪ್ರಕಾಶ್, ಮಹೇಶ್ ಸಿಬ್ಬಂದಿಗಳಾದ ಆದರ್ಶ್ ಮಹದೇವಸ್ವಾಮಿ, ಪ್ರದೀಪ್, ಶರ್ಮಿಳಾ, ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು.



### ಅಧಿಕಾರಿಗಳ ಸಭೆ ನಡೆಸಿದ ಜಿಲ್ಲಾಧಿಕಾರಿ ಪಿ.ಎನ್.ರವೀಂದ್ರ

# ಚುನಾವಣಾ ಪೂರ್ವ ಸಿದ್ಧತೆ

**ಚಿಕ್ಕಬಳ್ಳಾಪುರ:** ಚುನಾವಣೆಯ ಕರ್ತವ್ಯಕ್ಕೆ ನಿಯೋಜನೆಗೊಂಡಿರುವ ಅಧಿಕಾರಿಗಳು ನಿಷ್ಪಕ್ಷಪಾತ ಹಾಗೂ ಪ್ರಾಮಾಣಿಕತೆಯಿಂದ ಕಾರ್ಯನಿರ್ವಹಿಸಲು ಜಿಲ್ಲಾಧಿಕಾರಿ ಪಿ.ಎನ್.ರವೀಂದ್ರ ಅವರು ಅಧಿಕಾರಿಗಳಿಗೆ ಸೂಚನೆಗಳನ್ನು ನೀಡಿದರು.

ಜಿಲ್ಲಾಡಳಿತ ಭವನದ ಆಡಿಟೋರಿಯಂನಲ್ಲಿ ಚುನಾವಣಾ ಪೂರ್ವ ಸಂಬಂಧ ನೇಮಿಸಿರುವ ಸೆಕ್ಟರ್ ಮತ್ತು ಪೋಲೀಸ್ ಅಧಿಕಾರಿಗಳಿಗೆ ಶನಿವಾರ ಏರ್ಪಡಿಸಲಾಗಿದ್ದ 2ನೇ ಹಂತದ ತರಬೇತಿ ಕಾರ್ಯಾಗಾರವನ್ನು ಉದ್ದೇಶಿಸಿ ಅವರು ಮಾತನಾಡಿದರು.

ಚುನಾವಣೆ ನೀತಿ ಸಂಹಿತೆ ಜಾರಿಯಾದ ಮೇಲೆ ಚುನಾವಣಾ ಆಯೋಗ ಅಪೇಕ್ಷಿಸುವ ಮಾಹಿತಿಯನ್ನು ನಿಯಮಿತವಾಗಿ, ಕಲೋಚಿತವಾಗಿ ಜಿಲ್ಲೆಯಿಂದ ವರದಿಗಳನ್ನು ನಿಗದಿತ ಅವಧಿಯ ಒಳಗೆ ಸ್ಪಷ್ಟ ಹಾಗೂ ಖಚಿತವಾಗಿ ನೀಡಬೇಕು. ಚುನಾವಣಾ ಕರ್ತವ್ಯಕ್ಕೆ ನಿಯೋಜನೆಯಾಗಿರುವವರು ನಿಗದಿತ ಸಮಯಕ್ಕೆ ಮುಂಚಿತವಾಗಿ ಕರ್ತವ್ಯಕ್ಕೆ ಹಾಜರಾಗಬೇಕು. ಪಾಳಿ ಮೇಲೆ ಕರ್ತವ್ಯ ನಿರ್ವಹಿಸುವವರು ಇನ್ನೊಬ್ಬ ಅಧಿಕಾರಿ ಅಥವಾ ಸಿಬ್ಬಂದಿ ಕರ್ತವ್ಯಕ್ಕೆ ಹಾಜರಾಗುವವರೆಗೂ ಬಿಡುಗಡೆಯಾಗಬಾರದು ಎಂದು ತಿಳಿಸಿದರು.

ಯಾವುದೇ ಕ್ಷಣದಲ್ಲಿ ಲೋಕಸಭಾ ಚುನಾವಣೆಯ ನೀತಿ ಸಂಹಿತೆ ಘೋಷಣೆ ಆಗಬಹುದು. ಚುನಾವಣಾ ನೀತಿ ಸಂಹಿತೆ ಅವಧಿಯಲ್ಲಿ, ಚುನಾವಣೆ ಸಂದರ್ಭದಲ್ಲಿ ಚುನಾವಣಾ ಅಭ್ಯರ್ಥಿಗಳು ಕೈಗೊಳ್ಳುವ ಚುನಾವಣೆಗೆ ಸಂಬಂಧಪಟ್ಟ ವೆಚ್ಚಗಳನ್ನು ನಿರಂತರವಾಗಿ ನಿಗಾ ಇಡಬೇಕು, ಯಾವ ವೆಚ್ಚ ನಿಯಮವಳಿ ರೀತ್ಯ ಇದೆ,ಅಕ್ರಮ ವೆಚ್ಚವಾಗಿದೆ. ಎನ್ನುವುದನ್ನು ಚುನವಣಾ ಆಯೋಗದ ನಿರ್ದೇಶನಗಳಂತೆ ಲೆಕ್ಕಹಾಕಿ ಮೇಲಿನ ಅಧಿಕಾರಿಗಳಿಗೆ ಕಾಲ ಕಾಲಕ್ಕೆ ಸಮರ್ಪವಾಗಿ ವರದಿ ಮಾಡಬೇಕು ತಮ್ಮ ನಿಯೋಜಿತ ಕೆಲಸಗಳನ್ನು ಸರಿಯಾಗಿ ನಿರ್ವಹಿಸಬೇಕು,ಆ ದಿಸೆಯಲ್ಲಿ ಇಂದಿನ ಕಾರ್ಯಾಗಾರ ಬಹು ಉಪಯೋಗಕಾರಿಯಾಗಿದ್ದು, ತರಬೇತಿ ನೀಡುವುದನ್ನು ಸರಿಯಾಗಿ ಗ್ರಹಿಸಿ ಮಾಹಿತಿ



ಪಡೆಯಿರಿ.ಯಾವುದೇ ಗೊಂದಲಗಳಿದ್ದರೆ ತರಬೇತುದಾರರನ್ನು ಸಂಪರ್ಕಿಸಿ ಇಲ್ಲಿ ತಿಳಿದುಕೊಳ್ಳಿ ಎಂದು ಸೂಚನೆಗಳನ್ನು ನೀಡಿದರು.

ಮುಖ್ಯ ನಿರ್ವಹಣಾಧಿಕಾರಿ ಪ್ರಕಾಶ ಜಿ.ಟಿ ನಿಟ್ಟಾಲಿ ಅವರು ಮಾತನಾಡಿ ಚುನಾವಣಾಯ ನೀತಿ ಸಂಹಿತೆಯ ನಿಯಮಗಳನ್ನು ಯಾವುದೇ ವ್ಯಕ್ತಿ ಉಲ್ಲಂಘನೆ ಮಾಡಿದಲ್ಲಿ ಕಾನೂನು ಕ್ರಮ ತೆಗೆದುಕೊಳ್ಳಬೇಕು. ಚುನವಣಾ ಆಯೋಗದ ನಿರ್ದೇಶನಗಳಂತೆ ತಮಗೆ ನಿಯೋಜಿತ ಕೆಲಸಗಳನ್ನು ಸರಿಯಾಗಿ ನಿರ್ವಹಿಸಬೇಕು, ಅಧಿಕಾರಿಗಳು ನಿಯಮಾವಳಿ ರೀತ್ಯಾ ಕೆಲಸ ಮಾಡಬೇಕು. ಇಲ್ಲವಾದಲ್ಲಿ ಚುನಾವಣಾ ಕರ್ತವ್ಯಗಳಲ್ಲಿ ಲೋಪವಾಗುತ್ತದೆ. ಯಾವುದೇ ಕಾರಣಕ್ಕೂ ಇಂತಹ ಲೋಪಗಳನ್ನು ಚುನಾವಣಾ ಆಯೋಗ ಸಹಿಸುವುದಿಲ್ಲ. ಗೈರುಹಾಜರಾದಲ್ಲಿ ನಿರ್ದಾಕ್ಷಿಣ್ಯವಾಗಿ ಶಿಸ್ತು ಕ್ರಮ ತೆಗೆದುಕೊಳ್ಳಲಾಗುತ್ತದೆ ಎಂದು ತಿಳಿಸಿದರು.

ಜಿಲ್ಲಾಪೊಲೀಸ್ ವರಿಷ್ಠಧಿಕಾರಿ ನಾಗೇಶ್ ಡಿ.ಎಲ್ ಅವರು ಚೆಕ್ ಪೋಸ್ಟ್ ಗಳಲ್ಲಿ ಅಕ್ರಮ ವಾಗಿ ಸಾಗಿಸುವ ಉಡುಗೊರೆ ನೀಡುವಂತಹ ವಸ್ತುಗಳು, ಮದ್ಯ, ಮಾದಕ ವಸ್ತುಗಳು,ಹಣ ಸಿಕ್ಕಿದಲ್ಲಿ ವೀಡಿಯೋಗ್ರಾಫಿಯೊಂದಿಗೆ ಸೆರೆಯಿಡಿಯಬೇಕು. ಚುನಾವಣಾ ಸಂದರ್ಭದಲ್ಲಿ ಸಂಭವಿಸುವ ಜಗಳ,ಗಲಾಟೆಯ ತಡೆಯಲು ಸಿದ್ದರಿರಬೇಕು ಎಂದು ತಿಳಿಸಿ ಸೂಕ್ತ ಬಂದೋಬಸ್ತ್ ಒದಗಿಸುವ ಸಂಬಂಧ ಅಗತ್ಯ ಸಲಹೆ ಸೂಚನೆಗಳನ್ನು ನೀಡಿದರು.

ಅಪರ ಜಿಲ್ಲಾಧಿಕಾರಿ ಡಾ|| ತಿಪ್ಪೇಸ್ವಾಮಿ ಅವರು ಮಾತನಾಡಿ, ಅಭ್ಯರ್ಥಿಗಳ ಚುನಾವಣಾ ವೆಚ್ಚಗಳಿಗೂ ಮಿತಿ ಇರುತ್ತದೆ. ಅವರು ಮಾಡಿರುವ ವೆಚ್ಚಗಳು ಮಿತಿಯ ಒಳಗೆ ಇವೆಯೇ, ಇಲ್ಲವೇ ಎಂಬುದನ್ನು ತಿಳಿಯಬೇಕಾದರೆ ಚುನಾವಣಾ ವೆಚ್ಚದ ಮೇಲೆ ನೀಗಾ ಇಡುವ ಒಆಒಅ, ಗಿಗಿಖಿ, ಗಿಖುಖಿ, ಖುಖುಖಿ, ಈಖುಖಿ, ತಂಡಗಳ ಅಧಿಕಾರಿಗಳು ಮತ್ತು ಸಹಾಯಕ ಚುನಾವಣಾ ವೆಚ್ಚದ ಅಧಿಕಾರಿಗಳು ನಿಯಮಾವಳಿ ರೀತ್ಯಾ ಕೆಲಸ ಮಾಡಬೇಕು. ಇಲ್ಲವಾದಲ್ಲಿ ಚುನಾವಣಾ ಕರ್ತವ್ಯಗಳಲ್ಲಿ ಲೋಪವಾಗುತ್ತದೆ. ಯಾವುದೇ ಕಾರಣಕ್ಕೂ ಇಂತಹ ಲೋಪಗಳನ್ನು ಚುನಾವಣಾ ಆಯೋಗ ಸಹಿಸುವುದಿಲ್ಲ. ನಿರ್ದಾಕ್ಷಿಣ್ಯವಾಗಿ ಶಿಸ್ತು ಕ್ರಮ ತೆಗೆದುಕೊಳ್ಳುತ್ತದೆ.ಕಳೆದ ವಿಧಾನ ಸಭಾ ಚುನಾವಣೆಯಲ್ಲಿ ಜಿಲ್ಲೆಯ ಎಲ್ಲ ಅಧಿಕಾರಿಗಳು, ಸಿಬ್ಬಂದಿ ಸಣ್ಣ ಕರ್ತವ್ಯ ಲೋಪವಿಲ್ಲದೆ ಅಚ್ಚುಕಟ್ಟಾಗಿ ಕರ್ತವ್ಯವನ್ನು ನಿರ್ವಹಿಸಿದ್ದೀರಿ. ಅದೇ ರೀತಿ ಈ ಚುನಾವಣಾ ಕರ್ತವ್ಯಗಳನ್ನು ನೀರ್ವಹಿಸಲು ಅಗತ್ಯ ಸಲಹೆ ಸೊಚನೆಗಳನ್ನು ನೀಡಿದರು.

ಚುನಾವಣಾ ಆಯೋಗದ ರಾಜ್ಯ ಮಟ್ಟದ ಸಂಪನ್ಮೂಲ ಅಧಿಕಾರಿ ಶಂಕರ್ ರೆಡ್ಡಿ ಅವರು ಚುನಾವಣೆ ಕಾರ್ಯಗಳನ್ನು ನಿರ್ವಹಿಸಲು ಬೇಕಿರುವ ಅಗತ್ಯ ಮಾಹಿತಿಗಳನ್ನು ಞಿಣ ಮೂಲಕ ಸವಿಸ್ತಾರವಾಗಿ ತರಬೇತಿ ಕಾರ್ಯಾಗಾರದಲ್ಲಿ ನೀಡಿದರು.

ತರಬೇತಿ ಕಾರ್ಯಗಾರದಲ್ಲಿ ಉಪವಿಭಾಗಧಿಕಾರಿ ಡಿ.ಎಚ್.ಅಶ್ವಿನ್, ಜಿಲ್ಲಾ ಪಂಚಾಯತ್ ಮುಖ್ಯ ಲೆಕ್ಕಾಧಿಕಾರಿ ಹಾಗೂ ಜಿಲ್ಲಾ ಚುನವಣಾ ವೆಚ್ಚ ಅಧಿಕಾರಿ ಎನ್.ಹರೀಶ್, ಜಿಲ್ಲಾ ಉದ್ಯೋಗಾಧಿಕಾರಿ ಎಂ.ಪ್ರಸಾದ್, ಚುನಾವಣಾ ಸಿಂಬ್ಬಂದಿ ಮತ್ತು ಪೋಲೀಸ್ ಅಧಿಕಾರಿಗಳು ಉಪಸ್ಥಿತರಿದರು.

# ಉದ್ಯಮಿಗಳಾಗಿ ಪರಿಸರ ಉಳಿಸಿ

**ಹುಳಿಯಾರು:** ನೀವು ಕೃಷಿ ಕುಟುಂಬದ ಯುವಕರು, ಕೌಶಲ ತರಬೇತಿ ಪಡೆಯಲು ಕೈಗಾರಿಕಾ ತರಬೇತಿ ಕೇಂದ್ರಕ್ಕೆ ಸೇರಿದ್ದೀರಿ. ಅಂದರೆ ನಿಮ್ಮ ಬದುಕಿನಲ್ಲಿ ಬದಲಾವಣೆಯಿದ್ದು ನಿಸರ್ಗದ ಮಡಿಲಿನಿಂದ

ಯಂತ್ರ ಜಗತ್ತಿಗೆ ಹೋಗುತ್ತೀರಿ. ಇದು ಪರಿಸರಕ್ಕೆ ಹಾನಿ ಮಾಡುವ ಉದ್ಯಮ. ಆದರೆ ಜೀವನೋಪಾಯಕ್ಕೆ ಈ ಕ್ಷೇತ್ರದಲ್ಲಿ ಜೀವನವನ್ನು ಕಟ್ಟಿಕೊಳ್ಳುವುದು ಅನಿವಾರ್ಯ. ನೀವು ಕೈಗಾರಿಕೋದ್ಯಮದಲ್ಲಿದ್ದರೂ ಪರಿಸರ ಸಂರಕ್ಷಣೆಯನ್ನು ಮರ ಗಿಡ ಬೆಳೆಸುವ ಮೂಲಕ ಮಾಡಿ ಎಂದು ಪರಿಸರ ಚಿಂತಕ ಮಾಸ್ ಟ್ರಸ್ಟ್ ಕಾರ್ಯದರ್ಶಿ ರಾಮಕೃಷ್ಣಪ್ಪ ತಿಳಿಸಿದರು.

ತಮ್ಮಡಿಹಳ್ಳಿ ಮಠಕ್ಕೆ ಸೇರಿದ ಮಲ್ಲಿಕಾರ್ಜುನ ಕೈಗಾರಿಕಾ ತರಬೇತಿ



ಕೇಂದ್ರದಲ್ಲಿ ನಡೆದ ಇಂಧನ ಉಳಿತಾಯ ಕುರಿತ ಸಂವಾದದಲ್ಲಿ ಮಾತನಾಡಿದರು.

ಕಾರ್ಯಕ್ರಮದ ಉದ್ಘಾಟನೆ ನೆರವೇರಿಸಿದ ಮಾಸ್ ಟ್ರಸ್ಟ್ ಅಧ್ಯಕ್ಷರಾದ ಎನ್.ಇಂದಿರಮ್ಮ ನವರು ಭೂಮಿಯ ತಾಪಮಾನ ಏರಿಕೆಯಾಗಿದೆ. ಕಾರಣ ಹಸಿರು ಮನೆ ಅನಿಲಗಳು. ಅವುಗಳ ಉತ್ಪಾದನೆ ತಗ್ಗಬೇಕು. ಆದುದರಿಂದ ಇಂಧನ ಉರಿಯುವುದನ್ನು ಕಡಿಮೆ ಮಾಡಬೇಕು ಎಂದರು.

ಅಂಗನವಾಡಿ ಕಾರ್ಯಕರ್ತೆಯರ ಸಂಘದ ಅಧ್ಯಕ್ಷೆ ಪೂರ್ಣಮ್ಮ ಅಡುಗೆ ಅನಿಲ ಮತ್ತು ಪೆಟ್ರೋಲ್ ಡೀಸೆಲ್ ಉಳಿಸುವತ್ತ ಗಮನ ಹರಿಸಬೇಕು ಎಂದು ಹೇಳಿ ಅಡುಗೆ ಅನಿಲ ಉಳಿತಾಯ ಮಾಡುವ ವಿಧಾನವನ್ನು ತಿಳಿಸಿದರು.

ಸಭೆಯ ಅಧ್ಯಕ್ಷತೆಯನ್ನು ಪ್ರಾಂಶುಪಾಲರಾದ ತೀರ್ಥಮಲ್ಲೇಶ್ ವಹಿಸಿದ್ದರು. ಕಾಲೇಜು ಸಿಬ್ಬಂದಿ ಮತ್ತು ಶಿಕ್ಷಣಾರ್ಥಿಗಳು ಉಪಸ್ಥಿತರಿದ್ದರು.



## ಡೇರಿ ಕಟ್ಟಡಕ್ಕೆ ಧರ್ಮಸ್ಥಳ ಸಂಸ್ಥೆ ಆರ್ಥಿಕ ನೆರವು

**ಚನ್ನಪಟ್ಟಣ ತಾಲ್ಲೂಕಿನ ಕೆಂಗಲ್ ಯೋಜನಾ ವ್ಯಾಪ್ತಿಯ ಎನ್ ಆರ್ ಕಾಲೋನಿ ಹಾಲು ಉತ್ಪಾದಕರ ಸಹಕಾರ ಸಂಘಕ್ಕೆ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ವತಿಯಿಂದ ಡೇರಿ ಕಟ್ಟಡ ನಿರ್ಮಾಣಕ್ಕಾಗಿ ಎರಡು ಲಕ್ಷ ರೂಪಾಯಿ ಮೊತ್ತದ ಮಂಜೂರಾತಿ ಪತ್ರವನ್ನು ನೀಡಲಾಯಿತು. ಧರ್ಮಸ್ಥಳ ಸಂಸ್ಥೆಯ ರಾಮನಗರ ಜಿಲ್ಲಾ ನಿರ್ದೇಶಕ ಜಯಕರ್ ಶೆಟ್ಟಿ, ಮೈಸೂರಿನ ಮಾನವ ಸಂಪನ್ಮೂಲ ತರಬೇತಿ ಕೇಂದ್ರ ಪ್ರಾಂಶುಪಾಲ ದಿನೇಶ್ ಪೂಜಾರಿ, ಕೆಂಗಲ್ ಯೋಜನಾಧಿಕಾರಿ ನಾಗಭೂಷಣ್ ಪೈ, ಹಾಲು ಉತ್ಪಾದಕರ ಸಹಕಾರ ಸಂಘದ ಅಧ್ಯಕ್ಷ ಹಾಗೂ ನಿರ್ದೇಶಕರು, ಸದಸ್ಯರು, ಸಂಸ್ಥೆಯ ಮೇಲ್ವಿಚಾರಕಿ ಕುಮಾರಿ, ಸೇವಾ ಪ್ರತಿನಿಧಿ ಸೌಮ್ಯ ಹಾಗೂ ಸ್ಥಳೀಯ ಗ್ರಾಮಸ್ಥರು ಉಪಸ್ಥಿತರಿದ್ದರು.**

## ಮಾ.2ರಂದು ಕಾನೂನು ಅರಿವು ನೆರವು ಕಾರ್ಯಕ್ರಮ

**ಚಿಕ್ಕಬಳ್ಳಾಪುರ:** ಕಾನೂನು ಸೇವೆಗಳ ಪ್ರಾಧಿಕಾರದ ಪ್ಯಾನಲ್ ವಕೀಲರು ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ ಪ್ರಸ್ತುತ ಪೋಕ್ಸೋ, ಬಾಲ್ಯ ವಿವಾಹ, ಮಕ್ಕಳ ಭಿಕ್ಷಾಟನೆ ಮತ್ತು ಬಾಲ ಕಾರ್ಮಿಕ ಪ್ರಕರಣಗಳು ಹೆಚ್ಚುತ್ತಿದ್ದು ಇದನ್ನು ತಡೆಗಟ್ಟುವ ಸಲುವಾಗಿ ಮಕ್ಕಳ ಗ್ರಾಮ ಸಭೆ, ಮಕ್ಕಳ ಕಾನೂನು ರಕ್ಷಣಾ ಸಮಿತಿ ಮತ್ತು ಶಾಲಾ ಹಂತದಲ್ಲಿ ಮಕ್ಕಳ ರಕ್ಷಣಾ ಸಮಿತಿ, ಹೆಣ್ಣು ಮಕ್ಕಳ ಸಂರಕ್ಷಣಾ ಸಮಿತಿಗಳು ಹೆಚ್ಚು ಪರಿಣಾಮಕಾರಿಯಾಗಿ ನಿರ್ವಹಿಸಬೇಕಾಗಿದ್ದು, ಬಹಳಷ್ಟು ಶಾಲೆಗಳಲ್ಲಿ ಈ ಸಮಿತಿಗಳ ಕಾರ್ಯ ವೈಕರಿ ಹೆಚ್ಚು ಪರಿಣಾಮಕಾರಿಯಾಗಿಲ್ಲವೆಂದು ಮನವಿ ಪತ್ರದಲ್ಲಿ ತಿಳಿಸಿದ್ದು, ಎಲ್ಲಾ ತಾಲ್ಲೂಕುಗಳ ತಹಸೀಲ್ದಾರ್, ತಾಲ್ಲೂಕು ಪಂಚಾಯಿತಿ ಕಾರ್ಯನಿರ್ವಹಣಾಧಿಕಾರಿಗಳು, ಕ್ಷೇತ್ರ ಶಿಕ್ಷಣಾಧಿಕಾರಿಗಳು, ತಾಲ್ಲೂಕು ಆರೋಗ್ಯಧಿಕಾರಿಗಳು, ತಾಲ್ಲೂಕು ಮಹಿಳಾ ಮತ್ತು ಮಕ್ಕಳ ಕಲ್ಯಾಣಾಧಿಕಾರಿಗಳು, ಪೋಲೀಸ್ ವೃತ್ತ ನಿರೀಕ್ಷಕರು, ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು ಒಳಗೊಂಡಂತೆ ಶಾಲಾ ಹಂತದ ಈಗಾಗಲೇ ಸಮಿತಿಗಳನ್ನು ರಚಿಸಿದ್ದಲ್ಲಿ ಅದರ ವಿವರದೊಂದಿಗೆ, ಇಲ್ಲವಾದಲ್ಲಿ ಹೊಸದಾಗಿ ಸರ್ಕಾರದ ಸುತ್ತೋಲೆಯ ಮಾನದಂಡದಂತೆ ಸಮಿತಿಗಳನ್ನು ರಚನೆ ಮಾಡಿ ಆ ಸಮಿತಿಯ ಮುಖ್ಯಸ್ಥರು, ಸದಸ್ಯ ಕಾರ್ಯದರ್ಶಿಗಳು, ವಿದ್ಯಾರ್ಥಿ ಪ್ರತಿನಿಧಿ, ಪೋಷಕ ಪ್ರತಿನಿಧಿ ಕಾನೂನು ಸೇವೆಗಳ ಪ್ರಾಧಿಕಾರದ ಪ್ಯಾನಲ್ ವಕೀಲರು ಹಾಗೂ ಕಾನೂನು ಸ್ವಯಂ ಸೇವಕರಿಗೆ, ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಪೋಲೀಸ್ ಇಲಾಖೆ ರವರ ಸಂಯುಕ್ತ ಆಶ್ರಯದೊಂದಿಗೆ ಕಾನೂನು ಅರಿವು ನೆರವು ಕಾರ್ಯಕ್ರಮವನ್ನು ಮಾರ್ಚ್ 02 ರಂದು ಜಿಲ್ಲಾಧಿಕಾರಿಗಳ ಸಭಾಂಗಣದಲ್ಲಿ ಹಮ್ಮಿಕೊಳ್ಳಲಾಗುದು ಎಂದು ಗೌರವಾನ್ವಿತ ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಎ.ಅರುಣಾ ಕುಮಾರಿ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ರಾಷ್ಟ್ರೀಯ ಜಂತುಹುಳು ನಿವಾರಣಾ ದಿನ

ಮಂಡ್ಯ: ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಶಿಕ್ಷಣ ಇಲಾಖೆ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಸಮಾಜ ಕಲ್ಯಾಣ ಇಲಾಖೆ ಹಾಗೂ ಇನ್ನುಳಿದ ಇಲಾಖೆಗಳ ಸಹಯೋಗದೊಂದಿಗೆ 2023-24 ನೇ ಸಾಲಿನಲ್ಲಿ ಮೊದಲ ಹಂತ : ಫೆಬ್ರವರಿ 24 (ಪದವಿ ಪೂರ್ವ ಕಾಲೇಜುಗಳಿಗೆ), ಎರಡನೇ ಹಂತ : ಫೆಬ್ರವರಿ 27 (6-19 ವರ್ಷದ ಮಕ್ಕಳಿಗೆ ಶಾಲೆ ಮತ್ತು ಕಾಲೇಜುಗಳಲ್ಲಿ) ಮತ್ತು ಮೂರನೇ ಹಂತ : ಮಾರ್ಚ್ 08 (1 ರಿಂದ 5 ವರ್ಷದ ಮಕ್ಕಳು ಮತ್ತು ಶಾಲೆಯಿಂದ ಹೊರಗುಳಿದ ಮಕ್ಕಳಿಗೆ ಅಂಗನವಾಡಿ ಕೇಂದ್ರಗಳಲ್ಲಿ) ರಾಷ್ಟ್ರೀಯ ಜಂತುಹುಳು ನಿವಾರಣಾ ದಿನವನ್ನು ಹಾಗೂ ಫೆಬ್ರವರಿ 28 ರಿಂದ ಮಾರ್ಚ್ 08 ರವರೆಗೆ ಮಾಪ್ ಅಪ್ ದಿನವನ್ನು ಹಮ್ಮಿಕೊಳ್ಳಲಾಗಿದೆ. ಸದರಿ ದಿನದಂದು ಮಕ್ಕಳು ತರಗತಿಗೆ ಪೂರ್ಣ ಪ್ರಮಾಣದಲ್ಲಿ ಹಾಜರಾಗುವಂತೆ ಸೂಕ್ತ ಕ್ರಮವಹಿಸುವುದು. ಆ ದಿನದಂದು 1 ರಿಂದ 19 ವಯಸ್ಸಿನ ಎಲ್ಲಾ ಅಂಗನವಾಡಿ ಕೇಂದ್ರ, ಸರ್ಕಾರಿ, ಸರ್ಕಾರಿ ಅನುದಾನಿತ, ಖಾಸಗಿ ಶಾಲೆ-ಕಾಲೇಜು ಹಾಗೂ ಪದವಿ/ತಾಂತ್ರಿಕ ಕಾಲೇಜಿನ ಮಕ್ಕಳಿಗೆ ಸದರಿ ದಿನಗಳಂದು ಜಂತುಹುಳು ನಿವಾರಣೆ ಮಾಡುವ ಆಲ್‌ಬೆಂಡಾಜೋಲ್ ಮಾತ್ರೆಯನ್ನು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ವತಿಯಿಂದ ನೀಡಲಾಗುತ್ತಿದೆ. ಜಿಲ್ಲೆಯಲ್ಲಿ ಒಟ್ಟು 520785 ಮಕ್ಕಳು ನೊಂದಣಿಯಾಗಿದ್ದು, ಸದರಿ ಮಕ್ಕಳಿಗೆ ಫೆಬ್ರವರಿ 24 ರಿಂದ ಮಾರ್ಚ್ 08 ರವರೆಗೆ ನಡೆಯುವ ರಾಷ್ಟ್ರೀಯ ಜಂತುಹುಳು ನಿವಾರಣಾ ದಿನದಂದು ಎಲ್ಲಾ ಮಕ್ಕಳಿಗೆ ಆಲ್‌ಬೆಂಡಾಜೋಲ್ ಮಾತ್ರೆಯನ್ನು ವಿತರಿಸಲಾಗುತ್ತದೆ. ಜಿಲ್ಲೆಯ ಎಲ್ಲಾ ಮಕ್ಕಳ ಪೋಷಕರು ಸದರಿ ಕಾರ್ಯಕ್ರಮದ ಸದುಪಯೋಗಪಡಿಸಿಕೊಂಡು ಕಾರ್ಯಕ್ರಮವನ್ನು ಯಶಸ್ವಿಗೊಳಿಸಬೇಕೆಂದು ಜಿಲ್ಲಾ ಆರ್. ಸಿ. ಎಚ್. ಅಧಿಕಾರಿಯವರುಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಮಾದಕ ವಸ್ತು ಬಗ್ಗೆ ದೂರು ಸಲ್ಲಿಸಿ

**ಮಂಡ್ಯ:** ಮುಂಬರುವ 2024 ರ ಲೋಕಸಭೆ ಸಾರ್ವತ್ರಿಕ ಚುನಾವಣೆ ನಿಮಿತ್ತ ಅಬಕಾರಿ ಅಕ್ರಮಗಳನ್ನು ತಡೆಗಟ್ಟುವ ನಿಟ್ಟನಲ್ಲಿ ಮುಂಜಾಗ್ರತಾ ಕ್ರಮಗಳನ್ನು ಕೈಗೊಂಡು ಮುಂಬರುವ ಲೋಕಸಭಾ ಚುನಾವಣೆಗಳನ್ನು ನಡೆಸುವ ದಿಸೆಯಲ್ಲಿ ಕಾರ್ಯೋನ್ಮುಖರಾಗುವ ಬಗ್ಗೆ ಅಬಕಾರಿ ಇಲಾಖೆಯು ಜಿಲ್ಲಾ ಮಟ್ಟದಲ್ಲಿ ಟೋಲ್ ಫ್ರೀ ತೆರೆಯಲಾಗಿರುತ್ತದೆ. ಸಾರ್ವಜನಿಕರು ಮಂಡ್ಯ ಜಿಲ್ಲಾ ವ್ಯಾಪ್ತಿಯಲ್ಲಿ ಯಾವುದೇ ರೀತಿಯ ಅಕ್ರಮವಾಗಿ ಮದ್ಯ ತಯಾರಿಕೆ, ಶೇಖರಣೆ, ಸಾಗಾಣಿಕೆ, ಮಾರಾಟ ಹಾಗೂ ಅಕ್ರಮವಾಗಿ ಮದ್ಯ ತಯಾರಿಕಾ ವಸ್ತುಗಳು ಮತ್ತು ಗಾಂಜಾ, ಅಫೀಮು, ಡ್ರಗ್ಸ್ ಹಾಗೂ ಇನ್ನಿತರ ಯಾವುದೇ ಮಾದಕ ವಸ್ತುಗಳ ಬಗ್ಗೆ ಯಾವುದೇ ದೂರುಗಳಿದ್ದಲ್ಲಿ ಮಂಡ್ಯ ಜಿಲ್ಲಾ ಅಬಕಾರಿ ಟೋಲ್ ಫ್ರೀ 18004253854 ಸಂಖ್ಯೆಗೆ ಹಾಗೂ ಕಂಟ್ರೋಲ್ ರೂಂ ದೂರವಾಣಿ ಸಂಖ್ಯೆಗೆ ಕರೆ ಮಾಡಿ ಮಾಹಿತಿ ನೀಡಬೇಕು ಎಂದು ಮಂಡ್ಯ ಡೆಪ್ಯೂಟಿ ಕಮೀಷನರ್ ಆಫ್ ಎಕ್ಸೈಜ್ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಅರ್ಜಿ ಆಹ್ವಾನ

**ಮಂಡ್ಯ:** 2023-24 ನೇ ಸಾಲಿನಲ್ಲಿ ಮುಖ್ಯಮಂತ್ರಿ ರೈತವಿದ್ಯಾನಿಧಿ ಕಾರ್ಯಕ್ರಮ ಹಾಗೂ ಭೂರಹಿತ ಕೃಷಿ ಕಾರ್ಮಿಕರ ವಿದ್ಯಾನಿಧಿ ಕಾರ್ಯಕ್ರಮದಡಿ ವಿದ್ಯಾರ್ಥಿ ವೇತನ ಪಡೆಯಲು ಸಾಮಾನ್ಯ ವರ್ಗದ ವಿದ್ಯಾರ್ಥಿಗಳ ಪೋಷಕರ ಆದಾಯವು ರೂ.2.5 ಲಕ್ಷ ಮೀರಿರಬಾರದು ಎಂಬ ಷರತ್ತನ್ನು ವಿಧಿಸಿರುವುದರಿಂದ ಸಾಮಾನ್ಯ ವರ್ಗದಡಿ ಬರುವ ರೈತರ ಮಕ್ಕಳು ತಮ್ಮ ಪೋಷಕರ ಆದಾಯ ಪ್ರಮಾಣ ಪತ್ರವನ್ನು ರಾಜ್ಯ ವಿದ್ಯಾರ್ಥಿವೇತನ ತಂತ್ರಾಂಶದ ವಿದ್ಯಾರ್ಥಿಗಳ ಲಾಗಿನ್‌ನಲ್ಲಿ ಅವಕಾಶ ಕಲ್ಪಿಸಲಾಗಿದ್ದು, ಫೆಬ್ರವರಿ 29 ರೊಳಗೆ ಸಲ್ಲಿಸಬೇಕಾಗಿ ಮಂಡ್ಯ ಜಂಟಿ ಕೃಷಿ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ವೈದ್ಯಕೀಯ ಉಪಕರಣ ಹಸ್ತಾಂತರ

**ಮೈಸೂರು:** ಗೋಕಲ್‌ದಾಸ್ ಎಕ್ಸ್‌ಪೋರ್ಟ್ಸ್ ಚಾರಿಟಬಲ್ ಫೌಂಡೇಷನ್, ಬೆಂಗಳೂರು ವತಿಯಿಂದ ಇಂದು (ಫೆ.23) ನಗರದ ಕೆ.ಆರ್.ಆಸ್ಪತ್ರೆಗೆ ಸುಮಾರು 15 ಲಕ್ಷ ರೂ. ಮೌಲ್ಯದ ವೈದ್ಯಕೀಯ ಉಪಕರಣಗಳು, ವಿದ್ಯುತ್‌ಚಾಲಿತ ಇ-ವಾಹನ ಮತ್ತು ಶುದ್ಧ ಕುಡಿಯುವ ನೀರಿನ ಘಟಕ (ಆರ್.ಓ.ಪ್ಲಾಂಟ್) ಗಳನ್ನು ಹಸ್ತಾಂತರಿಸಲಾಯಿತು. ವೈದ್ಯಕೀಯ ಉಪಕರಣಗಳನ್ನು ಹಸ್ತಾಂತರಿಸಿ ಮಾತನಾಡಿದ ಕಂಪನಿಯ ಮಾನವ ಸಂಪನ್ಮೂಲ ವಿಭಾಗದ ಉಪಾಧ್ಯಕ್ಷರಾದ ಮೊಯಿದ್ದೀನ್ ಅವರು ಮಾತನಾಡಿ, ಕೆ.ಆರ್.ಆಸ್ಪತ್ರೆ ಮೈಸೂರಿನಲ್ಲಿ ಹಳೆಯ ಆಸ್ಪತ್ರೆಗಳಲ್ಲಿ ಒಂದಾಗಿದ್ದು, ಇಲ್ಲಿಗೆ ದಿನನಿತ್ಯ ಸಾವಿರಾರು ರೋಗಿಗಳಿಗೆ ತುಂಬಾ ಅವಶ್ಯಕತೆ ಇರುವ ಈ ಉಪಕರಣಗಳನ್ನು ಹಸ್ತಾಂತರಿಸಿರುವುದು ನಿಜಕ್ಕೂ ಹೆಮ್ಮೆಯ ವಿಷಯ. ಇದನ್ನು ರೋಗಿಗಳು ವ್ಯವಸ್ಥಿತ ರೀತಿಯಲ್ಲಿ ಸದುಪಯೋಗಪಡಿಸಿಕೊಳ್ಳಬೇಕೆಂದು ಆಶಿಸಿದರು. ಮೈಸೂರು ಮೆಡಿಕಲ್ ಕಾಲೇಜು ಹಾಗೂ ರಿಸರ್ಚ್ ಇನ್‌ಸ್ಟಿಟ್ಯೂಟ್‌ನ ಡೀನ್ ಅಂಡ್ ಡೈರೆಕ್ಟರ್ ಡಾ.ದಾಕ್ಷಾಯಿಣಿ ಅವರು ಅಧ್ಯಕ್ಷತೆ ವಹಿಸಿ, ಮಾತನಾಡಿ, ಗೋಕಲ್‌ದಾಸ್ ಎಕ್ಸ್‌ಪೋರ್ಟ್ಸ್ ಕಂಪನಿಯವರು ನಮಗೆ ಈ ಕೊಡುಗೆ ನೀಡಿ, ಸಮಾಜ ಸೇವೆ ಮಾಡುತ್ತಿರುವುದು ನಿಜಕ್ಕೂ ಅವಿಸ್ಮರಣೀಯ, ಇದರ ಅವಶ್ಯಕತೆ ನಮಗೆ ಬಹಳ ದಿನಗಳಿಂದ ಇತ್ತು ಎಂದು ತಿಳಿಸಿದರು. ಆಪರೇಷನ್ ವಿಭಾಗದ ಉಪಾಧ್ಯಕ್ಷ ವಿ.ರಮೇಶ್, ಡಿಜಿಎಂ ಇಹೆಚ್‌ಎಸ್ ಮಹಾಂತೇಶ್ ಬಂಗಾರಿ, ಮಾನವ ಸಂಪನ್ಮೂಲ ವಿಭಾಗದ ಹಿರಿಯ ವ್ಯವಸ್ಥಾಪಕರಾದ ಮಲ್ಲಿಕಾರ್ಜುನ ಎಸ್.ವಿ., ಮೈಸೂರಿನ ಶಾಖೆಯ ಸೀನಿಯರ್ ಹೆಚ್‌ಆರ್ ಮ್ಯಾನೇಜರ್ ಶಂಕರ ಇದ್ದರು.

# ಕೇಂದ್ರ ಸರ್ಕಾರದ ಮಲತಾಯಿ ಧೋರಣೆಗೆ ಸಾಕ್ಷಿಯಾಗಿದೆ

**ಚನ್ನಪಟ್ಟಣ:** ನಮ್ಮಲ್ಲಿ ಹುಟ್ಟಿ ಹರಿಯುವ ನೀರನ್ನು ನಮ್ಮಲ್ಲೇ ಸಂಗ್ರಹ ಮಾಡಿಕೊಳ್ಳಲು ತಮಿಳುನಾಡು ಸರ್ಕಾರದ ಅನುಮತಿ ಕೇಳಬೇಕು ಎಂಬುದು ಕೇಂದ್ರ ಸರ್ಕಾರದ ಮಲತಾಯಿ ಧೋರಣೆಗೆ ಸಾಕ್ಷಿಯಾಗಿದೆ ಎಂದು ಕಸ್ತೂರಿ ಕರ್ನಾಟಕ ಜನಪರ ವೇದಿಕೆಯ ರಾಜ್ಯಾಧ್ಯಕ್ಷ ರಮೇಶ್‌ಗೌಡರು ಬೇಸರ ವ್ಯಕ್ತಪಡಿಸಿದರು.

ಕಾವೇರಿ ನದಿ ನೀರಿನ ಹಂಚಿಕೆಯಲ್ಲಿ ಸಂಕಷ್ಟ ಸೂತ್ರ ರಚಿಸುವ ಜೊತೆಗೆ ಮೇಕೆದಾಟು ಯೋಜನೆಗೆ ಅಡಿಗಲ್ಲು ಹಾಕುವಂತೆ ಆಗ್ರಹಿಸಿಕಸ್ತೂರಿ ಕರ್ನಾಟಕ ಜನಪರ ವೇದಿಕೆಯ ರಾಜ್ಯಾಧ್ಯಕ್ಷರಾದ ರಮೇಶ್‌ಗೌಡರ ನೇತೃತ್ವದಲ್ಲಿ 2023ರ ಅಕ್ಟೋಬರ್ 5 ರಿಂದ ನಿರಂತರವಾಗಿ ಹೋರಾಟ ಮಾಡುತ್ತಿದ್ದು ಶುಕ್ರವಾರ ನಡೆದ 142 ನೇ ದಿನದ ಹೋರಾಟದಲ್ಲಿ ಮಾತನಾಡಿದ ಅವರು ಮೇಕೆದಾಟು ಯೋಜನೆ ನಿರ್ಮಾಣಕ್ಕಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಅಣೆಕಟ್ಟೆಗೆ ಮುಳುಗಡೆಯಾಗುವ ಗ್ರಾಮಗಳ ಜಮೀನು ಮತ್ತು ಅರಣ್ಯ ಪ್ರದೇಶದ ಜಮೀನು ಗುರುತಿಸಲು ಸಮಿತಿ ರಚನೆ ಮಾಡಿರುವ ಬಗ್ಗೆ ನಮಗೆ ಹೆಮ್ಮೆ ಇತ್ತು. ಆದರೆ ಇದಕ್ಕೆ ತಮಿಳುನಾಡಿನಜಲಸಂಪನ್ಮೂಲ ಸಚಿವ ದೊರೈಮುರುಗನ್‌ಅವರು ತಮಿಳುನಾಡಿನ ಅಧಿವೇಶನದಲ್ಲಿ ಪ್ರತಿಕ್ರಿಯೆ ನೀಡಿದ್ದು ಕರ್ನಾಟಕ ಸರ್ಕಾರ ತನಗೆ ಬೇಕಾದ ಸಮಿತಿಯನ್ನು ರಚಿಸಬಹುದು, ಆದರೆ ತಮಿಳುನಾಡು ಸರ್ಕಾರದ ಅನುಮತಿ ಇಲ್ಲದೆ ಮೇಕೆದಾಟು ಅಣೆಕಟ್ಟು ನಿರ್ಮಿಸಲು ಸಾಧ್ಯವಿಲ್ಲ ಎಂದು ಹೇಳಿದ್ದು, ಜೊತೆಗೆ ಈ ಬಗ್ಗೆ ಕಾವೇರಿ ಸಭೆಯಲ್ಲಿ ಈ ವಿಷಯವನ್ನು ಪ್ರಸ್ತಾಪಿಸಬಾರದು ಎಂದು ಕೇಂದ್ರ ಜಲ ಶಕ್ತಿ ಸಚಿವ ಗಜೇಂದ್ರ ಸಿಂಗ್ ಅವರೂ ಹೇಳಿದ್ದಾರೆ ಎಂದು



ಹೇಳಿಕೆ ನೀಡಿದ್ದಾರೆ. ಇದನ್ನು ಗಮನಿಸಿದರೆ ಕೇಂದ್ರ ಸರ್ಕಾರವು ತಮಿಳುನಾಡಿನ ಪರವಾಗಿ ಕೆಲಸ ಮಾಡುತ್ತಾ ರಾಜ್ಯಕ್ಕೆ ಅನ್ಯಾಯ ಮಾಡುತ್ತಿದ್ದು, ರಾಜ್ಯದ 25 ಬಿಜೆಪಿ ಸಂಸದರು ಮೌನವಾಗಿದ್ದಾರೆ ಎಂದು ಆರೋಪಿಸಿದ್ದರು. ಮೇಕೆದಾಟು ಯೋಜನೆ ವಿರುದ್ಧ ತಮಿಳುನಾಡು ಸರ್ಕಾರ ತಗಾದೆ ಹಾಕಿದ್ದು ''ಸುಪ್ರೀಂ ಕೋರ್ಟ್ ತೀರ್ಪು ನೀಡದೆ ಮೇಕೆದಾಟು ಬಗ್ಗೆ ಮಾತನಾಡಲು ಕಾವೇರಿ ಆಯೋಗಕ್ಕೆ ಅಧಿಕಾರವಿಲ್ಲ ಎಂದು ಹೇಳುವ ತಮಿಳುನಾಡು ಸಚಿವರ ಹೇಳಿಕೆ ಹಿಂದೆ ತಮ್ಮ ನಾಡು ತಮ್ಮ ಜನರ ಹಿತ ಎಂಬ ಇಚ್ಛಾಶಕ್ತಿ ಅವರಿಗೆ ಇದೆ. ಆದರೆ ನಮ್ಮ ರಾಜ್ಯದ ಸಂಸದರಿಗೆ ಕೇಂದ್ರದ ಮುಂದೆ ಮಾತನಾಡಲು ಧೈರ್ಯ ಇಲ್ಲದಂತಾಗಿದೆ. ಇಂತಹ ಪರಿಸ್ಥಿತಿಯಲ್ಲಿ ಸುಪ್ರಿಂ ಕೋರ್ಟ್‌ಗೆ ನಮ್ಮ ರಾಜ್ಯದ ನೀರಿನ ಸಮಸ್ಯೆಗಳ ಬಗ್ಗೆ ವಿವರಣೆ ಮಾಡಲು ನಮ್ಮ ರಾಜ್ಯದ ವಕೀಲರು ಸೂಕ್ತ ದಾಖಲೆಗಳನ್ನು ಸುಪ್ರಿಂಕೋರ್ಟ್ ಗೆ ಸಲ್ಲಿಸಬೇಕು. ಕಾವೇರಿ ನೀರಿನ ವಿಚಾರದಲ್ಲಿ ವಾದ ಮಾಡುತ್ತಿದ್ದ ನಾರಿಮನ್ ಅವರ ನಿಧನ ನೋವು ತಂದಿದೆ ಎಂದು ರಮೇಶ್ ಗೌಡರು ವಿಷಾಧಿಸಿದರು.

ಉಪನ್ಯಾಸಕ ಬಿ.ಪಿ.ಸುರೇಶ್ ಮಾತನಾಡಿ, ಕಾವೇರಿ ನದಿ ನೀರು ಹಂಚಿಕೆ ಸಮಸ್ಯೆ 100 ವರ್ಷಗಳಾದರೂ ಬಗೆಹರಿಸಿಲ್ಲ. ಅಂದಿನ ಮದ್ರಾಸ್ ಸರ್ಕಾರದ ಅಧಿಕಾರಿ ತನ್ನ ಅಧಿಕಾರದ ವ್ಯಾಪ್ತಿಗೆ ಹೆಚ್ಚು ನೀರು ಬಿಡಬೇಕೆಂದು ನೀಡಿದ್ದ ತೀರ್ಪು ಇನ್ನೂ ಮುಂದುವರೆದು ನಮ್ಮ ರಾಜ್ಯಕ್ಕೆ ಅನ್ಯಾಯ ಆಗುತ್ತಾ ಬಂದಿದೆ. ಈ ಬಗ್ಗೆ ಕ್ರಮ ಕೈಗೊಳ್ಳಬೇಕಾದ ನಾಡಿನ ರಾಜಕಾರಣಿಗಳಿಗೆ ಇಚ್ಛಾಶಕ್ತಿ ಇಲ್ಲವಾಗಿದ್ದು, ಎಲ್ಲರೂ ಸ್ವಾರ್ಥ ರಾಜಕಾರಣಕ್ಕೆ ಸೀಮಿತವಾಗಿದ್ದಾರೆ. ಒಕ್ಕೂಟದ ವ್ಯವಸ್ಥೆಯಲ್ಲಿ ಇರುವ ಕೇಂದ್ರ ಸರ್ಕಾರವು ಯಾವ ರಾಜ್ಯಕ್ಕೂ ಅನ್ಯಾಯ ಆಗದಂತೆ ನೀರಿನ ಸಮಸ್ಯೆ ಬಗೆಹರಿಸಲು ಮುಂದಾಗಬೇಕು. ಈಗಾಗಲೆಬರಗಾಲದಿಂದ ನೀರಿನ ತಾತ್ವಾರ ಎದುರಾಗಿದ್ದು ಮುಂದಿನ ದಿನಗಳಲ್ಲಿ ನೀರಿಗೆ ಹಾಹಾಕಾರ ಎದುರಾಗಲಿದೆ. ಈ ನಿಟ್ಟಿನಲ್ಲಿ ರಾಜ್ಯ ಸರ್ಕಾರ ಸುಪ್ರಿಂಕೋರ್ಟ್ ಮುಂದೆ ಸಮರ್ಪಕವಾಗಿ ವಾದ ಮಂಡಿಸಬೇಕು. ಇದಕ್ಕೆ ಕೇಂದ್ರ ಸರ್ಕಾರ ಸ್ಪಂಧಿಸಬೇಕು ಎಂದು ಆಗ್ರಹಿಸಿದರು.

ನಿವೃತ್ತ ಪ್ರಾಂಶುಪಾಲರಾದ ನಿಂಗೇಗೌಡರು(ಎನ್‌ಜಿ) ಮಾತನಾಡಿ, ಮೇಕೆದಾಟು ಯೋಜನೆ ತಡವಾಗುತ್ತಿರುವುದು ಜನಪ್ರತಿನಿಧಿಗಳ ಇಚ್ಛಾಶಕ್ತಿಯ ಕೊರತೆ ಹಾಗೂ ಕ್ರೆಡಿಟ್‌ವಾರ್ ನಿಂದ. ಕಾಂಗ್ರೆಸ್ ಸರ್ಕಾರಕ್ಕೆ ಕ್ರೆಡಿಟ್ ಸಿಗುತ್ತದೆ ಎಂದು ಬಿಜೆಪಿ, ಬಿಜೆಪಿ ಸರ್ಕಾರಕ್ಕೆ ಕ್ರೆಡಿಟ್ ಸಿಗುತ್ತದೆ ಎಂದು ಕಾಂಗ್ರೆಸ್, ಬಿಜೆಪಿ ನವರು ಯೋಜನೆಗೆ ಪರೋಕ್ಷವಾಗಿ ವಿರೋಧ ಮಾಡುತ್ತಾ ಬಂದಿದ್ದಾರೆ. ಮೇಕೆದಾಟು ಯೋಜನೆಯ ಉದ್ದೇಶ ಏನು ಎಂದು ಅರಿತು ರಾಜ್ಯದ 224 ಜನಪ್ರತಿನಿಧಿಗಳು ಈ ಯೋಜನೆಯನ್ನು ಅನುಷ್ಠಾನಕ್ಕೆ ತರಲು ಮುಂದಾಗಬೇಕಿದೆ. ಈ ಬಗ್ಗೆ ಹೋರಾಟ ಮಾಡುತ್ತಿರುವ ರಮೇಶ್‌ಗೌಡರು ಮತ್ತು ಕೆಲವರು ಮಾತ್ರ ಕಾವೇರಿ ನೀರನ್ನು ಕುಡಿಯುತ್ತಿಲ್ಲ. ಇಲ್ಲಿ ಓಡಾಡುವ ಪ್ರತಿಯೊಬ್ಬರು ಕಾವೇರಿ ನೀರನ್ನು ಕುಡಿಯುತ್ತಿದ್ದಾರೆ ಆದರೆ ಇತ್ತ ಗಮನಿಸದೆ ಹೋಗುತ್ತಿದ್ದಾರೆ ಎಂದು ಬೇಸರ ವ್ಯಕ್ತಪಡಿಸಿದರು.

ಪ್ರತಿಭಟನೆಯಲ್ಲಿ ವೇದಿಕೆ ಜಿಲ್ಲಾಧ್ಯಕ್ಷ ಬೇವೂರು ಯೋಗೀಶ್‌ಗೌಡ, ಜಗದಾಪುರ ಕೃಷ್ಣೇಗೌಡ, ರ್‍ಯಾಂಬೋ ಸೂರಿ, ಮಂಗಳವಾರಪೇಟೆ ತಿಮ್ಮರಾಜು(ಎಂಟಿಆರ್), ನಿವೃತ್ತ ಶಿಕ್ಷಕ ಪುಟ್ಟಪ್ಪಾಜಿ, ಮೆಣಸಿಗನಹಳ್ಳಿ ರಾಮಕೃಷ್ಣಪ್ಪ, ಚಿಕ್ಕಪ್ಪಾಜಿ, ಪುನೀತ್ ಗೋವಿಂದಹಳ್ಳಿ, ಚಿಕ್ಕೇನಹಳ್ಳಿ ಸುರೇಶ್, ಕಾರುಚಾಲಕ ರಮೇಶ್ ಇತರರು ಇದ್ದರು.

# ಸಂಜೆ ಟಿಪ್ಸ್



## ವಿವೋದಿಂದ ಮತ್ತೆ ಹೊಸ ಫೋನ್ ಲಾಂಚ್

ವಿವೋ ಮೊಬೈಲ್ಸಂಸ್ಥೆಯು ಚೀನಾ ಮಾರುಕಟ್ಟೆಯಲ್ಲಿ ಹೊಸದಾಗಿ ವಿವೋ Y100t 5G ಸ್ಮಾರ್ಟ್ಫೋನ್‌ಅನ್ನು ಬಿಡುಗಡೆ ಮಾಡಿದೆ. ಈ ಫೋನ್ ಮೀಡಿಯಾ ಟೆಕ್ ಡೈಮೆನ್ಸಿಟಿ 8200 ಪ್ರೊಸೆಸರ್ ಸಾಮರ್ಥ್ಯ ಪಡೆದಿದೆ. ಹಾಗೆಯೇ 16 ಮೆಗಾ ಪಿಕ್ಸೆಲ್ ಸೆನ್ಸಾರ್ಕ್ಯಾಮೆರಾವನ್ನು ಪಡೆದುಕೊಂಡಿದೆ. ಹೌದು, ವಿವೋ ಕಂಪೆನಿಯ ಹೊಸ ವಿವೋ Y100t 5G ಸ್ಮಾರ್ಟ್ಫೋನ್ಬಿಡುಗಡೆ ಮಾಡಿದೆ. ಈ ಸ್ಮಾರ್ಟ್ಫೋನ್ನು ್ಯಯಲ್ರಿಯರ್ಕ್ಯಾಮೆರಾ ಸೆಟ್ ಅಪ್‌ಅನ್ನು ಹೊಂದಿದೆ. ಇದರಲ್ಲಿ ಮುಖ್ಯ ಕ್ಯಾಮೆರಾ 64 ಮೆಗಾ ಪಿಕ್ಸೆಲ್ಸೆನ್ಸಾರ್ಸಾಮರ್ಥ್ಯವನ್ನು ಪಡೆದಿದೆ. ಇನ್ನು ಈ ಫೋನ್5000 mAh ಸಾಮರ್ಥ್ಯದ ಬ್ಯಾಟರಿಯನ್ನು ಒಳಗೊಂಡಿದೆ. ಹಾಗೆಯೇ 8GB + 256GB 12GB + 512GB ಆಂತರಿಕ ಸ್ಟೋರೇಜ್‌ಅನ್ನು ಒಳಗೊಂಡಿದೆ. ವಿವೋ Y100t 5G ಮೊಬೈಲ್6.4 ಇಂಚಿನ ಐಅಅ ಡಿಸ್ಪ್ಲೇ ಅನ್ನು ಪಡೆದಿದ್ದು, ಈ ಡಿಸ್ಪ್ಲೇ 2388 × 1080 ಪಿಕ್ಸೆಲ್ಸ್ಕ್ರೀನ್ರೆಸಲ್ಯೂಶನ್ಸಾಮರ್ಥ್ಯವನ್ನು ಪಡೆದುಕೊಂಡಿದೆ. ಇದು 90Hz ರಿಫ್ರೆಶ್ ರೇಟ್ಮತ್ತು 240Hz ಟಚ್ ಸ್ಯಾಂಪ್ಲಿಂಗ್ ರೇಟ್‌ಅನ್ನು ಬೆಂಬಲಿಸಲಿದೆ. ಇನ್ನು ಡಿಸ್ಪ್ಲೇ HDR10+ ಪ್ರಮಾಣೀಕರಣವನ್ನು ಹೊಂದಿದ್ದು, 1300 ನಿಟ್ಸ್ಗರಿಷ್ಠ ಬ್ರೈಟ್ನೆಸ್‌ಅನ್ನು ಒಳಗೊಂಡಿದೆ.

ಈ ಮೊಬೈಲ್ಆಕ್ಟಾ-ಕೋರ್ ಮೀಡಿಯಾ ಟೆಕ್ ಡೈಮೆನ್ಸಿಟಿ 8200 ಪ್ರೊಸೆಸರ್ಪವರ್ ಅನ್ನು ಹೊಂದಿದೆ. ಇದು ಆಂಡ್ರಾಯ್ಡ್13 ಆಧಾರಿತ OriginOS 3ನ ಬೆಂಬಲದೊಂದಿಗೆ ಕೆಲಸ ನಿರ್ವಹಿಸಲಿದೆ. ಹಾಗೆಯೇ 8GB + 256GB 12GB + 512GBಆಂತರಿಕ ಸ್ಟೋರೇಜ್‌ಅನ್ನು ಒಳಗೊಂಡಿದೆ. ಇದಲ್ಲದೆ ವಿಸ್ತರಿಸಬಹುದಾದ RAM ಫೀಚರ್ಸ್‌ಅನ್ನು ಕೂಡ ಒಳಗೊಂಡಿದೆ. ಇದರೊಂದಿಗೆ ಮೆಮೊರಿ ಕಾರ್ಡ್ಮೂಲಕ 1 TBವರೆಗೆ ಸಂಗ್ರಹ ಸಾಮರ್ಥ್ಯವನ್ನು ವಿಸ್ತರಿಸಬಹುದಾಗಿದೆ.

## ಹಾಲು - ಬಾಳೆಹಣ್ಣಿನ ಶೀರಾ

### ಪಾಕ ಶಾಲೆ



### ಬೇಕಾಗಿರುವ ಪದಾರ್ಥ

ಗೋಧಿ ರವಾ 1 ಕಪ್, ಹೆಚ್ಚಿದ ಬಾಳೆ ಹಣ್ಣು 1/2 ಕಪ್, ಸಕ್ಕರೆ 2 ಕಪ್, ಹಾಲು 2 ಕಪ್, ತುಪ್ಪ 1 ಕಪ್, ಏಲಕ್ಕಿ ಪೌಡರ್ಚಿಟಿಕೆ, ಒಣ ದ್ರಾಕ್ಷಿ, ಗೋಡಂಬಿ, ಬದಾಮ್

### ಮಾಡುವ ವಿಧಾನ

ಮೊದಲು ಬಾಣಲೆಗೆ ಎರಡು ಚಮಚ ತುಪ್ಪ ಸುರಿದು ಸಣ್ಣ ಉರಿಯಲ್ಲಿ ಒಣ ದ್ರಾಕ್ಷಿ, ಗೋಡಂಬಿ ಹಾಗೂ ಹೆಚ್ಚಿದ ಬದಾಮ್ನ್ನು ಹುರಿದು ತೆಗೆದಿಟ್ಟುಕೊಳ್ಳಿ.

ನಂತರ ಗೋಧಿ ರವಾವನ್ನು ಬಾಣಲೆಗೆ ಸುರಿದುಕೊಂಡು ಸಣ್ಣ ಉರಿಯಲ್ಲಿ ಹುರಿದುಕೊಳ್ಳಿ. ರವಾ ಹುರಿದ ಪರಿಮಳ ಬಂದು ಅದು ಕಂದು ಬಣ್ಣಕ್ಕೆ ತಿರುಗುತ್ತಿದ್ದಂತೆ ಅದಕ್ಕೆ ಹೆಚ್ಚಿದ ಬಾಳೆಹಣ್ಣನ್ನು ಹಾಕಿ ಮತ್ತೆ ಹುರಿಯಿರಿ. ಬಾಳೆ ಹಣ್ಣಿನ ಚೂರುಗಳನ್ನು ಸೌಟಿನಲ್ಲಿ ನುರಿಯುತ್ತಾ ಹುರಿಯಿರಿ. ನಂತರ ಆ ಮಿಶ್ರಣಕ್ಕೆ ಸಕ್ಕರೆ ಸೇರಿಸಿ ಎರಡು ಕಪ್ಕುದಿಯುವ ಹಾಲು ಹಾಕಿ ತಿರುವುತ್ತಾ ಇರಿ. ರವಾ ಮತ್ತು ಬಾಳೆಹಣ್ಣಿನ ಮಿಶ್ರಣದಲ್ಲಿ ಸಕ್ಕರೆ ಕರಗಿದ ತಕ್ಷಣ ತುಪ್ಪ ಸುರಿದು ಮತ್ತೆ ಸರಿಯಾಗಿ ತಿರುವಿ. ರವಾ ಬೇಯಲು ಸ್ವಲ್ಪ ನೀರು ಬೇಕು ಅಂತ ನಿಮಗೆ ಅನ್ನಿಸಿದರೆ ಕುದಿಯುವ ನೀರನ್ನ ಅಷ್ಟಷ್ಟಾಗಿ ಸೇರಿಸಿ ತಿರುವುತ್ತಿರಿ. ರವಾದೊಂದಿಗಿದ್ದ ದ್ರವವೆಲ್ಲ ಆರಿ ಮುದ್ದೆಯಂತಾದರೆ ಶೀರಾ ಸಿದ್ಧ ಎಂದು ಅರ್ಥ. ನಂತರ ಮೊದಲೇ ಹುರಿದು ಇಟ್ಟುಕೊಂಡಿದ್ದ ಡ್ರೈಫ್ರುಟ್ಸ್ಹಾಕಿ ಶೃಂಗರಿಸಿದರೆ ಬಿಸಿ ಬಿಸಿ ಹಾಲು- ಬಾಳೆಹಣ್ಣಿನ ಶೀರಾ ಸವಿಯಲು ಸಿದ್ಧ.

## ಹೊಸ ಜಮೀನು ಖರೀದಿಸಿದ ಸುಹಾನಾ ಖಾನ್



ಶಾರುಖ್ ಖಾನ್ ಪುತ್ರಿ ಸುಹಾನಾ ಖಾನ್ ಸಿನಿಮಾ ರಂಗಕ್ಕೆ ಎಂಟ್ರಿ ನೀಡಿ ಸಂಭಾವನೆ ಪಡೆಯಲು ಶುರುಮಾಡುತ್ತಿದ್ದಂತೆ ಇದೀಗ ಮುಂಬೈ ಹೊರವಲಯದಲ್ಲಿ ದೊಡ್ಡ ರಿಯಲ್ ಎಸ್ಟೇಟ್ ಹೂಡಿಕೆಯನ್ನು ಮಾಡಿದ್ದಾರೆ.

ಮುಂಬೈ ಸಮೀಪದ ಅಲಿಭಾಗ್?ನಲ್ಲಿ ಕೋಟ್ಯಂತರ ರೂ. ಹಣ ಕೊಟ್ಟು ದೊಡ್ಡ ಜಮೀನನ್ನು ಸುಹಾನಾ ಖಾನ್ ಖರೀದಿ ಮಾಡಿದ್ದಾರೆ.

ಸುಮಾರು ಎರಡು ಎಕರೆ ಜಮೀನನ್ನು ಸುಹಾನಾ ಖಾನ್ ಖರೀದಿ ಮಾಡಿದ್ದಾರೆ. ಈ ಜಮೀನಿನ ಅಳತೆ 78,361 ಚದರ ಅಡಿಗಳಿವೆ. ಈ ಜಮೀನು ನೊಂದಾವಣಿ ಮಾಡಿಸಿಕೊಳ್ಳಲು 57 ಲಕ್ಷ ರೂಪಾಯಿ ಶುಲ್ಕವನ್ನು ಸುಹಾನಾ ಖಾನ್ ತುಂಬಿದ್ದು, ದಾಖಲೆಯಲ್ಲಿರುವಂತೆ ಒಟ್ಟು ಆಸ್ತಿಯ ಮೌಲ್ಯ 12.91 ಕೋಟಿ ರೂ. ಎಂದು ಮಾಹಿತಿ ಲಭಿಸಿದೆ. ಸುಹಾನಾ ಖಾನ್ ತಮ್ಮ ಮೊದಲ ಸಿನಿಮಾದ ಬಳಿಕ ಒಂದಷ್ಟು ಹೊಸ ಸಿನಿಮಾ ಅವಕಾಶಗಳನ್ನು ಪಡೆದಿದ್ದಾರೆ ಎನ್ನಲಾಗುತ್ತಿದೆ. ನಟನೆಗೆ ಎಂಟ್ರಿ ಕೊಟ್ಟು ಸಂಭಾವನೆ ಪಡೆಯಲು ಆರಂಭಿಸಿದಂತೆ ಹೂಡಿಕೆಯನ್ನು ಸಹ ಪ್ರಾರಂಭ ಮಾಡಿದ್ದಾರೆ ಸುಹಾನಾ ಖಾನ್. ಮುಂಬೈ ಹೊರವಲಯದಲ್ಲಿ ದೊಡ್ಡ ರಿಯಲ್ ಎಸ್ಟೇಟ್ ಹೂಡಿಕೆಯನ್ನು ನಟಿ ಸುಹಾನಾ ಖಾನ್ ಮಾಡಿದ್ದಾರೆ. ಶಾರುಖ್ ಖಾನ್ ಕುಟುಂಬದ ಎಲ್ಲರೂ ಸ್ವಂತ ಉದ್ಯಮ, ಹೂಡಿಕೆಗಳನ್ನು ಮಾಡುತ್ತಿದ್ದಾರೆ. ಶಾರುಖ್ ಖಾನ್, ನಟನೆ ಜೊತೆಗೆ ನಿರ್ಮಾಣ ಸಂಸ್ಥೆ, ಸ್ಟುಡಿಯೋ, ರಿಯಲ್ ಎಸ್ಟೇಟ್ ಮೇಲೆ ಹೂಡಿಕೆ, ಕೆಲವು ಸ್ಟಾರ್ಟ್‌ಅಪ್ ಗಳ ಮೇಲೆ ಹೂಡಿಕೆಗಳನ್ನು ಮಾಡಿದ್ದಾರೆ. ಶಾರುಖ್ ಖಾನ್‌ರ ಪತ್ನಿ ಗೌರಿ ಖಾನ್, ಜನಪ್ರಿಯ ಒಳಾಂಗಣ ವಿನ್ಯಾಸಕಿಯಾಗಿದ್ದು ಒಳಾಂಗಣ ವಿನ್ಯಾಸದ ಸಂಸ್ಥೆಯೊಂದರ ಮಾಲಕಿಯಾಗಿದ್ದಾರೆ. ಇತ್ತೀಚೆಗೆ 'ಟೋರಿ' ಹೆಸರಿನ ಐಶಾರಾಮಿ ರೆಸ್ಟೋರೆಂಟ್ ಒಂದನ್ನು ಮುಂಬೈನಲ್ಲಿ ಪ್ರಾರಂಭ ಮಾಡಿದ್ದಾರೆ. ಇನ್ನು ಪುತ್ರ ಆರ್ಯನ್ ಖಾನ್ ಡಿವೋಲ್ ಹೆಸರಿನ ಬ್ರ್ಯಾಂಡ್ ಅನ್ನು ಪ್ರಾರಂಭಿಸಿದ್ದು, ಸ್ಟೈಲಿಷ್ ಉಡುಪು, ಗೆಜೆಟ್ ಜೊತೆಗೆ ವೋಡ್ಕಾ ಸಹ ಮಾರಾಟ ಮಾಡುತ್ತಾರೆ. ಸುಹಾನಾ ಖಾನ್ ಇನ್‌ಸ್ಟಾ ಮಾಡೆಲ್ ಆಗಿದ್ದು ಸೌಂದರ್ಯವರ್ಧಕ ಸಂಸ್ಥೆಯೊಂದರಲ್ಲಿ ಹೂಡಿಕೆ ಮಾಡಿದ್ದಾರೆ. ಇದೀಗ ರಿಯಲ್ ಎಸ್ಟೇಟ್ ಹೂಡಿಕೆ ಆರಂಭಿಸಿದ್ದಾರೆ.

## ಬೇಸಿಗೆಯಲ್ಲಿ ಸೌತೆಕಾಯಿ ಸೇವಿಸಿ ಆರೋಗ್ಯ ಕಾಪಾಡಿಕೊಳ್ಳಿ

### ಹೆಲ್ತ್ ಟಿಪ್ಸ್



ಬೇಸಿಗೆಯಲ್ಲಿ ನಾವು ಯಾವ ಹಣ್ಣು ತರಕಾರಿಗಳನ್ನು ಸೇವಿಸಬೇಕು ಎಂಬುದನ್ನು ತಿಳಿದುಕೊಂಡು ಅಂತಹ ತರಕಾರಿ, ಹಣ್ಣುಗಳನ್ನು ಸೇವಿಸುವ ಮೂಲಕ ಬೇಸಿಗೆಯಲ್ಲಿ ದೇಹದ ಮೇಲೆ ಆಗುವ ತೊಂದರೆಯಿಂದ ತಪ್ಪಿಸಿಕೊಳ್ಳಲು ಸಾಧ್ಯವಾಗುತ್ತದೆ.

ಬೇಸಿಗೆಯ ದಿನಗಳಲ್ಲಿ ಸೌತೆಕಾಯಿಯನ್ನು ಸೇವಿಸುವುದರಿಂದ ಆರೋಗ್ಯ ಕಾಪಾಡ ಬಹುದಾಗಿರು ವುದರಿಂದ ಅದರ ಬಳಕೆಯನ್ನು ಹೆಚ್ಚೆಚ್ಚಾಗಿ ಮಾಡುವುದು ಒಳಿತು.

ಏಕೆಂದರೆ ಸೌತೆಕಾಯಿಯಲ್ಲಿ ನೀರಿನಾಂಶ ಹೆಚ್ಚಿರುವ ಕಾರಣ ದೇಹದ ದಾಹವನ್ನು ತಣಿಸಲು ಮತ್ತು ದೇಹವನ್ನು ತಂಪಾಗಿಡಲು ಇದು ಸಹಕಾರಿಯಾಗಿದೆ.

ಸೌತೆಕಾಯಿಯನ್ನು ಅಡುಗೆಯಲ್ಲಿ ಬಳಸಲಾಗುತ್ತಿದೆಯಾದರೂ ಬೇಸಿಗೆಯಲ್ಲಂತು ಇದನ್ನು ಹಸಿಯಾಗಿ ಸೇವಿಸಿದಷ್ಟು ಅನುಕೂಲ ಜಾಸ್ತಿ. ಮಿಡಿ ಸೌತೆಯನ್ನು ತಿನ್ನಲೆಂದೇ ಬಳಸಲಾಗುತ್ತದೆ. ಉಳಿದಂತೆ ಮಲೆನಾಡುಗಳಲ್ಲಿ ದೊಡ್ಡಗಾತ್ರದ ಸೌತೆಕಾಯಿಯನ್ನು ಬೆಳೆಯಲಾಗುತ್ತದೆ.

ಸೌತೆಕಾಯಿ ಹಲವು ರೀತಿಯಲ್ಲಿ ಆರೋಗ್ಯಕಾರಿಯಾಗಿರುವುದರಿಂದ ಇದರ ಬಳಕೆ ಮಾಡಿದಷ್ಟು ನಮಗೆ ಅನುಕೂಲ ಜಾಸ್ತಿ. ಬೇಸಿಗೆ ದಿನಗಳಲ್ಲಿ ಹೆಚ್ಚಾಗಿ ಬಳಕೆಯಾಗುವ ಸೌತೆಕಾಯಿ ದೇಹದಲ್ಲಿ ಉಷ್ಣಾಂಶವನ್ನು ತಗ್ಗಿಸುವುದಲ್ಲದೆ, ಬಾಯಾರಿಕೆಯನ್ನು ಕಡಿಮೆ ಮಾಡುತ್ತದೆ. ಅಷ್ಟೇ ಅಲ್ಲ ಇದರ ರಸವನ್ನು ತೆಗೆದು ಮುಖ ಕೈಕಾಲು, ಚರ್ಮಕ್ಕೆ ಹಚ್ಚಿ ಕೆಲವು ಸಮಯ ಬಿಟ್ಟು ತೊಳೆಯುವುದರಿಂದ ಚರ್ಮದ ಸುಕ್ಕು ಕಡಿಮೆಯಾಗಿ ಚರ್ಮದ ಕಾಂತಿ ಹೆಚ್ಚುತ್ತದೆ.

ಇನ್ನು ಅಜೀರ್ಣ ಸಮಸ್ಯೆಯಿಂದ ಬಳಲುವವರು ಸೌತೆಕಾಯಿಯನ್ನು ಆಹಾರದೊಂದಿಗೆ ಸೇವಿಸುವುದರಿಂದ ಅಜೀರ್ಣದ ಸಮಸ್ಯೆಯನ್ನು ದೂರ ಮಾಡಬಹುದು. ಕೆಲವೊಮ್ಮೆ ಅಂಗಾಲುಗಳಲ್ಲಿ ಉರಿಕಾಣಿಸಿಕೊಳ್ಳುತ್ತದೆ. ಈ ವೇಳೆ ಸೌತೆಕಾಯಿಯ ತಿರುಳು ತೆಗೆದು ಅದರಿಂದ ಉಜ್ಜಿದರೆ ಶಮನವಾಗುತ್ತದೆ. ದೇಹದ ಉಷ್ಣದ ಕಾರಣಕ್ಕೆ ಮೂತ್ರ ಸಮರ್ಪಕವಾಗಿ ಹೋಗದೆ ತೊಂದರೆ ಅನುಭವಿಸುವವರು ಒಂದು ಬಟ್ಟಲು ಸೌತೆ ರಸದೊಂದಿಗೆ ಒಂದು ಚಮಚ ಜೇನು ತುಪ್ಪ ಹಾಗೂ ನಿಂಬೆ ರಸವನ್ನು ಹಾಕಿ ದಿನಕ್ಕೆರಡು ಬಾರಿ ಸೇವಿಸುತ್ತಾ ಬಂದರೆ ಮೂತ್ರ ವರ್ಧನೆಯಾಗಿ ಸಮಸ್ಯೆಗೆ ಪರಿಹಾರ ದೊರಕಲಿದೆ.

## ಧನುಕಾ ಗ್ರೂಪ್ ಅಧ್ಯಕ್ಷ ಡಾ. ಅಗರ್ ವಾಲ್‌ಗೆ ಜೀವನಮಾನ ಸಾಧನೆ ಪ್ರಶಸ್ತಿ ಪ್ರದಾನ



ಭಾರತೀಯ ಕೃಷಿ ಸಮುದಾಯಕ್ಕೆ ಅಸಾಧಾರಣ ಕೊಡುಗೆಯನ್ನು ಗುರುತಿಸಿ ಧನುಕಾಗ್ರೂಪ್ ನ ಅಧ್ಯಕ್ಷ ಡಾ.ರಾಮ್ ಗೋಪಾಲ್ ಅಗರ್ವಾಲ್ ಅವರಿಗೆ ಎಂಟಮಾಲಜಿಕಲ್ ಸೊಸೈಟಿ ಆಫ್‌ಇಂಡಿಯಾ(ಇ.ಎಸ್.ಐ)ನಿಂದ ಜೀವಮಾನ ಸಾಧನೆ ಪ್ರಶಸ್ತಿ ನೀಡಿ ಪುರಸ್ಕರಿಸಲಾಗಿದೆ. ಈ ಪುರಸ್ಕಾರ ಡಾ.ಅಗರ್ ವಾಲ್ ಅವರ ರೈತರಿಗೆ ಉತ್ಪಾದಕತೆ, ಲಾಭದಾಯಕತೆ ಮತ್ತು ಸ್ಥಾನಮಾನ ಹೆಚ್ಚಿಸಿ ಭಾರತದ ಕೃಷಿಯ ಭವಿಷ್ಯವನ್ನು ರೂಪಿಸುವಲ್ಲಿ ಗಮನಾರ್ಹ ಕೊಡುಗೆಗಾಗಿ ನೀಡಲಾಗಿದೆ.

ಇ.ಎಸ್.ಐ.ನ ಸಮಿತಿಯು ಧನುಕಾ ಸಮೂಹದ ಅಧ್ಯಕ್ಷರಿಗೆ ಅವರ ಭಾರತೀಯ ಕೃಷಿಯನ್ನು ಉಜ್ವಲಗೊಳಿಸುವ, ಕೃಷಿಯನ್ನು ಹೆಚ್ಚಿಸಿದ ಜೀವನೋಪಾಯ ಮತ್ತು ಎತ್ತರದ ಸಾಮಾಜಿಕ ಸ್ಥಾನಮಾನದ ಮೂಲಕ ಘನತೆಯ ವೃತ್ತಿಯಾಗಿಸುವ ಅವರ ಆಳವಾದ ಬದ್ಧತೆ, ಸದೃಢ ನಿರ್ಣಯ, ಸೇವಾ ಸಕ್ರಿಯತೆ ಮತ್ತು ಉನ್ನತ ಮಟ್ಟದ ವೃತ್ತಿಪರತೆಗಾಗಿ ಜೀವಮಾನ ಸಾಧನೆ ಪುರಸ್ಕಾರಕ್ಕೆ ಶಿಫಾರಸು ಮಾಡಿತು.

ಬೆಂಗಳೂರಿನ ಗಾಂಧಿ ಕೃಷಿ ವಿಜ್ಞಾನ ಕೇಂದ್ರ(ಜಿಕೆವಿಕೆ)ದಲ್ಲಿ ನಡೆದ ಸಮಾರಂಭದಲ್ಲಿ ಡಾ.ಆರ್.ಜಿ. ಅಗರ್ ವಾಲ್ ಅವರು ಪ್ರಶಸ್ತಿ ಸ್ವೀಕರಿಸಿದರು, ಈ ಸಂದರ್ಭದಲ್ಲಿ ಯು.ಎ.ಎಸ್. ಬೆಂಗಳೂರಿನ ಕುಲಪತಿ ಡಾ.ಎಸ್.ವಿ. ಸುರೇಶ, ಐಸಿಎಆರ್-ನ್ಯಾಷನಲ್ ಬ್ಯೂರೋ ಆಫ್ ಅಗ್ರಿಕಲ್ಚರಲ್ ಇನ್ಸೆಕ್ಟ್ ರಿಸೋರ್ಸಸ್(ಎನ್.ಬಿ.ಎ.ಐ.ಆರ್)ನ ಡಾ.ಎಸ್.ಎನ್. ಸುಶಿಲ್,ಐಸಿಎಆರ್-ನ್ಯಾಷನಲ್ ಬ್ಯೂರೋ ಆಫ್ ಅಗ್ರಿಕಲ್ಚರಲ್ ಇನ್ಸೆಕ್ಟ್ ರಿಸೋರ್ಸಸ್(ಎನ್.ಬಿ.ಎ.ಐ.ಆರ್)ಡಾ.ಎಸ್.ಎನ್.ಪುರಿ, ಇ.ಎಸ್.ಐ ಅಧ್ಯಕ್ಷ ಡಾ.ವಿ.ವಿ.ರಾಮಮೂರ್ತಿ ಮತ್ತಿತರೆ ಎಂಟಮಾಲಜಿ ವಿಜ್ಞಾನಿಗಳು ಮತ್ತುವಿದ್ಯಾರ್ಥಿಗಳು ಭಾಗವಹಿಸಿದ್ದರು.ಡಾ.ಆರ್.ಜಿ. ಅಗರ್ ವಾಲ್ ತಮ್ಮ ವೃತ್ತಿಯ 55 ವರ್ಷಗಳನ್ನು ಕೃಷಿ ಕ್ಷೇತ್ರಕ್ಕೆ ಮೀಸಲಾಗಿರಿಸಿ ರಾಷ್ಟ್ರೀಯ ಸಂಪತ್ತಿಗೆದುಡಿದಿದ್ದಾರೆ. ಅವರ ಔದಾರ್ಯದಿಂದ ರಾಜಸ್ಥಾನದಲ್ಲಿ ಮೂರು ಶಾಲೆಗಳು, ವೃಂದಾವನದಲ್ಲಿ ಆಶ್ರಮಗಳು ಮತ್ತು

ಗೋವರ್ಧನ್ ನಲ್ಲಿ ಚಾರಿಟಬಲ್ ಡಿಸ್ಪೆನ್ಸರಿ ಮತ್ತು ಏಮ್ಸ್ ನಲ್ಲಿ ವೆಯಿಟಿಂಗ್ ಹಾಲ್ ನಿರ್ಮಾಣಗೊಂಡಿವೆ.ಈ ಪ್ರಶಸ್ತಿ ಪಡೆದ ಡಾ.ಆರ್ .ಜಿ. ಅಗರ್ ವಾಲ್ ಇ.ಎಸ್.ಐ.ಗೆ ತಮ್ಮ ಹೃದಯಪೂರ್ವಕ ಕೃತಜ್ಞತೆ ವ್ಯಕ್ತಪಡಿಸಿದರು. ಅವರಪ್ರಶ್ತಿ ಸ್ವೀಕಾರ ಭಾಷಣದಲ್ಲಿ ತಮ್ಮದೇ ಕೃಷಿ ವಿಜ್ಞಾನಿಯಾಗಿ ವಹಿಸಿದ ಪಾತ್ರ ಕುರಿತು ವಿವರಿಸಿದರು. ಅವರು ರೈತರಿಗೆಉತ್ತಮ ಇಳುವರಿಗೆ ಆವಿಷ್ಕಾರಕ ಪರಿಹಾರಗಳು ಅವರಿಗೆ ಆದಾಯ ಹೆಚ್ಚಿಸುತ್ತವೆ ಎಂದರು. ಮುಂದಿನ ವರ್ಷದಿಂದ ಎಂಟಮಾಲಜಿ ಸಂಶೋಧನೆಯಲ್ಲಿ ತೊಡಗಿಕೊಳ್ಳುವ ವಿದ್ಯಾರ್ಥಿಗಳಿಗೆ 1 ಲಕ್ಷ ರೂ. ನಗದು ಬಹುಮಾನ ಪ್ರಕಟಿಸಿದರು.

## ರಿಂಕಲ್ಸ್‌ಗೆ ತಡೆಯಲು ಸಲಹೆ

### ಬ್ಯೂಟಿ ಟಿಪ್ಸ್



ಸೂರ್ಯನ ಹಾನಿಕಾರಕ ಕಿರಣಗಳು ಮುಖದ ಮೇಲೆ ಬೀಳುವುದರಿಂದ ಚರ್ಮ ನೈಸರ್ಗಿಕವಾದ ಹೊಳಪನ್ನು ಕಳೆದುಕೊಳ್ಳುತ್ತದೆ. ಇದರಿಂದ ಸುಕ್ಕುಗಳು ಕಾಣಿಸಿಕೊಳ್ಳುತ್ತವೆ. ಇದನ್ನು ನಿವಾರಿಸಲು ರಾಸಾಯನಿಕಯುಕ್ತ ಕ್ರೀಂಗಳನ್ನು ಬಳಸುವ ಬದಲು ಈ ಮನೆಮದ್ದನ್ನು ಬಳಸಿ.

ರೋಸ್ ವಾಟರ್ ಇದು ಚರ್ಮ ಮುಚ್ಚಿದ ರಂಧ್ರಗಳಲ್ಲಿರುವ ಕೊಳೆಯನ್ನು ಸ್ವಚ್ಛಗೊಳಿಸುತ್ತದೆ. ಮತ್ತು ಕಣ್ಣುಗಳ ಕೆಳಗಿನ ಊತವನ್ನು ಕಡಿಮೆ ಮಾಡುತ್ತದೆ. ಹಾಗಾಗಿ 2 ಚಮಚ ರೋಸ್ ವಾಟರ್ ಗೆ ಕೆಲವು ಹನಿ ಗ್ಲಿಸರಿನ್ ಮತ್ತು ½ ಚಮಚ ನಿಂಬೆ ರಸ ಸೇರಿಸಿ ಚೆನ್ನಾಗಿ ಮಿಕ್ಸ್ ಮಾಡಿ ಅದನ್ನು ಹತ್ತಿಯ ಸಹಾಯದಿಂದ ಪ್ರತಿ ರಾತ್ರಿ ಮಲಗುವ ಮುನ್ನ ಮುಖಕ್ಕೆ ಹಚ್ಚಿ.

ಮೊಸರು ಮತ್ತು ಸೌತೆಕಾಯಿ ಚರ್ಮದಲ್ಲಿರುವ ಸತ್ತ ಚರ್ಮವನ್ನು ಹೊರಹಾಕಿ ಚರ್ಮವನ್ನು ಶುದ್ಧಗೊಳಿಸುತ್ತದೆ. ಚರ್ಮವನ್ನು ತಂಪಾಗಿಸುತ್ತದೆ. ಹಾಗಾಗಿ ½ ಕಪ್ ಮೊಸರಿಗೆ 2 ಚಮಚ ಸೌತೆಕಾಯಿ ರಸವನ್ನು ಸೇರಿಸಿ ಮಿಕ್ಸ್ ಮಾಡಿ ಮುಖಕ್ಕೆ ಹಚ್ಚಿ 20 ನಿಮಿಷ ಬಿಟ್ಟು ಮುಖವನ್ನು ವಾಶ್ ಮಾಡಿ.

## ರಾಶಿ ಭವಿಷ್ಯ



ಜಯಶ್ರೀ.ಬಿ.ಆರ್
ಖ್ಯಾತ ಜ್ಯೋತಿಷಿ
ದೂರವಾಣಿ–9964739507
www.jyotishyavaastu.com

**ಮೇಷ:** ವ್ಯವಹಾರದಲ್ಲಿ ಚಿಂತೆ ಮತ್ತು ನಷ್ಟ, ಸಂಗಾತಿಯೊಂದಿಗೆ ಕಲಹ, ಪಾಲುದಾರಿಕೆಯಲ್ಲಿ ಸಮಸ್ಯೆ, ಅಪವಾದ ಅಪನಿಂದನೆ.

**ವೃಷಭ:** ಆತುರ, ಮುಂಗೋಪ, ಅನಗತ್ಯ ಖರ್ಚು, ದುಃಸ್ವಪ್ನಗಳು, ಆರ್ಥಿಕವಾಗಿ ಸ್ವಲ್ಪ ಚೇತರಿಕೆ, ಉದ್ಯೋಗದಲ್ಲಿ ನಷ್ಟ.

**ಮಿಥುನ:** ಮಕ್ಕಳಿಂದ ಲಾಭ, ಮಿತ್ರರಿಂದ ಸಹಕಾರ, ಲಾಭ,ನಷ್ಟ ಸಮ ಪ್ರಮಾಣ, ಸಾಲ ತೀರಿಸುವ ಅವಕಾಶ, ಆರೋಗ್ಯದಲ್ಲಿ ಚೇತರಿಕೆ.

**ಕಟಕ:** ಸ್ಥಿರಾಸ್ತಿ ವಿಷಯದಲ್ಲಿ ಸಮಸ್ಯೆ, ಮಾನಸಿಕ ಸಂಕಟ, ಬೇಸರ, ಮಾಟ ಮಂತ್ರ ತಂತ್ರದ ಆತಂಕ, ವಿದ್ಯಾಭ್ಯಾಸದಲ್ಲಿ ನಿರಾಸಕ್ತಿ

**ಸಿಂಹ :** ಅನಿರೀಕ್ಷಿತ ಖರ್ಚು, ಸ್ತ್ರೀಯರಿಂದ ಅಪವಾದ, ಸ್ಥಿರಾಸ್ತಿಯಿಂದ ನಷ್ಟ, ಮಕ್ಕಳಿಂದ ಯೋಗ ಫಲ.

**ಕನ್ಯಾ:** ಆರ್ಥಿಕ ಅಡೆತಡೆಗಳು, ಮಕ್ಕಳ ಭವಿಷ್ಯದ ಚಿಂತೆ, ಕೌಟುಂಬಿಕ ಚಿಂತೆ, ಅಪವಾದಗಳು, ಅನಗತ್ಯ ತಿರುಗಾಟ.

**ತುಲಾ:** ಸೋಮಾರಿತನ, ಉಡಾಫೆ, ಆರೋಗ್ಯದಲ್ಲಿ ವ್ಯತ್ಯಾಸ, ಕೌಟುಂಬಿಕ ಕಲಹ, ವಿದ್ಯಾಭ್ಯಾಸದಲ್ಲಿ ನಿರಾಸಕ್ತಿ.

**ವೃಶ್ಚಿಕ:** ಸಾಲದ ಚಿಂತೆ, ಪಾಲುದಾರಿಕೆಯಲ್ಲಿ ನಷ್ಟ, ಅವಕಾಶ ಕೈ ತಪ್ಪುವುದು, ಉದ್ಯೋಗ ಲಾಭ, ಪರಿಹಾರ ಹಸುವಿಗೆ ಬೆಲ್ಲ ತಿನ್ನಿಸಿ.

**ಧನಸ್ಸು:** ಮಕ್ಕಳಿಂದ ಲಾಭ, ಸಾಲ ಮಾಡುವ ಯೋಚನೆ, ಕೌಟುಂಬಿಕ ಸಮಸ್ಯೆ, ತಂದೆಯಿಂದ ಸಹಕಾರ.

**ಮಕರ:** ಉದ್ಯೋಗದಲ್ಲಿ ಎಳೆದಾಟ, ಮಕ್ಕಳಿಂದ ಲಾಭ, ಗೃಹ ನಿರ್ಮಾಣಕ್ಕೆ ಅನುಕೂಲಕರ, ಗೌರವಕ್ಕೆ ಧಕ್ಕೆ.

**ಕುಂಭ:** ಪ್ರಯಾಣದಲ್ಲಿ ಎಚ್ಚರಿಕೆ, ವ್ಯಾಮೋಹಕ್ಕೆ ಬಲಿ, ಉದ್ಯೋಗದಲ್ಲಿ ಪ್ರಗತಿ, ವಸ್ತ್ರಾಭರಣ ಖರೀದಿಗೆ ಉತ್ತಮ.

**ಮೀನ:** ಆಯುಷ್ಯದ ಚಿಂತೆ, ಕಿರಿಕಿರಿ, ಕಲಹಗಳು, ಕೋರ್ಟ್ ಕೇಸುಗಳಲ್ಲಿ ಹಿನ್ನಡೆ, ನೆರೆಹೊರೆಯವರೊಂದಿಗೆ ಮನಃಸ್ತಾಪ.

## ಪೂರ್ಣಿಮಾ ದಿನ

ಭಾರತದಲ್ಲಿ ಮಾಘಿ ಪೂರ್ಣಿಮಾ, ಅಥವಾ ಮಾಘ ಪೂರ್ಣಿಮಾ, ಹಿಂದೂ ಕ್ಯಾಲೆಂಡರ್ ತಿಂಗಳ ಮಾಘದಲ್ಲಿ ಸಂಭವಿಸುವ ಹುಣ್ಣಿಮೆಯ ದಿನವಾಗಿದೆ. ಈ ವರ್ಷ, ಇದು ಫೆಬ್ರವರಿ 24 ರಂದು ನಡೆಯುತ್ತದೆ. ಅನೇಕ ಭಕ್ತರು ಚಂದ್ರನನ್ನು ಪೂಜಿಸುತ್ತಾರೆ ಮತ್ತು ಧಾರ್ಮಿಕ ನಾಯಕ ಮತ್ತು ಬೌದ್ಧ ಧರ್ಮದ ಸಂಸ್ಥಾಪಕ ಗೌತಮ ಬುದ್ಧನನ್ನು ಸ್ಮರಿಸುವ ಕೆಲವು ಜನಸಂಖ್ಯೆಯು ಇದೆ. ಭಾರತದಾದ್ಯಂತ ಇರುವ ಹಿಂದೂಗಳು ಈ ಮಂಗಳಕರ ದಿನವನ್ನು ವಿವಿಧ ರೀತಿಯಲ್ಲಿ ಆಚರಿಸುತ್ತಾರೆ, ಅದನ್ನು ನಾವು ಈ ಲೇಖನದಲ್ಲಿ ಪ್ರದರ್ಶಿಸುತ್ತೇವೆ. ಹಿಂದೂಗಳು ಮಾಘ ಮಾಸವನ್ನು ಹಿಂದೂ ಕ್ಯಾಲೆಂಡರ್ನಲ್ಲಿರುವ ಎಲ್ಲಾ ತಿಂಗಳುಗಳಲ್ಲಿ ಅತ್ಯಂತ ಮಹತ್ವಪೂರ್ಣವೆಂದು ಪರಿಗಣಿಸುತ್ತಾರೆ. ಮಾಘಿ ಪೂರ್ಣಿಮಾವನ್ನು ಆಚರಿಸುವಾಗ, ಭಕ್ತರು ಉಪವಾಸ ಮಾಡುತ್ತಾರೆ, ಪವಿತ್ರ ನೀರಿನಲ್ಲಿ ಸ್ನಾನ ಮಾಡುತ್ತಾರೆ, ದತ್ತಿ ಕಾರ್ಯಗಳಿಗೆ ದೇಣಿಗೆ ನೀಡುತ್ತಾರೆ ಮತ್ತು ವಿಷ್ಣು ಮತ್ತು ಹನುಮಾನ್ ಮುಂತಾದ ದೇವರುಗಳಿಗೆ ಪ್ರಾರ್ಥನೆ ಸಲ್ಲಿಸುತ್ತಾರೆ. ಗಂಗಾ (ಗಂಗಾ), ಯಮುನಾ, ಕಾವೇರಿ ಮತ್ತು ಮುಂತಾದ ಕೆಲವು ನದಿಗಳಲ್ಲಿ ತೆಗೆದ ಈ ಪವಿತ್ರ ಸ್ನಾನವು ಬಹಳ ಭವಿಷ್ಯದಾಯಕವೆಂದು ಹಿಂದೂಗಳು ನಂಬುತ್ತಾರೆ. ಈ ದಿನದಂದು ಭಗವಾನ್ ವಿಷ್ಣುವು ಗಂಗಾ ನದಿಯಲ್ಲಿ ನೆಲೆಸಿದ್ದಾನೆ ಎಂದು ಹಿಂದೂ ಪುರಾಣಗಳು ಹೇಳುತ್ತವೆ ಮತ್ತು ನೀರನ್ನು ಸ್ಪರ್ಶಿಸುವುದು ಸಹ ಜನರಿಗೆ ತುಂಬಾ ಪ್ರಯೋಜನಕಾರಿಯಾಗಿದೆ. ಅದರ ಜೊತೆಗೆ ಈ ದಿನದಂದು ಸಲ್ಲಿಸಲಾಗುವ ಪ್ರಾರ್ಥನೆಗಳು ಅವರ ಆಶಯಗಳು ನಿಜವಾಗುವುದು ಖಚಿತ ಎಂದು ಹೆಚ್ಚಿನ ಭಕ್ತರು ನಂಬುತ್ತಾರೆ.ಭಾರತದಾದ್ಯಂತ ಜನರು ಪ್ರದೇಶಗಳಾದ್ಯಂತ ವಿಭಿನ್ನ ಪದ್ಧತಿಗಳನ್ನು ಹೊಂದಿದ್ದಾರೆ. ದಕ್ಷಿಣ ರಾಜ್ಯವಾದ ತಮಿಳುನಾಡು ಪ್ರತಿ ವರ್ಷ ವಿಶೇಷ 'ಫ್ಲೋಟ್' ಉತ್ಸವವನ್ನು ಆಯೋಜಿಸುತ್ತದೆ. ಅವರ ದೇವತೆಗಳಾದ ಮೀನಾಕ್ಷಿ ಮತ್ತು ಸುಂದೇಶ್ವರ ದೇವರ ಅಲಂಕೃತ ವಿಗ್ರಹಗಳನ್ನು ಫ್ಲೋಟ್ಗಳ ಮೇಲೆ ಜೋಡಿಸಲಾಗಿದೆ. ಉತ್ತರ ಭಾರತ (ಅಲಹಾಬಾದ್ ಮತ್ತು ಪ್ರಯಾಗದಂತಹ ನಗರಗಳು) ಮೂರು ಪ್ರಮುಖ ನದಿಗಳ ಸಂಗಮದಲ್ಲಿ ವಾರ್ಷಿಕವಾಗಿ ಮಾಘ ಮೇಳವನ್ನು (ದೊಡ್ಡ ಧಾರ್ಮಿಕ ಜಾತ್ರೆ) ನಡೆಸುತ್ತದೆ - ಗಂಗಾ (ಗಂಗಾ), ಯಮುನಾ ಮತ್ತು ಪೌರಾಣಿಕ ಸರಸ್ವತಿ ನದಿ. ಧಾರ್ಮಿಕ ಪ್ರಾಮುಖ್ಯತೆಯ ಹೊರತಾಗಿ, ಜ್ಯೋತಿಷ್ಯಕ್ಕೆ ಸಂಬಂಧಿಸಿದಂತೆ ಈ ದಿನವು ಮುಖ್ಯವಾಗಿದೆ. ಸೂರ್ಯನು ಮಕರ ರಾಶಿಗೆ ಚಲಿಸುವಾಗ, ಚಂದ್ರನು ಕರ್ಕಾಟಕ ರಾಶಿಗೆ ಚಲಿಸುತ್ತಾನೆ. ಪವಿತ್ರ ಸ್ನಾನವು ಸೂರ್ಯ ಮತ್ತು ಚಂದ್ರನೊಂದಿಗೆ ಉದ್ಭವಿಸುವ ಎಲ್ಲಾ ಸಮಸ್ಯೆಗಳನ್ನು ನಿರಾಕರಿಸುತ್ತದೆ ಎಂದು ಹೇಳಲಾಗುತ್ತದೆ, ಮತ್ತು ತಿಂಗಳುಗಳು ಬದಲಾಗುತ್ತಿರುವ ಋತುಗಳಿಗೆ ಹೊಂದಿಕೊಳ್ಳಲು ಜನರಿಗೆ ಸಹಾಯ ಮಾಡುತ್ತದೆ. ಮುಂದಿನ ಋತುವನ್ನು ಎದುರಿಸಲು ಜನರು ಶಕ್ತಿ ಮತ್ತು ಶಕ್ತಿಯನ್ನು ಕಂಡುಕೊಳ್ಳುತ್ತಾರೆ. ಮಾಘಿ ಪೂರ್ಣಿಮಾವು ತುಂಬಾ ಮುಖ್ಯವಾದುದಕ್ಕೆ ಇನ್ನೊಂದು ಕಾರಣ - ಬೌದ್ಧ ಧರ್ಮದ ಅನುಯಾಯಿಗಳು ಈ ದಿನದಂದು ತನ್ನ ಸನ್ನಿಹಿತ ಮರಣವನ್ನು ಘೋಷಿಸಿದರು ಎಂದು ನಂಬುತ್ತಾರೆ.

# ಕೊರೊನಾ ಲಸಿಕೆ ಪಡೆದವರಲ್ಲಿ ಈ ರೋಗಗಳ ಅಪಾಯ ಹೆಚ್ಚು

ನ್ಯೂಯಾರ್ಕ್ಕೋವಿಡ್ -19 ವ್ಯಾಕ್ಸಿನೇಷನ್ ನಂತರ ವಿವಿಧ ದೇಶಗಳಲ್ಲಿ (ಭಾರತವನ್ನು ಹೊರತುಪಡಿಸಿ) ಲಸಿಕೆ ಪಡೆದ ಜನರಲ್ಲಿ ಹೃದಯ ಸಮಸ್ಯೆಗಳು ಮತ್ತು ಮೆದುಳಿನ ರಕ್ತನಾಳಗಳಲ್ಲಿ ರಕ್ತ ಹೆಪ್ಪುಗಟ್ಟುವಿಕೆಯಂತಹ 13 ಆರೋಗ್ಯ ಸಮಸ್ಯೆ?ಗಳು ಕಂಡುಬಂದಿವೆ ಎಂದು ಹೊಸ ಅಧ್ಯಯನವೊಂದು ತಿಳಿಸಿದೆ.



ವಿಶ್ವ ಆರೋಗ್ಯ ಸಂಸ್ಥೆ ಮತ್ತು ಯುರೋಪಿಯನ್ ಮೆಡಿಸಿನ್ಸ್ ಏಜೆನ್ಸಿ ಕೋವಿಡ್ -19 ಲಸಿಕೆ ಅಡ್ಡಪರಿಣಾಮಗಳ ಬಗ್ಗೆ ಪ್ರಮುಖ ಡೇಟಾವನ್ನು ಸಂಗ್ರಹಿಸಿದೆ. ಜಾಗತಿಕ ಕೋವಿಡ್ ಸುರಕ್ಷತಾ ಯೋಜನೆ. ಈ ಹೆಸರು ಕೋವಿಡ್ ಲಸಿಕೆಗಳ ಕಾರ್ಯಕ್ಷಮತೆಯನ್ನು ನಿರ್ಣಯಿಸಿತು. ಈ ವರದಿಯು ಭಾರತವನ್ನು ಹೊರತುಪಡಿಸಿ ವಿವಿಧ ದೇಶಗಳ 9.9 ಕೋಟಿ ರೋಗಿಗಳಿಂದ ಡೇಟಾವನ್ನು ಸಂಗ್ರಹಿಸಿದೆ.

**ಈ ರೋಗಗಳ ಅಪಾಯ ಹೆಚ್ಚು:** ಗುಲ್ಲೆನ್ ಬಾರ್ ಸಿಂಡ್ರೋಮ್, ಮಯೋಕಾರ್ಡಿಟಿಸ್, ಪೆರಿಕಾರ್ಡಿಟಿಸ್ ಮತ್ತು ಸೆರೆಬ್ರಲ್ ವೆನಸ್ ಸೈನಸ್ ಥ್ರಾಂಬೋಸಿಸ್ (ಸಿವಿಎಸ್ಟಿ) ಪ್ರಕರಣಗಳು ಕನಿಷ್ಠ 1.5 ಪಟ್ಟು ಹೆಚ್ಚಾಗಿದೆ ಎಂದು ಅದು ಕಂಡುಹಿಡಿದಿದೆ. ಗುಲ್ಲೆನ್-ಬಾರ್ ಸಿಂಡ್ರೋಮ್ ಒಂದು ಅಸ್ವಸ್ಥತೆಯಾಗಿದ್ದು, ಇದರಲ್ಲಿ ಪ್ರತಿರಕ್ಷಣಾ ವ್ಯವಸ್ಥೆಯು ನಮ್ಮ ನರಗಳ ಮೇಲೆ ದಾಳಿ ಮಾಡುತ್ತದೆ. ಇದು ವಿರಳವಾಗಿ ಮಾರಣಾಂತಿಕವಾಗಿದ್ದರೂ, ಇದು ಸ್ನಾಯುಗಳನ್ನು ಹಾನಿಗೊಳಿಸುತ್ತದೆ ಮತ್ತು ದೀರ್ಘಕಾಲೀನ ಚಿಕಿತ್ಸೆಗೆ ಕಾರಣವಾಗಬಹುದು. ಸಿವಿಎಸ್ಟಿ ಸಂಭವಿಸಿದಾಗ, ನಿಮ್ಮ ಮೆದುಳಿನಲ್ಲಿ ರಕ್ತ ಹೆಪ್ಪುಗಟ್ಟುವಿಕೆ ಸಂಗ್ರಹವಾಗುತ್ತದೆ. ಮಯೋಕಾರ್ಡಿಟಿಸ್ ಮತ್ತು ಪೆರಿಕಾರ್ಡಿಟಿಸ್ ಹೃದಯ ಅಂಗಾಂಶದ ಉರಿಯೂತವಾಗಿದೆ. ಇವೆಲ್ಲವೂ ಗಂಭೀರ ವೈದ್ಯಕೀಯ ಪರಿಸ್ಥಿತಿಗಳಾಗಿವೆ, ಅವು ಕೆಲವೊಮ್ಮೆ ಮಾರಣಾಂತಿಕವೆಂದು ಸಾಬೀತುಪಡಿಸಬಹುದು.ಅರ್ಜೆಂಟೀನಾ, ಆಸ್ಟ್ರೇಲಿಯಾ, ಕೆನಡಾ, ಡೆನ್ಮಾರ್ಕ್, ಫಿನ್ಲ್ಯಾಂಡ್, ಫ್ರಾನ್ಸ್, ನ್ಯೂಜಿಲೆಂಡ್ ಮತ್ತು ಸ್ಕಾಟ್ಲೆಂಡ್ ಸೇರಿದಂತೆ ಎಂಟು ದೇಶಗಳ 99,068,901 ಜನಸಂಖ್ಯೆಯನ್ನು ಹೊಂದಿರುವ ಗ್ಲೋಬಲ್ ಕೋವಿಡ್ ಲಸಿಕೆ ಸುರಕ್ಷತಾ ಯೋಜನೆ ಈ ಅಧ್ಯಯನವನ್ನು ನಡೆಸಿತು. ವರದಿಯು ನಿರ್ದಿಷ್ಟವಾಗಿ ಫೈಜರ್, ಮಾಡರ್ನಾ ಮತ್ತು ಅಸ್ಟ್ರಾಜೆನೆಕಾ ಲಸಿಕೆಗಳನ್ನು ಒಳಗೊಂಡಿದೆ.



## ಅಮೆರಿಕದಲ್ಲಿ ನೊರೊವೈರಸ್ ಸೋಂಕು ಉಲ್ಬಣ

**ವಾಷಿಂಗ್ಟನ್:** ಸಾಮಾನ್ಯವಾಗಿ ನೊರೊವೈರಸ್ ಎಂದು ಕರೆಯಲಾಗುವ ಹೊಟ್ಟೆಯ ಸೋಂಕು ಪ್ರಸ್ತುತ ಅಮೆರಿಕದ ಈಶಾನ್ಯ ಪ್ರದೇಶದಾದ್ಯಂತ ವೇಗವಾಗಿ ಹರಡುತ್ತಿದೆ ಎಂದು ಅಮೆರಿಕದ ರಾಷ್ಟ್ರೀಯ ಸಾರ್ವಜನಿಕ ಆರೋಗ್ಯ ಏಜೆನ್ಸಿ ಸಿಡಿಸಿ ಅಂಕಿ ಅಂಶ ಸಹಿತ ವರದಿ ಮಾಡಿದೆ. ನೊರೊವೈರಸ್ ಬಹಳ ಸಾಂಕ್ರಾಮಿಕ ವೈರಸ್ ಆಗಿದ್ದು ಅತಿಸಾರ, ವಾಂತಿ, ತಲೆನೋವು ಮುಂತಾದ ಅಸ್ವಸ್ಥತೆಗೆ ಕಾರಣವಾಗುತ್ತದೆ. ಸಿಡಿಸಿ ವರದಿಯ ಪ್ರಕಾರ, ಈಶಾನ್ಯ ಪ್ರದೇಶದಲ್ಲಿನ 3 ವಾರಗಳ ಪರೀಕ್ಷೆಯ ಸರಾಸರಿ ಪಾಸಿಟಿವ್ ಪ್ರಮಾಣ 13.9%ಕ್ಕೆ ತಲುಪಿದೆ ಮತ್ತು 2023ರ ಡಿಸೆಂಬರ್ ಮಧ್ಯಭಾಗದಿಂದ ಪಾಸಿಟಿವ್ ಪ್ರಮಾಣ 10%ಕ್ಕೂ ಹೆಚ್ಚಿನ ಪ್ರಮಾಣದಲ್ಲಿಯೇ ಉಳಿದಿದೆ. ಅಮೆರಿಕದಲ್ಲಿ ವಾಂತಿ, ಅತಿಸಾರ ಮತ್ತು ಆಹಾರದಿಂದ ಹರಡುವ ಅನಾರೋಗ್ಯದ ಪ್ರಾಥಮಿಕ ಕಾರಣ ನೊರೊವೈರಸ್ ಎಂದು ಗುರುತಿಸಲಾಗಿದೆ. ಈ ಅನಾರೋಗ್ಯ ಎಲ್ಲಾ ವಯಸ್ಸಿನ ವ್ಯಕ್ತಿಗಳ ಮೇಲೆ ಪರಿಣಾಮ ಬೀರಬಹುದು ಮತ್ತು ಇದು ಬಹಳ ಸುಲಭವಾಗಿ ಮತ್ತು ತ್ವರಿತವಾಗಿ ಹರಡುತ್ತದೆ. ನೊರೊವೈರಸ್ ಹರಡುವುದನ್ನು ತಡೆಯಲು ಸಾಬೂನು ಮತ್ತು ನೀರಿನಿಂದ ಕೈತೊಳೆಯಬೇಕು, ಬ್ಲೀಚಿಂಗ್ ಪೌಡರ್ ಬಳಸಬೇಕು ಮತ್ತು ಬಿಸಿನೀರಿನಿಂದ ಬಟ್ಟೆಗಳನ್ನು ಒಗೆಯಬೇಕು ಎಂದು ಸಿಡಿಸಿ ವರದಿಯಲ್ಲಿ ಉಲ್ಲೇಖಿಸಲಾಗಿದೆ.





## ಸಂತ ರವಿದಾಸ್ ಪ್ರತಿಮೆ ಅನಾವರಣಗೊಳಿಸಿದ ಮೋದಿ

**ವಾರಣಾಸಿ:** ಪ್ರಧಾನಿ ಮೋದಿ ಅವರು ಇಂದು (ಫೆ.23) ವಾರಣಾಸಿಯಲ್ಲಿ ಸಂತ ರವಿದಾಸ್ ಪ್ರತಿಮೆಯನ್ನು ಅನಾವರಣಗೊಳಿಸಿದ್ದು, ಸಂತ ಗುರು ರವಿದಾಸ್ ಜನ್ಮಸ್ಥಳಕ್ಕೂ ಭೇಟಿ ನೀಡಿದರು. ಮೋದಿ ಜತೆ ಉತ್ತರ ಪ್ರದೇಶ ಸಿಎಂ ಯೋಗಿ ಆದಿತ್ಯನಾಥ್ ಕೂಡ ಜೊತೆಗಿದ್ದರು.

ಪ್ರತಿಮೆ ಅನಾವರಣಗೊಳಿಸಿದ ನಂತರ ಮೋದಿ ಮತ್ತು ಯುಪಿ ಸಿಎಂ ಸಂತ ಗುರು ರವಿದಾಸ್ ಅವರಿಗೆ ಪುಷ್ಪ ನಮನ ಸಲ್ಲಿಸಿದರು.

ಸಂತ ಗುರು ರವಿದಾಸ್ ಅವರ 647ನೇ ಜನ್ಮದಿನದ ಅಂಗವಾಗಿ ನಡೆದ ಕಾರ್ಯಕ್ರಮದಲ್ಲಿ ಮಾತನಾಡಿದ ಮೋದಿ, ರವಿದಾಸ್ ಜಿ ನನ್ನನ್ನು ಮತ್ತೆ ಮತ್ತೆ ಅವರ ಜನ್ಮಭೂಮಿಗೆ ಕರೆಯುತ್ತಾರೆ. ಅವರ ಸಂಕಲ್ಪಗಳನ್ನು ಮುಂದಕ್ಕೆ ತೆಗೆದುಕೊಂಡು ಹೋಗುವ ಅವಕಾಶ ಮತ್ತು ಅವರ ಲಕ್ಷಾಂತರ ಅನುಯಾಯಿಗಳ ಸೇವೆ ಮಾಡುವ ಅವಕಾಶವನ್ನು ನಾನು ಸ್ವೀಕರಿಸುತ್ತೇನೆ. ಗುರುಗಳ ಜನ್ಮತೀರ್ಥದಲ್ಲಿ, ಅವರ ಎಲ್ಲಾ ಅನುಯಾಯಿಗಳಿಗೆ ಸೇವೆ ಸಲ್ಲಿಸುತ್ತಿದ್ದೇನೆ. ನನ್ನ ಪಾಲಿಗೆ ಭಾಗ್ಯವಿದು. ವಾರಣಾಸಿಯ ಸಂಸದನಾಗಿ, ವಾರಣಾಸಿಯ ಸಾರ್ವಜನಿಕ ಪ್ರತಿನಿಧಿಯಾಗಿ, ನಿಮ್ಮೆಲ್ಲರನ್ನು ವಾರಣಾಸಿಗೆ ಸ್ವಾಗತಿಸುವುದು ಮತ್ತು ನಿಮ್ಮ ಸೌಲಭ್ಯಗಳ ಬಗ್ಗೆ ವಿಶೇಷ ಕಾಳಜಿ ವಹಿಸುವುದು ನನ್ನ ವಿಶೇಷ ಜವಾಬ್ದಾರಿ. ಇದು ನನ್ನ ಕರ್ತವ್ಯ, ಈ ಪವಿತ್ರ ದಿನದಂದು ನನ್ನ ಕರ್ತವ್ಯವನ್ನು ಪೂರೈಸುವ ಅವಕಾಶ ಸಿಕ್ಕಿರುವುದಕ್ಕೆ ಸಂತೋಷವಾಗಿದೆ ಎಂದರು.



## ಮಾರ್ಚ್ ನಂತರ ಲೋಕಸಭಾ ಚುನಾವಣೆಗೆ ವೇಳಾಪಟ್ಟಿ ಪ್ರಕಟ ಸಾಧ್ಯತೆ

**ನವದೆಹಲಿ:** ಮಾರ್ಚ್ 13 ರ ನಂತರ ಲೋಕಸಭಾ ಚುನಾವಣೆಯ ದಿನಾಂಕಗಳನ್ನು ಚುನಾವಣಾ ಆಯೋಗ ಬಿಡುಗಡೆ ಮಾಡುವ ಸಾಧ್ಯತೆಯಿದೆ ಎಂದು ಇಂಡಿಯಾ ಟುಡೇ ವರದಿ ಮಾಡಿದೆ.

ಚುನಾವಣಾ ಸನ್ನದ್ಧತೆಯನ್ನು ಪರಿಶೀಲಿಸಲು ಕೇಂದ್ರ ಚುನಾವಣಾ ಸಮಿತಿಯ ಅಧಿಕಾರಿಗಳು ಪ್ರಸ್ತುತ ವಿವಿಧ ರಾಜ್ಯಗಳಿಗೆ ಭೇಟಿ ನೀಡುತ್ತಿದ್ದಾರೆ ಎಂಬುದನ್ನು ಗಮನಿಸಬೇಕು. ಪ್ರಸ್ತುತ, ಅವರು ತಮಿಳುನಾಡಿನಲ್ಲಿದ್ದಾರೆ. ನಂತರ ಅವರು ಉತ್ತರ ಪ್ರದೇಶ ಮತ್ತು ಜಮ್ಮು ಮತ್ತು ಕಾಶ್ಮೀರಕ್ಕೆ ಭೇಟಿ ನೀಡಲಿದ್ದಾರೆ. ಈ ಭೇಟಿಗಳನ್ನು ಮಾರ್ಚ್ 13 ರೊಳಗೆ ಪೂರ್ಣಗೊಳಿಸಲು ನಿರ್ಧರಿಸಲಾಗಿದೆ ಎಂದು ವರದಿ ತಿಳಿಸಿದೆ. ಆದ್ದರಿಂದ ಲೋಕಸಭಾ ಚುನಾವಣೆಗೆ,



ಮತದಾನದ ವೇಳಾಪಟ್ಟಿಯನ್ನು ಈ ದಿನಾಂಕದಂದು ಅಥವಾ ನಂತರ ಘೋಷಿಸುವ ಸಾಧ್ಯತೆಯಿದೆ.

ಹಿಂದಿನ 2019 ರ ಲೋಕಸಭಾ ಚುನಾವಣೆಗೆ, ಚುನಾವಣಾ ಆಯೋಗವು ಅದೇ ವರ್ಷದ ಮಾರ್ಚ್ 10 ರಂದು ದಿನಾಂಕಗಳನ್ನು ಘೋಷಿಸಿತು. 543 ಸ್ಥಾನಗಳ ಲೋಕಸಭೆಗೆ ಪ್ರತಿನಿಧಿಗಳನ್ನು ಆಯ್ಕೆ ಮಾಡಲು ಏಪ್ರಿಲ್ 11 ರಿಂದ ಮೇ 19 ರವರೆಗೆ ಏಳು ಹಂತಗಳಲ್ಲಿ ಮತದಾನ ನಡೆಯಿತು. ಮೇ 23 ರಂದು ಮತ ಎಣಿಕೆ ಮತ್ತು ಫಲಿತಾಂಶ ಘೋಷಣೆ ನಡೆಯಿತು.

ಹೆಚ್ಚುವರಿಯಾಗಿ 2019 ರಲ್ಲಿ, ಸುಮಾರು 912 ಮಿಲಿಯನ್ (91.2 ಕೋಟಿ) ಜನರು ಮತ ಚಲಾಯಿಸಲು ಅರ್ಹರಾಗಿದ್ದರು. ಅವರಲ್ಲಿ 67%ಕ್ಕಿಂತ ಹೆಚ್ಚು ಜನರು ತಮ್ಮ ಮತದಾನದ ಹಕ್ಕನ್ನು ಚಲಾಯಿಸಿದ್ದಾರೆ. ಈ ವರ್ಷ ಸುಮಾರು 970 ಮಿಲಿಯನ್ (97 ಕೋಟಿ) ಜನರು ಮತದಾನಕ್ಕೆ ಅರ್ಹರಾಗಿದ್ದಾರೆ ಎಂದು ಚುನಾವಣಾ ಆಯೋಗದ ಅಂಕಿ ಅಂಶಗಳು ತಿಳಿಸಿವೆ.

## ಭಾರತೀಯರ ರಕ್ಷಣೆಗಾಗಿ ರಷ್ಯಾ ಜೊತೆ ಮಾತುಕತೆ

**ನವದೆಹಲಿ:** ರಷ್ಯಾ ಮತ್ತು ಉಕ್ರೈನ್ ನಡುವೆ ನಡೆಯುತ್ತಿರುವ ಯುದ್ಧದಲ್ಲಿ ಕೆಲವು ಭಾರತೀಯರು ಸಿಕ್ಕಿಹಾಕಿಕೊಂಡಿರುವ ಕುರಿತು ಮಾಧ್ಯಮಗಳಲ್ಲಿ ವರದಿ ಬಂದ ತಕ್ಷಣವೇ ಎಚ್ಚೆತ್ತ ಕೇಂದ್ರ ಸರ್ಕಾರ ಈ ಬಗ್ಗೆ ಪ್ರತಿಕ್ರಿಯೆ ನೀಡಿದ್ದು, ರಷ್ಯಾದಲ್ಲಿ ಸಿಲುಕಿರುವ ಭಾರತೀಯರ ಬಿಡುಗಡೆಗಾಗಿ ರಷ್ಯಾದ ಅಧಿಕಾರಿಗಳ ಜತೆ ಮಾತುಕತೆ ನಡೆಯುತ್ತಿರುವುದಾಗಿ ಹೇಳಿದೆ. ಹಲವಾರು ಮಂದಿ ಭಾರತೀಯರನ್ನು ರಷ್ಯಾ ಸೇನೆ ಉಕ್ರೈನ್ ವಿರುದ್ಧದ ಯುದ್ಧದಲ್ಲಿ ಬಳಸಿಕೊಂಡಿರುವುದಾಗಿ ಸುದ್ದಿ ಪ್ರಸಾರವಾಗಿತ್ತು. ಕೆಲವು ಭಾರತೀಯರು ಏಜೆಂಟರ ಮೂಲಕ ಉದ್ಯೋಗ ನಿಮಿತ್ತ ರಷ್ಯಾಕ್ಕೆ ತೆರಳಿದ್ದು, ಅವರನ್ನು ಉಕ್ರೈನ್ ವಿರುದ್ಧದ ಯುದ್ಧದಲ್ಲಿ ಬಳಸಿಕೊಳ್ಳಲಾಗಿದೆ ಎಂದು ವರದಿಯಾಗಿತ್ತು. ಕೆಲವು ಭಾರತೀಯ ಪ್ರಜೆಗಳು ರಷ್ಯಾ ಸೇನೆಯಲ್ಲಿ ಸೇರುವುದಾಗಿ ಒಪ್ಪಂದ ಮಾಡಿಕೊಂಡಿರುವ ಬಗ್ಗೆ ನಮಗೆ ತಿಳಿದಿರುವುದಾಗಿ ಕೇಂದ್ರ ಸರ್ಕಾರ ಹೇಳಿದ್ದು, ಈ ನಿಟ್ಟಿನಲ್ಲಿ ಭಾರತೀಯ ರಾಯಭಾರ ಕಚೇರಿ ರಷ್ಯಾದ ಅಧಿಕಾರಿಗಳ ಜತೆ ನಿರಂತರವಾಗಿ ಸಂಪರ್ಕದಲ್ಲಿದೆ. ಅಲ್ಲದೇ ರಷ್ಯಾ ಮತ್ತು ಉಕ್ರೈನ್ ನಡುವೆ ಸಂಘರ್ಷದಿಂದ ಎಲ್ಲಾ ಭಾರತೀಯರು ದೂರ ಉಳಿಯಬೇಕೆಂದು ವಿದೇಶಾಂಗ ಸಚಿವಾಲಯದ ವಕ್ತಾರ ರಣಧೀರ್ ಜೈಸ್ವಾಲ್ ಪ್ರಕಟನೆಯಲ್ಲಿ ತಿಳಿಸಿದ್ದಾರೆ.

## ತಲೆಗೆ 15 ಬಾರಿ ಗುಂಡಿಟ್ಟು ಮರಣದಂಡನೆ

**ಕಾಬೂಲ್:** ಹತ್ಯೆ ಪ್ರಕರಣದಲ್ಲಿ ದೋಷಿ ಎಂದು ಸಾಬೀತಾದ ಇಬ್ಬರನ್ನು ಸಾರ್ಜಜನಿಕವಾಗಿ ಕ್ರೀಡಾಂಗಣದಲ್ಲಿ ತಲೆಗೆ 15 ಬಾರಿ ಗುಂಡಿಟ್ಟು ಮರಣದಂಡನೆ ಶಿಕ್ಷೆ ನೀಡಿದ ಘಟನೆ ಅಫ್ಘಾನಿಸ್ತಾನದಲ್ಲಿ ನಡೆದಿದೆ.ಸಯ್ಯದ್ ಜಮಾಲ್ ಮತ್ತು ಗುಲ್ ಖಾನ್ ಶಿಕ್ಷೆಗೆ ಗುರಿಯಾದವರು. ಸೆಪ್ಟೆಂಬರ್ 2017 ಮತ್ತು ಜನವರಿ 202ರಲ್ಲಿ ನಡೆದ 2 ಪ್ರತ್ಯೇಕ ಕೊಲೆ ಪ್ರಕರಣದಲ್ಲಿ ಇವರಿಬ್ಬರನ್ನು ದೋಷಿ ಎಂದು ತಾಲಿಬಾನ್ ಸುಪ್ರೀಂಕೋರ್ಟ್ ಆದೇಶ ನೀಡಿತ್ತು. ಈ ಹಿನ್ನೆಲೆಯಲ್ಲಿ ತಾಲಿಬಾನ್ ನಾಯಕ ಹೈಬತುಲ್ಲಾ ಅಖುಂದ್ ಜಾದಾ ಇಬ್ಬರಿಗೆ ಮರಣದಂಡನೆ ಶಿಕ್ಷೆ ವಿಧಿಸುವಂತೆ ಆದೇಶ ನೀಡಿದ್ದರು. ಇಬ್ಬರು ಅಪರಾಧಿಗಳನ್ನು ಗುರುವಾರ ಮಧ್ಯಾಹ್ನ 12 ಗಂಟೆಗೆ ಘಜ್ನಿ ನಗರದ ಅಲಿ ಲಲಾ ಪ್ರದೇಶದಲ್ಲಿರುವ ಫುಟ್ಬಾಲ್ ಕ್ರೀಡಾಂಗಣಕ್ಕೆ ಕರೆ ತರಲಾಯಿತು. ಈ ವೇಳೆ ಕ್ರೀಡಾಂಗಣದ ಸುತ್ತ ಸಾವಿರಾರು ಮಂದಿ ಜಮಾಯಿಸಿದ್ದರು. ಒಬ್ಬನ ತಲೆಗೆ 8, ಮತ್ತೊಬ್ಬನ ತಲೆಗೆ 7 ಗುಂಡುಗಳನ್ನು ಹಾರಿಸಿ ಹತ್ಯೆ ಮಾಡಲಾಯಿತು. ಮರಣದಂಡನೆ ಶಿಕ್ಷೆ ನೀಡುವುದಕ್ಕೂ ಮುನ್ನ ಅಪರಾಧಿಗಳ ಕುಟುಂಬಸ್ಥರು ಬಂದು ವಿನಾಯಿತ್ತಿ ನೀಡುವಂತೆ ಮನವಿ ಮಾಡಿಕೊಂಡರು. ಆದರೆ ಇದಕ್ಕೆ ಕ್ಯಾರೇ ಎನ್ನದೇ ಗುಂಡು ಹಾರಿಸಿ ಕೊಲ್ಲಲಾಯಿತು.

## ನಕಲಿ ಕರೆ ನಿಗ್ರಹಕ್ಕೆ ಸರ್ಕಾರದಿಂದಲೇ ಟ್ರೂ ಕಾಲರ್ ಆರಂಭ

ನವದೆಹಲಿ : ನಕಲಿ ಕರೆಗಳ ನಿಗ್ರಹಕ್ಕೆ ಕೇಂದ್ರ ಸರ್ಕಾರ ಸಿದ್ಧತೆ ನಡೆಸಿದ್ದು, ಶೀಘ್ರವೇ ಟ್ರಾಯ್ ಸರ್ಕಾರಿ ಟ್ರೂ ಕಾಲರ್ ನಂತಹ ಸೌಲಭ್ಯಕ್ಕಾಗಿ ಕರಡು ಕರಡನ್ನು ಬಿಡುಗಡೆ ಮಾಡಿದೆ. ಶೀಘ್ರದಲ್ಲೇ ಕರೆ ಮಾಡಿದವರ ನಿಜವಾದ ಹೆಸರು ನಿಮ್ಮ ಮೊಬೈಲ್ ನಲ್ಲಿರುವ ಸಂಖ್ಯೆಯೊಂದಿಗೆ ಬರುತ್ತದೆ. ಈ ರೀತಿಯಾಗಿ, ನಕಲಿ ಕರೆಗಳನ್ನು ನಿಗ್ರಹಿಸಲಾಗುತ್ತದೆ ಮತ್ತು ನಿಜವಾದ ಕರೆ ಮಾಡಿದವರನ್ನು ಗುರುತಿಸಲಾಗುತ್ತದೆ. ಈ ನಿಟ್ಟಿನಲ್ಲಿ, ಟ್ರಾಯ್ 29.11.2022 ರಂದು 'ಟೆಲಿಕಾಂ ನೆಟ್ವರ್ಕ್‌ಗಳಲ್ಲಿ ಕರೆ ಮಾಡುವ ಹೆಸರು ಪ್ರಸ್ತುತಿ (ಸಿಎನ್ಎಪಿ) ಪರಿಚಯ' ಕುರಿತು ಸಮಾಲೋಚನಾ ಪತ್ರವನ್ನು ಬಿಡುಗಡೆ ಮಾಡಿತ್ತು. ಇದು ಎಲ್ಲಾ ಮಧ್ಯಸ್ಥಗಾರರಿಂದ ಪ್ರತಿಕ್ರಿಯೆಗಳನ್ನು ಕೋರಿತು. ಇದಕ್ಕಾಗಿ, ಸಮಾಲೋಚನಾ ಕಾಗದದ ಮೇಲೆ ಮುಕ್ತ ಸದನದ ಚರ್ಚೆಯನ್ನು 09.03.2023 ರಂದು ವರ್ಚುವಲ್ ಮೋಡ್ ಮೂಲಕ ನಡೆಸಲಾಯಿತು. ಮಧ್ಯಸ್ಥಗಾರರಿಂದ ಪಡೆದ ಪ್ರತಿಕ್ರಿಯೆಗಳು / ಒಳಹರಿವುಗಳು ಮತ್ತು ತನ್ನದೇ ಆದ ವಿಶ್ಲೇಷಣೆಯ ಆಧಾರದ ಮೇಲೆ, ಟ್ರಾಯ್ 'ಭಾರತೀಯಟೆಲಿಕಾಂ ನೆಟ್ವರ್ಕ್‌ಗಳಲ್ಲಿ ಕರೆ ಹೆಸರು ಪ್ರಸ್ತುತಿ (ಸಿಎನ್ಎಪಿ) ಸೇವೆಯನ್ನು ಪರಿಚಯಿಸುವುದು' ಕುರಿತು ತನ್ನ ಶಿಫಾರಸುಗಳನ್ನು ಅಂತಿಮಗೊಳಿಸಿದೆ.




## ಫಲಿತಾಂಶ ಪ್ರಶ್ನಿಸಿ ಸುಪ್ರೀಂ ಕೋರ್ಟ್‌ಗೆ ಇಮ್ರಾನ್ ಖಾನ್ ಅರ್ಜಿ



**ಇಸ್ಲಮಾಬಾದ್:** ಪಾಕಿಸ್ತಾನದಲ್ಲಿ ಫೆಬ್ರವರಿ 8ರಂದು ನಡೆದ ಸಾರ್ವತ್ರಿಕ ಚುನಾವಣೆಯ ಫಲಿತಾಂಶವನ್ನು ಪ್ರಶ್ನಿಸಿ ಮಾಜಿ ಪ್ರಧಾನಿ ಇಮ್ರಾನ್ಖಾನ್ ಅವರ ಪಿಟಿಐ ಸುಪ್ರೀಂಕೋರ್ಟ್‌ಗೆ ಮೇಲ್ಮನವಿ ಸಲ್ಲಿಸಿದೆ.ಮತದಾನದಲ್ಲಿ ಅಕ್ರಮ ನಡೆದಿದೆ. ಆ ಬಳಿಕ ಚುನಾವಣೆಯ ಮತಗಳ ಎಣಿಕೆಯ ಸಂದರ್ಭ ವ್ಯಾಪಕ ಅಕ್ರಮ ನಡೆದಿದ್ದು ಮತ ಎಣಿಕೆ ಪ್ರಕ್ರಿಯೆ 'ಎಲ್ಲಾ ಅಕ್ರಮಗಳ ತಾಯಿ'ಯಾಗಿದೆ.ಹಲವು ಕ್ಷೇತ್ರಗಳ ಫಲಿತಾಂಶವನ್ನು ತಿರುಚಲಾಗಿದೆ. ಸೋತ ಅಭ್ಯರ್ಥಿಗಳು ಗೆದ್ದಿದ್ದಾರೆಂದು ಘೋಷಿಸುವಂತೆ ಅಧಿಕಾರಿಗಳ ಮೇಲೆ ಒತ್ತಡ ಹೇರಲಾಗಿದೆ ಎಂದು ಪಾಕಿಸ್ತಾನ್ ತೆಹ್ರೀಕೆ ಇನ್ಸಾಫ್ (ಪಿಟಿಐ) ಪಕ್ಷ ಆರೋಪಿಸಿದೆ. ಈ ಎಲ್ಲಾ ಅಕ್ರಮಗಳಿಂದ ಪಿಟಿಐ ಪಕ್ಷ ಬೆಂಬಲಿಸಿದ ಅಭ್ಯರ್ಥಿಗಳ ಜನಾದೇಶವನ್ನು ಕದಿಯಲಾಗಿದೆ ಎಂದು ಸುಪ್ರೀಂಕೋರ್ಟ್‌ಗೆ ಸಲ್ಲಿಸಿದ ಅರ್ಜಿಯಲ್ಲಿ ಪ್ರತಿಪಾದಿಸಲಾಗಿದೆ. ರಾಷ್ಟ್ರೀಯ ಅಸೆಂಬ್ಲಿಗೆ ನಡೆದಿದ್ದ ಚುನಾವಣೆಯಲ್ಲಿ ಪಿಟಿಐ ಬೆಂಬಲದಿಂದ ಸ್ಪರ್ಧಿಸಿದ್ದ ಪಕ್ಷೇತರ ಅಭ್ಯರ್ಥಿಗಳು 180 ಸ್ಥಾನಗಳಲ್ಲಿ ಗೆದ್ದಿದ್ದಾರೆ. ಆದರೆ ಮತ ಎಣಿಕೆಯ ಅಕ್ರಮದಿಂದಾಗಿ ಪಕ್ಷಕ್ಕೆ ದಕ್ಕಿದ ಸ್ಥಾನಗಳನ್ನು 92ಕ್ಕೆ ಇಳಿಸಲಾಗಿದ್ದು ಅಧಿಕಾರಕ್ಕೆ ಮರಳುವ ಅವಕಾಶವನ್ನು ಕಿತ್ತುಕೊಳ್ಳಲಾಗಿದೆ ಎಂದು ಪಿಟಿಐ ಪ್ರತಿಪಾದಿಸಿದೆ. ಚುನಾವಣೆಯ ಅಕ್ರಮವನ್ನು ಪ್ರಶ್ನಿಸಿ ಪಿಟಿಐ ಹಿರಿಯ ಮುಖಂಡ ಶೇರ್ ಅಫ್ಜಲ್ ಮರ್ವಾಟ್ ಸುಪ್ರೀಂಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದು ಮುಖ್ಯ ಚುನಾವಣಾ ಆಯುಕ್ತ ಸಿಕಂದರ್ ಸುಲ್ತಾನ್ ರಾಜಾ ಮತ್ತು ಚುನಾವಣಾ ಆಯೋಗದ ಇತರ ಸದಸ್ಯರ ನೇಮಕವನ್ನೂ ಸುಪ್ರೀಂಕೋರ್ಟ್‌ನಲ್ಲಿ ಪ್ರಶ್ನಿಸಲಾಗಿದೆ.

## ಶೀಘ್ರವೇ Xmail ಪ್ರಾರಂಭಿಸುವುದಾಗಿ ಘೋಷಣೆ

**ದೆಹಲಿ:** ಎಕ್ಸ್ (ಹಿಂದೆ ಟ್ವಿಟರ್) ಸಿಇಒ ಎಲೋನ್ ಮಸ್ಕ್ ಅವರು ಎಕ್ಸ್‌ಮೇಲ್ ಅನ್ನು ಶೀಘ್ರದಲ್ಲೇ ಪ್ರಾರಂಭಿಸುವುದನ್ನು ದೃಢಪಡಿಸಿದ್ದಾರೆ, ಇದು ಗೂಗಲ್ನ ಜಿಮೇಲ್ ಸೇವೆಗೆ ಪ್ರತಿಸ್ಪರ್ಧಿಯಾಗುವ ಸಾಮರ್ಥ್ಯದ ಬಗ್ಗೆ ಊಹಾಪೋಹಗಳಿಗೆ ಕಾರಣವಾಗಿದೆ. ಜಿಮೇಲ್ ಸ್ಥಗಿತದ ವದಂತಿಗಳು ಅಂತರ್ಜಾಲದಲ್ಲಿ ಕಾಡ್ಗಿಚ್ಚಿನಂತೆ ಹರಡಿದ ನಂತರ ಮಸ್ಕ್ ಅವರ ಪ್ರಕಟಣೆ ತ್ವರಿತವಾಗಿ ಬಂದಿದೆ.



ಎಕ್ಸ್‌ನ ಸೆಕ್ಯುರಿಟಿ ಎಂಜಿನಿಯರಿಂಗ್ ತಂಡದ ಹಿರಿಯ ಸದಸ್ಯ ನಾಥನ್ ಮೆಕ್ ಗ್ರೇಡಿ ಅವರು ಎಕ್ಸ್‌ಮೇಲ್ ನ ಬಿಡುಗಡೆಯ ದಿನಾಂಕದ ಬಗ್ಗೆ ವಿಚಾರಿಸಿದ ನಂತರ ಈ ದೃಢೀಕರಣ ಹೊರಬಿದ್ದಿದೆ. ಮಸ್ಕ್ ತಕ್ಷಣ ಪ್ರತಿಕ್ರಿಯಿಸಿ, ಸೇವೆಯು ಆರಂಭದ ಬಗ್ಗೆ ಸಿದ್ಧತೆ ನಡೆಯುತ್ತಿದೆ ಎಂದು ದೃಢಪಡಿಸಿದರು, ಇಮೇಲ್ ಸೇವಾ ಭೂದೃಶ್ಯದಲ್ಲಿ ಗಮನಾರ್ಹ ಬದಲಾವಣೆಗೆ ವೇದಿಕೆಯನ್ನು ನಿಗದಿಪಡಿಸಿದರು. ಗೂಗಲ್ ನ ಇಮೇಲ್ ಸೇವೆಯನ್ನು ಸ್ಥಗಿತಗೊಳಿಸುವುದಾಗಿ ಘೋಷಿಸುವ ಎಕ್ಸ್‌ಪ್ರೆಸ್ನಲ್ಲಿ ವೈರಲ್ ಪೋಸ್ಟ್ನಿಂದ ಪ್ರಚೋದಿಸಲ್ಪಟ್ಟ ಜಿಮೇಲ್ನ ಭವಿಷ್ಯದ ಬಗ್ಗೆ ಕಳವಳಗಳು ಹೆಚ್ಚುತ್ತಿದ್ದಂತೆ ಟೆಕ್ ಸಮುದಾಯವು ನಿರೀಕ್ಷೆಯೊಂದಿಗೆ ಸ್ಫೋಟಗೊಂಡಿತು. 'ಗೂಗಲ್ ಸೂರ್ಯಾಸ್ತಮಾನ ಜಿಮೇಲ್' ಎಂಬ ಶೀರ್ಷಿಕೆಯ ಇಮೇಲ್ನ ಸ್ಕ್ರೀನ್ಶಾಟ್ನೊಂದಿಗೆ ಈ ಪೋಸ್ಟ್ ಜಿಮೇಲ್ ಭವಿಷ್ಯದ ಬಗ್ಗೆ ವ್ಯಾಪಕ ಭೀತಿ ಮತ್ತು ಊಹಾಪೋಹಗಳಿಗೆ ಕಾರಣವಾಯಿತು.

## ಮಾಲ್ಡೀವ್ಸ್ ಕಡಲತೀರ ತಲುಪಿದ ಚೀನಾ ಬೇಹುಗಾರಿಕಾ ಹಡಗು

**ಚೀನಾ:** ಚೀನಾದಿಂದ ಶಂಕಿತ ಬೇಹುಗಾರಿಕಾ ಹಡಗು ಮಾಲ್ಡೀವ್ಸ್‌ನ ಮಾಲೆ ತೀರದ ಸಮೀಪಕ್ಕೆ ತಲುಪಿದ್ದು, ಕೆಲವು ದಿನಗಳ ಕಾಲ ಇಲ್ಲೇ ಲಂಗರು ಹಾಕಲಿದೆ. ಇತ್ತ ಇದರ ಬೆನ್ನಲ್ಲೇ ಭಾರತ, ಶ್ರೀಲಂಕಾ ಮತ್ತು ಮಾಲ್ಡೀವ್ಸ್‌ನ ನೌಕಾಪಡೆಗಳು ಜಂಟಿ ಸಮರಾಭ್ಯಾಸ ಆರಂಭಿಸಿವೆ. ಚೀನಾದ ಹಡಗು ಕ್ಸಿಯಾಂಗ್ ಯಾಂಗ್ ಹಾಂಗ್-03 ಗುರುವಾರ ಮಧ್ಯಾಹ್ನ ಮಾಲೆ ಬಂದರಿಗೆ ತಲುಪಿದೆ ಎಂದು ಹಡಗುಗಳ ಮೇಲೆ ನಿಗಾ ಇಡುವ ಎಡಿಟಿಯಾನ್ ವೆಬ್ಸೈಟ್ ವರದಿ ಮಾಡಿದೆ. ಈ ಹಡಗು ಮಾಲ್ಡೀವ್ಸ್‌ನಲ್ಲಿ ಲಂಗರು ಹಾಕುವುದಕ್ಕಾಗಿ ಜ.23ರಂದು ಸರ್ಕಾರ ಅನುಮತಿ ನೀಡಿತ್ತು. ಸಮುದ್ರದ ಬಗ್ಗೆ ಅಧ್ಯಯನ ಮಾಡುವುದಕ್ಕಾಗಿ ಈ ಸಂಶೋಧನಾ ಹಡಗನ್ನು ಕಳುಹಿಸಲಾಗಿದೆ ಎಂದು ಚೀನಾ ಹೇಳಿದ್ದರೂ ಸಹ ಇದೊಂದು ಬೇಹುಗಾರಿಕಾ ಹಡಗು ಆಗಿರಬಹುದು ಎಂಬ ಕಾರಣಕ್ಕೆ ನೆರೆಯ ದೇಶಗಳು ಇದರ ಮೇಲೆ ಕಣ್ಣಿಟ್ಟಿವೆ. ಮಾಲ್ಡೀವ್ಸ್ ಕೋಸ್ಟ್‌ಗಾರ್ಡ್, ಭಾರತ ಮತ್ತು ಶ್ರೀಲಂಕಾದ ನೌಕಾಪಡೆಗಳು 'ದೋಸ್ತಿ-16' ಹೆಸರಿನಲ್ಲಿ ಜಂಟಿ ಸಮರಾಭ್ಯಾಸವನ್ನು ಗುರುವಾರ ಆರಂಭಿಸಿವೆ. ಇದು ಫೆ.25ರವರೆಗೆ ಮುಂದುವರೆಯಲಿದೆ. ಪರಸ್ಪರ ಸೇನಾ ಸಾಮರ್ಥ್ಯವನ್ನು ಹೆಚ್ಚಿಸಿಕೊಳ್ಳಲು ಮತ್ತು ಸೇನಾ ಸಹಭಾಗಿತ್ವವನ್ನು ಉತ್ತಮಪಡಿಸಿಕೊಳ್ಳಲು ಈ ಅಭ್ಯಾಸವನ್ನು ಕೈಗೊಳ್ಳಲಾಗುತ್ತದೆ.



## ರೈತರ ದೆಹಲಿ ಚಲೋ ಪ್ರತಿಭಟನೆ ಫೆ. 29 ಕ್ಕೆ ಮುಂದೂಡಿಕೆ




**ಫೆ.27ರಂದು ರೈತ ಸಂಘಟನೆಗಳ ಸಭೆ**

ಸಂಯುಕ್ತ ಕಿಸಾನ್ ಮೋರ್ಚಾದ ಪರವಾಗಿ ರೈತ ಮುಖಂಡ ಸರ್ಬನ್ ಸಿಂಗ್ ಪಂಧೇರ್, ''ಪೊಲೀಸ್ ಕ್ರೌರ್ಯವು ಹರಿಯಾಣದಲ್ಲಿ ತುರ್ತು ಪರಿಸ್ಥಿತಿಯನ್ನು ಸೃಷ್ಟಿಸಿದೆ.

**ನವದೆಹಲಿ:** ಸಂಯುಕ್ತ ಕಿಸಾನ್ ಮೋರ್ಚಾ ತನ್ನ ದೆಹಲಿ ಚಲೋ ಮಾರ್ಚ್ ಅನ್ನು ಫೆಬ್ರವರಿ 29 ರವರೆಗೆ ಮುಂದೂಡಲು ನಿರ್ಧರಿಸಿದೆ.ಖಾನೌರಿ ಗಡಿಯಲ್ಲಿ ಮಾಧ್ಯಮಗಳೊಂದಿಗೆ ಮಾತನಾಡುವಾಗ ರೈತ ಸಂಘಟನೆಯ ಮುಖಂಡ ಸರ್ಬನ್ ಸಿಂಗ್ ಪಂಧೇರ್ ಈ ವಿಷಯ ತಿಳಿಸಿದರು. 'ಮುಂದಿನ ಕ್ರಮವನ್ನು ಫೆಬ್ರವರಿ 29 ರಂದು ನಿರ್ಧರಿಸಲಾಗುವುದು ಮತ್ತು ನಾವೆಲ್ಲರೂ ದುಃಖಿತರಾಗಿದ್ದೇವೆ, ನಾವು ನಮ್ಮ ಯುವ ರೈತ ಶುಭಕರನ್ ಸಿಂಗ್ ಅವರನ್ನು ಕಳೆದುಕೊಂಡಿದ್ದೇವೆ. ಫೆಬ್ರವರಿ 26 ರಂದು ಡಬ್ಲ್ಯುಟಿಒ (ವಿಶ್ವ ವ್ಯಾಪಾರ ಸಂಸ್ಥೆ) ಸಭೆ ಇದೆ ಮತ್ತು ಫೆಬ್ರವರಿ 25 ರಂದು, ಡಬ್ಲ್ಯುಟಿಒ ರೈತರ ಮೇಲೆ ಹೇಗೆ ಪರಿಣಾಮ ಬೀರುತ್ತಿದೆ ಎಂಬುದರ ಕುರಿತು ಚರ್ಚಿಸಲು ನಾವು ಶಂಭು ಮತ್ತು ಖನೌರಿಯಲ್ಲಿ ಸೆಮಿನಾರ್‌ಗಳನ್ನು ನಡೆಸುತ್ತೇವೆ ಹೇಳಿದರು.

## ಅಮೆಜಾನ್: ದೈತ್ಯ ಅನಕೊಂಡ ಪ್ರತ್ಯಕ್ಷ!

ಈಗ ಇದೇ ಕಾಡಿನಲ್ಲಿ ದೈತ್ಯ ಅನಕೊಂಡ ಕಾಣಿಸಿಕೊಂಡಿದ್ದು, ಇದರ ವಿಡಿಯೋ ಸಾಮಾಜಿಕ ಜಾಲತಾಣದಲ್ಲಿ ಫುಲ್ ವೈರಲ್ ಆಗಿದೆ. ಸಾಮಾನ್ಯವಾಗಿ ಇಂತಹ ಬೃಹತ್ ಅನಕೊಂಡಗಳು ಸಿನಿಮಾಗಳಲ್ಲಿ ಮಾತ್ರ ನೋಡಲು ಸಿಗುತ್ತವೆ. ನಿಜ ಜೀವನದಲ್ಲಿ ಈ ತರದ ಹಾವುಗಳು ಇವೇಯಾ ಎಂಬುದು ಅನೇಕರಿಗೆ ತಿಳಿದಿಲ್ಲ.ಆದರೆ, ಅಮೆಜಾನ್ ಕಾಡಿನಲ್ಲಿ ದೈತ್ಯ ಅನಕೊಂಡ ಕಾಣಿಸಿಕೊಂಡಿದ್ದು, ನೆಟ್ಟಿಗರ ಹುಬ್ಬೇರುವಂತೆ ಮಾಡಿದೆ.

ಅಮೆಜಾನ್ ಅರಣ್ಯದಲ್ಲಿ ಸಾಕ್ಷ್ಯಚಿತ್ರ ಶೂಟ್ ಮಾಡುವ ವೇಳೆ ಈ ಬೃಹತ್ ಅನಕೊಂಡ ಕಾಣಿಸಿಕೊಂಡಿದೆ. ಪ್ರೊಫೆಸರ್ ಫ್ರೀಕ್ ಒಂಕ್ ಈ ದೈತ್ಯ ಅನಕೊಂಡವನ್ನು ತಮ್ಮ ಕ್ಯಾಮಾರದಲ್ಲಿ ಸೆರೆಹಿಡಿದ್ದಾರೆ. ಇದರ ಉದ್ದ ಬರೋಬ್ಬರಿ 26 ಅಡಿ ಇದ್ದು,200 ಕೆಜಿ ತೂಕವಿದೆ. ಇಲ್ಲಿಯವರೆಗೆ ಹಾವು ಮತ್ತು ಅನಕೊಂಡಗಳಿಗೆ ಸಂಬಂಧಿಸಿದ ಸಾವಿರಾರು ಚಲನಚಿತ್ರಗಳು ಬಂದಿವೆ. ಸಾಮಾನ್ಯವಾಗಿ ಇಂತಹ ಸಿನಿಮಾಗಳಲ್ಲಿ ಅನಕೊಂಡ ಸಾಮಾನ್ಯ ಹಾವುಗಳಿಗಿಂತ ಎತ್ತರವಾಗಿರುವುದನ್ನು ನೋಡಿದ್ದೇವೆ. ಆದರೆ ಈಗ ಕ್ಯಾಮಾರದಲ್ಲಿ ಸೆರೆಯಾಗಿರುವ ಹಾವು ಎಲ್ಲರ ಕುತೂಹಲ ಹೆಚ್ಚಿಸಿದೆ ಎನ್ನಬಹುದು.







ಸಂಜೆ ಮುಗಿಲು
Postal Registration No.KA/BGW-1823/2019-2021, Posted at Patrika Channel, RMS Bhavan, Bengaluru PSO, Mysore Road, Bengaluru- 560020, RNI No.KARKAN/2002/08054

# ಸ್ಟಾರ್ ಕುಟುಂಬಕ್ಕೆ ಸೊಸೆಯಾಗ್ತಾರಂತೆ ಶ್ರೀಲೀಲಾ

ಕನ್ನಡದ ಬ್ಯೂಟಿ ಶ್ರೀಲೀಲಾ ಸದ್ಯ ತೆಲುಗು ಸಿನಿಮಾರಂಗದಲ್ಲಿ ಬ್ಯುಸಿಯಾಗಿದ್ದಾರೆ. ಮಾಡಿರುವ ಸಿನಿಮಾವೆಲ್ಲಾ ಸಕ್ಸಸ್ ಕಾಣದೇ ಇದ್ದರೂ ಶ್ರೀಲೀಲಾಗೆ ಭಾರೀ ಬೇಡಿಕೆ ಇದೆ. ಸದ್ಯ ಶ್ರೀಲೀಲಾ ಮದುವೆ ಬಗ್ಗೆ ಸುದ್ದಿಯೊಂದು ಹರಿದಾಡುತ್ತಿದೆ. ಚಿತ್ರರಂಗದ ದೊಡ್ಡ ಮನೆಗೆ ಸೊಸೆಯಾಗಿ ಹೋಗ್ತಾರಂತೆ ಶ್ರೀಲೀಲಾ. ಹೀಗಂತ ಜ್ಯೋತಿಷಿಯೊಬ್ಬರು ಭವಿಷ್ಯ ನುಡಿದಿದ್ದಾರೆ.

ಇತ್ತೀಚೆಗಷ್ಟೇ ಶ್ರೀಲೀಲಾ ತಾಯಿ ಖ್ಯಾತ ಜ್ಯೋತಿಷಿಯೊಬ್ಬರಿಗೆ ಜಾತಕ ತೋರಿಸಿದ್ದು, ನಿಮ್ಮ ಮಗಳು ಚಿತ್ರರಂಗದ ದೊಡ್ಡ ಮನೆತನದ ಸೊಸೆಯಾಗಲಿದ್ದಾರೆ ಎಂದು ಜ್ಯೋತಿಷಿ ಭವಿಷ್ಯ ಹೇಳಿದ್ದಾರೆ. ಸದ್ಯ ಈ ರೀತಿಯ ಸುದ್ದಿಯೊಂದು ಸಾಮಾಜಿಕ ಜಾಲತಾಣದಲ್ಲಿ ಭಾರೀ ವೈರಲ್ ಆಗುತ್ತಿದೆ.



ಕನ್ನಡದ ಕಿಸ್, ಭರಾಟೆ, ಬೈಟು ಲವ್ ಚಿತ್ರ ನಂತರ ಪೆಳ್ಳಿ ಸಂದಡಿ, 'ಧಮಾಕಾ' ಚಿತ್ರದ ಮೂಲಕ ಟಾಲಿವುಡ್‌ಗೆ ನಟಿ ಪರಿಚಿತರಾದರು. ಬಳಿಕ ತೆಲುಗಿನ ಸ್ಟಾರ್ ನಟರಿಗೆ ಶ್ರೀಲೀಲಾ ನಾಯಕಿಯಾದರು. ಪೂಜಾ ಹೆಗ್ಡೆ, ರಶ್ಮಿಕಾ ಮಂದಣ್ಣ, ಕೃತಿ ಶೆಟ್ಟಿಗೆ ಠಕ್ಕರ್ ಕೊಟ್ಟು ಬಿಗ್ ಚಾನ್ಸ್ ಬಾಚಿಕೊಂಡರು.

ಇತ್ತೀಚೆಗೆ ಮಹೇಶ್ ಬಾಬು ಜೊತೆ 'ಗುಂಟೂರು ಖಾರಂ' ಚಿತ್ರದಲ್ಲಿ ನಟಿಸಿದ್ದರು. ಈ ಸಿನಿಮಾಗೆ ಪ್ರೇಕ್ಷಕರಿಂದ ಭರ್ಜರಿ ರೆಸ್ಪಾನ್ಸ್ ಸಿಕ್ಕಿದೆ. ಅಲ್ಲದೇ ಕೆಲವು ದಿನಗಳ ಹಿಂದೆ ಬಾಲಕೃಷ್ಣ ಅಭಿನಯದ 'ಭಗವಂತ ಕೇಸರಿ' ಚಿತ್ರದಲ್ಲಿ ಶ್ರೀಲೀಲಾ ನಟಿಸಿದ್ದರು.

# ಬಿಕಿನಿ ಲುಕ್‌ನಲ್ಲಿ ಸ್ಯಾಮ್

ಟಾಲಿವುಡ್ ನಟಿ ಸಮಂತಾ ರುತ್ ಪ್ರಭು ಸದ್ಯ ವೆಕೇಷನ್ ಮೂಡ್‌ನಲ್ಲಿದ್ದಾರೆ. ಮಲೇಷ್ಯಾಗೆ ಹಾರಿರೋ ಸಮಂತಾ ಸಖತ್ ಹಾಟ್ ಆಗಿ ಕಾಣಿಸಿಕೊಂಡಿದ್ದಾರೆ. ಸಮಂತಾ ಬಿಕಿನಿ ಲುಕ್‌ನಿಂದ ಇಂಟರ್‌ನೆಟ್‌ಗೆ ಬೆಂಕಿ ಹಚ್ಚಿದ್ದಾರೆ.

**ಪಡ್ಡೆಹುಡುಗರ ಟೆಂಪ್ರೇಚರ್ ಹೆಚ್ಚಿಸಿದ ನಟಿ**

ಮತ್ತೆ ಸಿನಿಮಾ ಮಾಡೋದಾಗಿ ಇತ್ತೀಚೆಗೆ ನಟಿ ಗ್ರೀನ್ ಸಿಗ್ನಲ್ ಕೊಟ್ಟಿದ್ದರು. ಈ ಬೆನ್ನಲ್ಲೇ ಸಮಂತಾ ಮಲೇಷ್ಯಾಗೆ ಹಾರಿದ್ದಾರೆ. ಅಲ್ಲಿ ಸಮಂತಾ ಮೋಜು ಮಸ್ತಿ ಮಾಡ್ತಿದ್ದಾರೆ. ಕಂದು ಬಣ್ಣದ ಬಿಕಿನಿ ಧರಿಸಿ ನದಿಯ ನೀರಿನ ಮಧ್ಯೆ ನಿಂತು ಬೋಲ್ಡ್ ಆಗಿ ನಟಿ ಪೋಸ್ ನೀಡಿದ್ದಾರೆ. ಸಮಂತಾ ಫೋಟೋ ನೋಡಿ ಅಭಿಮಾನಿಯೊಬ್ಬ, ಮೊದಲೇ ಬೇಸಿಗೆ ಬಿಸಿ ಇದೆ. ನೀವ್ಯಾಕೆ ಮತ್ತಷ್ಟು ಟೆಂಪ್ರೇಚರ್ ಏರಿಸುತ್ತೀರಿ ಎಂದು ಕಾಮೆಂಟ್ ಮಾಡಿದ್ದಾರೆ. ನಟಿಯ ಲುಕ್‌ಗೆ ಬಗೆ ಬಗೆಯ ಕಾಮೆಂಟ್‌ಗಳು ಹರಿದು ಬರುತ್ತಿವೆ.

ವಿವಾದ, ಅನಾರೋಗ್ಯ, ಯಶಸ್ಸು ಎಲ್ಲವೂ ಅನುಭವಿಸಿರುವ ಜೀವ ಸಮಂತಾ. ನಾಗಚೈತನ್ಯ ಜೊತೆಗಿನ ದಾಂಪತ್ಯಕ್ಕೆ ಅಂತ್ಯ ಹಾಡಿದ ಮೇಲೆ ಸಮಂತಾ ಸಾಕಷ್ಟು ಟೀಕೆಗಳಿಗೆ ಗುರಿಯಾಗಿದ್ದರು. ಎಲ್ಲಾ ವಿಚಾರಕ್ಕೂ ಸಮಂತಾ ಕಡೆಯೇ ಬೆಟ್ಟು ಮಾಡಿ ತೋರಿಸುತ್ತಿದ್ದರು. ಸಹವಾಸವೇ ಬೇಡ ಅಂತ ವೃತ್ತಿರಂಗದಲ್ಲಿ ಬ್ಯುಸಿಯಾದರು. ಪುಷ್ಪ ಚಿತ್ರದಲ್ಲಿ ಸೊಂಟ ಬಳುಕಿಸಿದ ಮೇಲೆ ಸಮಂತಾ ಲಕ್ ಬದಲಾಯ್ತು.

ಆದರೆ ಯಶೋದ ಮತ್ತು ಖುಷಿ ಸಿನಿಮಾ ಆದ್ಮೇಲೆ ಬಿಗ್ ಸ್ಕ್ರೀನ್ ಮೇಲೆ ಕಾಣಿಸಿಕೊಂಡಿರಲಿಲ್ಲ. ಎರಡೂ ಹೀನಾಯವಾಗಿ ಸೋತ ಚಿತ್ರಗಳು. ಸೋಲಿನ ಹೊಡೆತಕ್ಕೆ ಅನಾರೋಗ್ಯದ ಆಘಾತ ಎರಡನ್ನೂ ಸಹಿಕೊಳ್ಳೋಕೆ ಸ್ಯಾಮ್‌ಗೆ 6 ತಿಂಗಳು ಹಿಡಿಯಿತು. ಇದೀಗ ಮತ್ತೆ ಕೆಲಸಕ್ಕೆ ಮರಳಿದ್ದಾರೆ.

ಸದ್ಯ ಸಮಂತಾಗೆ ಟಾಲಿವುಡ್ ಮಾತ್ರವಲ್ಲ ಬಾಲಿವುಡ್ ನಿಂದಲೂ ಬಂಪರ್ ಅವಕಾಶಗಳು ಅರಸಿ ಬರುತ್ತಿವೆ. ಹಾಗಾಗಿ ಸಮಂತಾ ಸಿನಿಮಾ ಮತ್ತು ಲುಕ್ ಹೇಗಿರಲಿದೆ ಎಂಬ ಚರ್ಚೆ ಕೂಡ ನಡೆದಿದೆ. ಹೊಸ ಕೆಲಸ ಅವರನ್ನು ಕೈ ಹಿಡಿಯಲಿ ಎನ್ನುತ್ತಿದ್ದಾರೆ ಸ್ಯಾಮ್ ಫ್ಯಾನ್ಸ್.



# ಪಠಾಣ್ 2ಗೆ ನಿರ್ಮಾಪಕ ಆದಿತ್ಯ ಚೋಪ್ರಾ ಚಿಂತನೆ

ಶಾರುಖ್ ಖಾನ್ ನಟನೆಯ ಪಠಾಣ್ ಸಿನಿಮಾ ಏನೆಲ್ಲ ಗೊಂದಲಗಳ ನಡುವೆಯೂ ಸೂಪರ್ ಹಿಟ್ ಆಗಿತ್ತು. ಕೇಸರಿ ಬಿಕಿನಿ ವಿಚಾರವಾಗಿ ಹೊತ್ತಿಕೊಂಡಿದ್ದ ವಿವಾದದ ಬೆಂಕಿ, ಸಿನಿಮಾವನ್ನೂ ಮುಗಿಸಲಿದೆ ಎಂದು ಭವಿಷ್ಯ ನುಡಿಯಲಾಗಿತ್ತು. ಆದರೆ, ಅದೆಲ್ಲವನ್ನೂ ಮೀರಿ ಸಿನಿಮಾ ಗೆದ್ದಿತ್ತು. ಇದೀಗ ಪಠಾಣ್ ಸಿನಿಮಾ ಸೀಕ್ವೆಲ್ ಮಾಡಲು ನಿರ್ಮಾಪಕ ಆದಿತ್ಯ ಚೋಪ್ರಾ ಚಿಂತನೆ ನಡೆಸಿದ್ದಾರೆ. ಈ ಕುರಿತಂತೆ ಶಾರುಖ್ ಖಾನ್ ಜೊತೆ ಅವರು ಚರ್ಚೆ ಕೂಡ ಮಾಡಿದ್ದಾರಂತೆ.

ಪಠಾಣ್ ಸಿನಿಮಾ ಬಾಕ್ಸ್ ಆಫೀಸಿನಲ್ಲಿ ದಾಖಲೆ ಬರೆದಿತ್ತು. ಸಿನಿಮಾ ರಿಲೀಸ್ ಆಗಿ 27ನೇ ದಿನಕ್ಕೆ ಸಾವಿರ ಕೋಟಿ ಕ್ಲಬ್ ಸೇರಿತ್ತು. ಆ ವರ್ಷದಲ್ಲಿ ರಿಲೀಸ್ ಆದ ಬಾಲಿವುಡ್ ಸಿನಿಮಾಗಳಲ್ಲಿ ಅತೀ ಹೆಚ್ಚು ಹಣ ಮಾಡಿದ ಚಿತ್ರ ಎನ್ನುವ ಹೆಗ್ಗಳಿಕೆಗೂ ಈ ಸಿನಿಮಾ ಪಾತ್ರವಾಗಿತ್ತು. ಶಾರುಖ್ ಖಾನ್ ಮತ್ತು ದೀಪಿಕಾ ಪಡುಕೋಣೆ ಕಾಂಬಿನೇಷನ್ ಗೆ ಅಭಿಮಾನಿಗಳು ಫಿದಾ ಆಗಿದ್ದರು.





ಪಠಾಣ್ ಸಿನಿಮಾದ ಹಾಡೊಂದು ವಿವಾದಕ್ಕೀಡಾದಾಗ ಈ ಸಿನಿಮಾವನ್ನು ಗೆಲ್ಲಿಸಲೇಬಾರದು ಎಂದು ಹಲವರು ಕರೆ ನೀಡಿದರು. ಪ್ರತಿಭಟನೆಗಳು ನಡೆದವು, ಬಾಯ್ಕಾಟ್ ಪಠಾಣ್ ಅಭಿಯಾನ ಶುರುವಾಯಿತು. ಚಿತ್ರಮಂದಿರಗಳ ಮೇಲೆ ದಾಳಿ ನಡೆದವು. ಸಿನಿಮಾದ ಪೋಸ್ಟರ್ ಹರಿದು ಹಾಕಲಾಯಿತು. ಪೋಸ್ಟರ್ ಸುಡಲಾಯಿತು. ಏನೆಲ್ಲ ಸಂಕಷ್ಟಗಳು ಎದುರಾದರೂ, ಪಠಾಣ್ ಮಾತ್ರ ಗೆಲುವು ಸಾಧಿಸಿತ್ತು.

ಪಠಾಣ್ ಒಂದೊಳ್ಳೆ ಸಿನಿಮಾ. ಎಲ್ಲರ ಮೆಚ್ಚುಗೆಗೂ ಅದು ಪಾತ್ರವಾಗಲಿದೆ. ದೇಶಭಕ್ತಿ ಸಾರುವಂತಹ ಕಥೆಯನ್ನು ಇದು ಒಳಗೊಂಡಿದೆ ಎಂದು ಶಾರುಖ್ ಹೇಳಿದರೂ, ವಿರೋಧಿಗಳು ಮಾತ್ರ ಕೇಳಲಿಲ್ಲ. ಕೆಲವು ರಾಜ್ಯಗಳಲ್ಲಿ ಸಿನಿಮಾವನ್ನು ನಿಷೇಧ ಮಾಡುವಂತೆ ಒತ್ತಡ ತರಲಾಯಿತು. ಕೊನೆಗೆ ಪ್ರಧಾನಿ ನರೇಂದ್ರ ಮೋದಿ ಅವರು ಮಧ್ಯ ಪ್ರವೇಶ ಮಾಡಿದರು. ಆದರೂ, ಪ್ರತಿಭಟನೆ ಮಾತ್ರ ನಿಲ್ಲಲಿಲ್ಲ.

ಪಠಾಣ್ ಸಿನಿಮಾಗಾಗಿ ಇಡೀ ಬಾಲಿವುಡ್ ಒಂದಾಯಿತು. ಈ ಸಿನಿಮಾವನ್ನು ಗೆಲ್ಲಿಸುವ ಮೂಲಕ ಬಾಲಿವುಡ್ ಗೆಲ್ಲಿಸೋಣ ಎನ್ನುವ ಮಾತು ಕೇಳಿ ಬಂತು. ಹಾಗಾಗಿ ಶಾರುಖ್ ವಿರೋಧಿಗಳು ಕೂಡ ಈ ಸಿನಿಮಾವನ್ನು ಮೆಚ್ಚಿ ಮಾತನಾಡಿದರು. ಮೊದ ಮೊದಲು ತೆಗಳುತ್ತಿದ್ದವರು, ಆ ಮೇಲೆ ಸಿನಿಮಾ ಬಗ್ಗೆ ಹೊಗಳಿಕೆಯ ಮಾತುಗಳನ್ನು ಆಡಿದರು. ಇದೇ ಸಿನಿಮಾದ ಮುಂದುವರೆದ ಭಾಗವನ್ನು ಮಾಡಲು ಚಿತ್ರತಂಡ ಸಜ್ಜಾಗಿದೆ.

# ಮುಂಬೈ ಗೆಲುವಿನ ಶುಭಾರಂಭ

ನಾಯಕಿ ಹರ್ಮನ್‌ಪ್ರೀತ್ ಕೌರ್, ಆರಂಭಿಕ ಆಟಗಾರ್ತಿ ಯಾಸ್ತಿಕಾ ಭಾಟಿಯ ಸ್ಫೋಟಕ ಅರ್ಧಶತಕಗಳ ನೆರವಿನಿಂದ ಮುಂಬೈ ಇಂಡಿಯನ್ಸ್ ಮಹಿಳಾ ತಂಡವು ಡೆಲ್ಲಿ ಕ್ಯಾಪಿಟಲ್ಸ್ ವಿರುದ್ಧ 4 ವಿಕೆಟ್‌ಗಳ ಅಮೋಘ ಜಯ ಸಾಧಿಸಿದೆ.

ಬೆಂಗಳೂರಿನ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಶುಕ್ರವಾರ ನಡೆದ ಮಹಿಳಾ ಪ್ರೀಮಿಯರ್‌ಲೀಗ್ 2ನೇ ಆವೃತ್ತಿಯ ಉದ್ಘಾಟನಾ ಪಂದ್ಯದಲ್ಲೇ ಮುಂಬೈ ಶುಭಾರಂಭ ಕಂಡಿದೆ.

ಇನ್ನೂ 2023ರ ಮಹಿಳಾ ಪ್ರೀಮಿಯರ್ ಲೀಗ್ ಆವೃತ್ತಿಯ ಫೈನಲ್‌ನಲ್ಲಿ ಮುಂಬೈ ಇಂಡಿಯನ್ಸ್ ವಿರುದ್ಧ ಸೋಲು ಕಂಡಿದ್ದ ಡೆಲ್ಲಿ ಕ್ಯಾಪಿಟಲ್ಸ್ ತಂಡ 2ನೇ ಆವೃತ್ತಿಯ ಉದ್ಘಾಟನಾ ಪಂದ್ಯದಲ್ಲೂ ಮುಂಬೈ ವಿರುದ್ಧವೇ ಸೋಲನುಭವಿಸಿದೆ.

ಟಾಸ್ ಸೋತು ಮೊದಲು ಬ್ಯಾಟಿಂಗ್ ಮಾಡಿದ ಡೆಲ್ಲಿ ಕ್ಯಾಪಿಟಲ್ಸ್ ಮಹಿಳಾ ತಂಡ 20 ಓವರ್‌ಗಳಲ್ಲಿ 5 ವಿಕೆಟ್ ನಷ್ಟಕ್ಕೆ 171 ರನ್ ಬಾರಿಸಿತು. ಬೃಹತ್ ಮೊತ್ತದ ಗುರಿ ಬೆನ್ನತ್ತಿದ ಮುಂಬೈ ತಂಡ 20 ಓವರ್ ಗಳಲ್ಲಿ 6 ವಿಕೆಟ್ ನಷ್ಟಕ್ಕೆ 173 ರನ್ ಸಿಡಿಸಿ ಗೆಲುವು ಸಾಧಿಸಿತು.

ಬೃಹತ್ ಮೊತ್ತದ ಚೇಸಿಂಗ್ ಆರಂಭಿಸಿದ ಮುಂಬೈ ತಂಡಕ್ಕೆ ಕೊನೆಯ ಓವರ್‌ನಲ್ಲಿ ಮುಂಬೈ ಗೆಲುವಿಗೆ 12 ರನ್‌ಗಳ ಅಗತ್ಯವಿತ್ತು. ಮೊದಲ ಎಸೆತದಲ್ಲೇ ಮುಂಬೈ ತಂಡ ವಿಕೆಟ್ ಕಳೆದುಕೊಂಡು ಸಂಕಷ್ಟಕ್ಕೀಡಾಯಿತು. ನಂತರ ಮುಂದಿನ 2 ಎಸೆತಗಳಲ್ಲಿ ಕೇವಲ 3 ರನ್ ತಂಡಕ್ಕೆ ಸೇರಿತು. 4ನೇ ಎಸೆತದಲ್ಲಿ ಬೌಂಡರಿ ಬಾರಿಸಿದ ಹರ್ಮನ್‌ಪ್ರೀತ್ 5ನೇ ಎಸೆತವನ್ನು ಸಿಕ್ಸರ್ ಸಿಡಲು ಹೋಗಿ ಕ್ಯಾಚ್



ನೀಡಿದರು. ಕೊನೇ ಎಸೆತದಲ್ಲಿ 5 ರನ್‌ಗಳ ಅಗತ್ಯವಿದ್ದಾಗ ಸೂಪರ್ ಓವರ್ ನಿರೀಕ್ಷಿಸಲಾಗಿತ್ತು. ಆದ್ರೆ ಕ್ರೀನಲ್ಲಿದ್ದ ಸಜೀವನ್ ಸಜನ ಸಿಕ್ಸರ್ ಬಾರಿಸುವ ಮೂಲಕ ಗೆಲುವು ತಂದುಕೊಟ್ಟರು.

ಮುಂಬೈ ಇಂಡಿಯನ್ಸ್ ಪರ ಯಾಸ್ತಿಕಾ ಭಾಟಿಯಾ 57 ರನ್ (45 ಎಸೆತ, 8 ಬೌಂಡರಿ, 2 ಸಿಕ್ಸರ್), ಹರ್ಮನ್‌ಪ್ರೀತ್ ಕೌರ್ 55 ರನ್ (34 ಎಸೆತ, 7 ಬೌಂಡರಿ, 1 ಸಿಕ್ಸರ್) ಚಚ್ಚಿದರೆ, ನಟಾಲಿ ಸ್ಕಿವರ್ ಬ್ರಂಟ್ 19 ರನ್, ಅಮೆಲಿಯಾ ಕೆರ್ 24 ರನ್, ಪೂಜಾ ವಸ್ತ್ರಕರ್ 1 ರನ್, ಅಮನ್ಜೋತ್ ಕೌರ್ 3 ರನ್, ಸಜೀವನ್ ಸಜನ 6 ರನ್ ಕೊಡುಗೆ ನೀಡಿದ್ರೆ, ಹೇಲಿ ಮ್ಯಾಥ್ಯೂಸ್ ಶೂನ್ಯ ಸುತ್ತಿದರು.

ಇನ್ನೂ ಮೊದಲು ಬ್ಯಾಟಿಂಗ್ ಮಾಡಿದ ಡೆಲ್ಲಿ ಕ್ಯಾಪಿಟಲ್ಸ್ ಪರ ಆಲಿಸ್ ಕ್ಯಾಪ್ಸಿ ಸ್ಫೋಟಕ 75 ರನ್ (53 ಎಸತ, 8 ಬೌಂಡರಿ, 3 ಸಿಕ್ಸರ್) ಚಚ್ಚಿದರೆ, ಜೆಮಿಮಾ ರೋಡ್ರಿಗ್ಸ್ 42 ರನ್, ನಾಯಕಿ ಮೆಗ್ ಲ್ಯಾನಿಂಗ್ 31 ರನ್, ಮರಿಜಾನ್ನೆ ಕಪ್ 16 ರನ್ ಗಳಿದ್ರೆ, ಶಫಾಲಿ ವರ್ಮಾ ಕೇವಲ 1 ರನ್‌ಗೆ ವಿಕೆಟ್ ಒಪ್ಪಿಸಿದ್ರು. ಅನ್ನಾಬೆಲ್ ಸದರ್ಲ್ಯಾಂಡ್ 1 ರನ್ ಗಳಿಸಿ ಕ್ರೀಸ್‌ನಲ್ಲಿ ಉಳಿದರು.

ಮುಂಬೈ ಇಂಡಿಯನ್ಸ್ ಪರ ನಟಾಲಿ ಸ್ಕೀವರ್ ಬ್ರಂಟ್, ಅಮೇಲಿಯಾ ಕೇರ್ ತಲಾ 2 ವಿಕೆಟ್ ಕಿತ್ತರೆ, ಶಬ್ನಿಮ್ ಇಸ್ಮಾಯಿಲ್ 1 ವಿಕೆಟ್‌ಗೆ ತೃಪ್ತಿಪಟ್ಟುಕೊಂಡರು.

ಡೆಲ್ಲಿ ಕ್ಯಾಪಿಟಲ್ಸ್ ಪರ ಅರುಂಧತಿ ರೆಡ್ಡಿ, ಆಲಿಸ್ ಕ್ಯಾಪ್ಸಿ ತಲಾ 2 ವಿಕೆಟ್ ಪಡೆದರೆ, ಶಿಖಾ ಪಾಂಡೆ ಮತ್ತು ಮರಿಜಾನ್ನೆ ಕಪ್ ತಲಾ ಒಂದೊಂದು ವಿಕೆಟ್ ಪಡೆದರು.

# ನಲುಗಿದ ಆಂಗ್ಲ ಪಡೆಗೆ ರೂಟ್ ಶತಕದ ಬಲ

ನಾಲ್ಕನೇ ಟೆಸ್ಟ್ ಪಂದ್ಯದ ಮೊದಲ ದಿನದಾಟದಲ್ಲಿ ಇಂಡಿಯಾ ವಿರುದ್ಧ ಬ್ಯಾಟಿಂಗ್ ಆಯ್ದುಕೊಂಡ ಇಂಗ್ಲೆಂಡ್ 7 ವಿಕೆಟ್‌ಗಳ ನಷ್ಟಕ್ಕೆ 302 ರನ್ ಗಳಿಸಿದೆ.

ಇಂಗ್ಲೆಂಡ್ ಪರ ಬ್ಯಾಟ್ ಬೀಸಿದ ಜೋ ರೂಟ್ 226 ಎಸೆತಗಳಿಗೆ 9 ಬೌಂಡರಿ ಚಚ್ಚುವ ಮೂಲಕ ಶತಕ ಸಿಡಿಸಿದ್ದಾರೆ. ಈ ಮೂಲಕ 106 ರನ್‌ಗಳನ್ನು ಕಲೆ ಹಾಕಿ ಕ್ರೀಸ್‌ನಲ್ಲೇ ಉಳಿದಿದ್ದಾರೆ. ಝಾಕ್ ಕ್ರಾವ್ಲಿ 42 ಎಸೆತಗಳಿಗೆ 42 ರನ್ ಗಳಿಸಿ ಔಟಾಗಿದ್ದಾರೆ. ಬೆನ್ ಡಕೆಟ್ 21 ಎಸೆತಗಳಿಗೆ 11 ರನ್‌ಗಳಿಸಿ ವಿಕೆಟ್ ಒಪ್ಪಿಸಿದ್ದಾರೆ.

ಬೈಸ್ಟ್ರೋವ್ 35 ಎಸೆತಗಳಲ್ಲಿ 38 ರನ್ ಗಳಿಸಿ ಔಟಾಗಿದ್ದಾರೆ. ಬೆನ್ ಫೋಕ್ಸ್ ನಾಲ್ಕು ಬೌಂಡರಿ ಚಚ್ಚಿ, ಒಂದು ಸಿಕ್ಸ್ ಸಿಡಿಸುವ ಮೂಲಕ 126 ಎಸೆತಗಳಲ್ಲಿ 47 ರನ್ ಗಳಿಸಿ ಸಿರಾಜ್ ಬೌಲಿಂಗ್ ದಾಳಿಗೆ ವಿಕೆಟ್ ಒಪ್ಪಿಸಿದ್ದಾರೆ. ಇನ್ನೂ ಟಾಮ್ ಹಾಟ್ಲಿ ಒಂದು ಸಿಕ್ಸ್ ಒಂದು ಫೋರ್ ಸೇರಿ 13 ರನ್ ಗಳಿಸಿ ಔಟಾಗಿದ್ದಾರೆ.

ಓಲಿ ಪೋಪ್ ಕೇವಲ ಎರಡೇ ಎಸೆತಗಳಲ್ಲಿ ಆಕಾಶ್ ದೀಪ್ ಬೌಲಿಂಗ್‌ಗೆ ಎಲ್‌ಬಿಡಬ್ಲ್ಯೂ ಆಗಿ



ಪೆವಿಲಿಯನ್‌ಗೆ ಮರಳಿದ್ದಾರೆ.

ರಾಬಿನ್ಸನ್ 60 ಎಸೆತಗಳಲ್ಲಿ ನಾಲ್ಕು ಬೌಂಡರಿ ಒಂದು ಸಿಕ್ಸ್ ಸೇರಿ 31 ರನ್ ಕಲೆ ಹಾಕಿ ಔಟಾಗದೇ ಉಳಿದಿದ್ದಾರೆ. ಭಾರತದ ಪರವಾಗಿ ಸಿರಾಜ್ 2, ಆಕಾಶ್ ದೀಪ್ 3, ಜಡೇಜಾ 1, ಅಶ್ವಿನ್ 1 ವಿಕೆಟ್ ಕಬಳಿಸಿದ್ದಾರೆ.

# ಕೇಂದ್ರದ ವಿರುದ್ಧವೇ ಕರ್ನಾಟಕ ವಿಧಾನಸಭೆಯಲ್ಲಿ ನಿರ್ಣಯ ಅಂಗೀಕಾರ

**ಬೆಂಗಳೂರು:** ಕರ್ನಾಟಕದ ಪಾಲಿನ ತೆರಿಗೆ, ವಿಶೇಷ ಅನುದಾನ ಹಂಚಿಕೆಯಲ್ಲಿ ಅನ್ಯಾಯ ಮಾಡುತ್ತಿರುವುದನ್ನು ಖಂಡಿಸಿ ಹಾಗೂ ಎಲ್ಲಾ ಬೆಳೆಗಳಿಗೆ ಕನಿಷ್ಠ ಬೆಂಬಲ ಬೆಲೆ ನಿಗದಿಪಡಿಸಲು ಆಗ್ರಹಿಸಿ ರಾಜ್ಯ ವಿಧಾನಸಭೆಯಲ್ಲಿ ಕೇಂದ್ರ ಸರ್ಕಾರದ ವಿರುದ್ಧವೇ ನಿರ್ಣಯ ಅಂಗೀಕರಿಸಲಾಗಿದೆ. ಆರ್ಥಿಕ ಸಂಪನ್ಮೂಲಗಳ ಮತ್ತು ಕನಿಷ್ಠ ಬೆಂಬಲ ಬೆಲೆಯ ಸಮಾನ ಹಂಚಿಕೆ ಮಾಡುವಂತೆ ನಿರ್ಣಯದಲ್ಲಿ ಆಗ್ರಹಿಸಲಾಗಿದೆ. ಈ ನಿರ್ಣಯಕ್ಕೆ ಬಿಜೆಪಿ ನೇತೃತ್ವದ ಪ್ರತಿಪಕ್ಷಗಳು ತೀವ್ರ ಆಕ್ಷೇಪ ವ್ಯಕ್ತಪಡಿಸಿದವು.

ರೈತರ ಎಲ್ಲಾ ಬೆಳೆಗಳಿಗೆ ಕನಿಷ್ಠ ಬೆಂಬಲ ಬೆಲೆಯನ್ನು ನಿಗದಿಪಡಿಸುವ ಕಾನೂನು ರೂಪಿಸಲು ಕೇಂದ್ರ ಸರ್ಕಾರವನ್ನು ಒತ್ತಾಯಿಸಲು ಈ ಸದನವು ಸರ್ವಾನುಮತದಿಂದ ನಿರ್ಣಯ ಕೈಗೊಂಡಿದೆ ಎಂದು ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವ ಎಚ್.ಕೆ.ಪಾಟೀಲ್ ನಿರ್ಣಯವನ್ನು ಓದಿದರು.

ಕನಿಷ್ಠ ಬೆಂಬಲ ಬೆಲೆ ಹಾಗೂ ಇತರ ಬೇಡಿಕೆಗಳನ್ನು ಈಡೇರಿಸುವಂತೆ ಆಗ್ರಹಿಸಿ ರೈತರು, ವಿಶೇಷವಾಗಿ ಪಂಜಾಬ್ ಮತ್ತು ಹರಿಯಾಣದವರು ದೆಹಲಿಯ ಕಡೆಗೆ ಪ್ರತಿಭಟನಾ ಮೆರವಣಿಗೆ ನಡೆಸುತ್ತಿದ್ದಾರೆ. ಈ ಸಂದರ್ಭದಲ್ಲೇ ಬೆಳೆಗಳ ಮೇಲಿನ ಕನಿಷ್ಠ ಬೆಂಬಲ ಬೆಲೆ ಬೇಡಿಕೆಗಾಗಿ ಕೇಂದ್ರ ಸರ್ಕಾರವನ್ನು ಒತ್ತಾಯಿಸಲು ಈ ನಿರ್ಣಯವನ್ನು ಅಂಗೀಕರಿಸಲಾಗಿದೆ ಎಂದು ಕರ್ನಾಟಕ ಸರ್ಕಾರ ತಿಳಿಸಿದೆ.

ಎಚ್.ಕೆ.ಪಾಟೀಲ್ ಮಾತನಾಡಿ, ರೈತರೊಂದಿಗೆ ಸಂಘರ್ಷಕ್ಕೆ ಆಸ್ಪದ ನೀಡದೆ ಅವರ ಅತ್ಯಂತ ನ್ಯಾಯಯುತ ಬೇಡಿಕೆಗಳನ್ನು ಈಡೇರಿಸುವಂತೆ ಈ ಸದನ ಒತ್ತಾಯಿಸುತ್ತದೆ. ಬೆಳೆದ ಬೆಳೆಗೆ ಲಾಭದಾಯಕ ಬೆಲೆ ನಿಗದಿಯಾಗಬೇಕು ಎಂಬುದು ಪ್ರತಿಯೊಬ್ಬ ಭಾರತೀಯ ರೈತರ ಆಶಯವಾಗಿದೆ. ಎಲ್ಲಾ ಜನಪರ ಪ್ರಜಾಸತ್ತಾತ್ಮಕ ಸರ್ಕಾರಗಳು ಈ ಉತ್ತಮ



ಆದರ್ಶವನ್ನು ಜಾರಿಗೆ ತರಲು ಮತ್ತು ಕೃಷಿಯನ್ನು ಲಾಭದಾಯಕವಾಗಿಸಲು ಒತ್ತಾಯಿಸುತ್ತವೆ ಎಂದು ನಿರ್ಣಯದಲ್ಲಿ ತಿಳಿಸಲಾಗಿದೆ.

ಕೇಂದ್ರದ ಬಿಜೆಪಿ ಸರ್ಕಾರವು ಅತ್ಯುನ್ನತ ನಾಗರಿಕ ಪ್ರಶಸ್ತಿ ಭಾರತ ರತ್ನ ನೀಡಿ ಗೌರವಿಸುತ್ತಿರುವ ಕೃಷಿ ವಿಜ್ಞಾನಿ, ದಿವಂಗತ ಡಾ ಎಂಎಸ್ ಸ್ವಾಮಿನಾಥನ್ ಅವರ ಹೆಸರನ್ನು ನಿರ್ಣಯದಲ್ಲಿ ಉಲ್ಲೇಖಿಸಲಾಗಿದೆ.

ರೈತನ ಸಾಗುವಳಿ ವೆಚ್ಚದ ಶೇ 50 ರಷ್ಟು ಕನಿಷ್ಠ ಬೆಂಬಲ ಬೆಲೆ ಘೋಷಿಸುವ ಮೂಲಕ 'ಹಸಿರು ಕ್ರಾಂತಿ'ಯನ್ನು ಸಾಧಿಸುವಲ್ಲಿ ಸರಕಾರಗಳು ನಿರೀಕ್ಷಿತ ಮಟ್ಟದಲ್ಲಿ ಯಾವುದೇ ಪ್ರಗತಿಯನ್ನು ಮಾಡಿಲ್ಲ ಅಥವಾ ಯಾವುದೇ ಬದಲಾವಣೆಯನ್ನು ತಂದಿಲ್ಲ ಎಂದು ಸ್ವಾಮಿನಾಥನ್ ವರದಿ ಮಾಡಿದ್ದರು.

ರಾಷ್ಟ್ರದ ಆಹಾರ ಪೂರೈಕೆ ಮತ್ತು ಒಟ್ಟಾರೆ ಅಭಿವೃದ್ಧಿಯ ಅವಿಭಾಜ್ಯ ಅಂಗವಾಗಿರುವ ರೈತರ ಆದಾಯವನ್ನು ಸಂರಕ್ಷಿಸುವ ಮೂಲಕ ಕೃಷಿಯನ್ನು ಲಾಭದಾಯಕವಾಗಿಸುವ ಉದ್ದೇಶದಿಂದ ಇತರ ಕೃಷಿ ಉತ್ಪನ್ನಗಳಿಗೆ, ವಾಣಿಜ್ಯ ಬೆಳೆಗಳಿಗೆ ಬೆಲೆ ಮಾನದಂಡಗಳನ್ನು ಅಳವಡಿಸಿಕೊಳ್ಳಬೇಕೆಂಬ ಬೇಡಿಕೆಗೆ ಕರ್ನಾಟಕ ಬೆಂಬಲವನ್ನು ಮುಂದುವರೆಸಿದೆ ಎಂದು ಕಾಂಗ್ರೆಸ್ ಸರ್ಕಾರ ಹೇಳಿದೆ.

ಆದರೆ, ಇತ್ತೀಚಿನ ದಿನಗಳಲ್ಲಿ ಕೇಂದ್ರ ಸರ್ಕಾರದ ಕ್ರಮಗಳು ರೈತ ವಿರೋಧಿ ನೀತಿಯಾಗಿ ಪರಿಣಮಿಸಿದ್ದು, ರೈತನಿಗೆ ಕನಿಷ್ಠ ಬೆಂಬಲ ಬೆಲೆ ಸಿಗದ ಪರಿಸ್ಥಿತಿ ನಿರ್ಮಾಣವಾಗಿದೆ ಎಂದು ಕರ್ನಾಟಕ ಸರ್ಕಾರ ನಿರ್ಣಯದಲ್ಲಿ ಉಲ್ಲೇಖಿಸಿದೆ.

ಅವೈಜ್ಞಾನಿಕ ಜಿಎಸ್‌ಟಿ ವ್ಯವಸ್ಥೆಯಿಂದ ಉಂಟಾದ ಅನ್ಯಾಯ ಮತ್ತು ಹಣದ ಸಮಸ್ಯೆ, ಸೆಸ್ ಮತ್ತು ಸರ್ ಚಾರ್ಜ್‌ಗಳ ಹೇರಿಕೆಯಿಂದ ತೆರಿಗೆ ಪಾಲು ಕಡಿತ, 15ನೇ ಹಣಕಾಸು ಆಯೋಗ ಶಿಫಾರಸು ಮಾಡಿದ ವಿಶೇಷ ಮತ್ತು ರಾಜ್ಯ ಕೇಂದ್ರಿತ ಅನುದಾನವನ್ನು ವಿತರಿಸದಿರುವುದನ್ನು ರಾಜ್ಯ ಸರಕಾರವು ಬಲವಾಗಿ ಖಂಡಿಸುತ್ತದೆ ಎಂದು ಎರಡನೇ ನಿರ್ಣಯದಲ್ಲಿ ಹೇಳಲಾಗಿದೆ.

ಹಿಂದಿನ ಹಣಕಾಸು ಆಯೋಗಕ್ಕೆ ಹೋಲಿಸಿದರೆ 15ನೇ ಹಣಕಾಸು ಆಯೋಗದ ಪಾಲು ಹಂಚಿಕೆಯಲ್ಲಿ ಶೇ 23ರಷ್ಟು ನಷ್ಟ ಸಂಭವಿಸಿದೆ. ಇದರಿಂದಾಗಿ 2017-18ನೇ ಸಾಲಿನಿಂದ ರಾಜ್ಯಕ್ಕೆ 1,78,189 ಕೋಟಿ ರೂಪಾಯಿ ನಷ್ಟವಾಗಿದೆ ಎಂದು ನಿರ್ಣಯದಲ್ಲಿ ತಿಳಿಸಲಾಗಿದೆ.

# ಸಂಸದೆ ಸುಮಲತಾ ಅಂಬರೀಶ್ ಬಿಜೆಪಿಯಲ್ಲೇ ಇರುತ್ತಾರೆ

**ಹುಬ್ಬಳ್ಳಿ:** ಮಂಡ್ಯ ಸಂಸದೆ ಸುಮಲತಾ ಅಂಬರೀಶ್ ಬಿಜೆಪಿಯಲ್ಲೇ ಇರುತ್ತಾರೆ ಎಂದು ಕೇಂದ್ರ ಸಂಸದೀಯ ಸಚಿವ ಪ್ರಹ್ಲಾದ ಜೋಶಿ ತಿಳಿಸಿದ್ದಾರೆ. ನಿನ್ನೆ ಹುಬ್ಬಳ್ಳಿಯಲ್ಲಿ ಮಾಧ್ಯಮ ಪ್ರತಿನಿಧಿಗಳೊಂದಿಗೆ ಮಾತನಾಡಿದ ಸಚಿವರು, ಸುಮಲತಾ ಬಿಜೆಪಿಯಲ್ಲಿ ಇರುತ್ತಾರೆ ಎಂದಷ್ಟೇ ಪ್ರತಿಕ್ರಿಯಿಸಿದರು. ಜೆಡಿಎಸ್ ನಾಯಕ ಹೆಚ್.ಡಿ.ಕುಮಾರಸ್ವಾಮಿ ಅವರು ದೆಹಲಿಯಲ್ಲಿ ಬಿಜೆಪಿ ವರಿಷ್ಠರನ್ನು ಭೇಟಿ ಮಾಡಿದ್ದಾರೆ. ಆದರೆ, ಯಾವುದೇ ಟಿಕೆಟ್ ಹಂಚಿಕೆ



ಬಗ್ಗೆ ತೀರ್ಮಾನ ಆಗಿಲ್ಲ. ಬಿಜೆಪಿ ರಾಜ್ಯ ಘಟಕ ಮತ್ತು ಜೆಡಿಎಸ್ ರಾಜ್ಯ ಘಟಕದೊಂದಿಗೆ ಇಷ್ಟರಲ್ಲೇ ಹೈಕಮಾಂಡ್ ಮಾತುಕತೆ ನಡೆಸಲಿದೆ. ಬಳಿಕವೇ ಟಿಕೆಟ್ ಹಂಚಿಕೆಯಾಗಲಿದೆ ಎಂದು ಹೇಳಿದರು.

ಹೆಚ್‌ಡಿ ಕುಮಾರಸ್ವಾಮಿ ಅವರು ಯಾವುದಕ್ಕೆ ನಮ್ಮ ವರಿಷ್ಠರನ್ನು ಭೇಟಿ ಮಾಡಿದ್ದಾರೆ ಗೊತ್ತಿಲ್ಲ. ಆದರೆ, ಲೋಕಸಭೆ ಚುನಾವಣೆಯಲ್ಲಿ ಎರಡೂ ಪಕ್ಷಗಳ ನಡುವೆ ಸೀಟು ಹಂಚಿಕೆ ಸರಿಯಾಗಿಯೇ ಆಗುತ್ತದೆ. ನಮಗೆ ಆ ವಿಶ್ವಾಸವಿದೆ ಎಂದು ಪ್ರತಿಕ್ರಿಯಿಸಿದರು.

ಇಂಡಿಯಾ ಒಕ್ಕೂಟವನ್ನ ನಾವು ಒಡೆಯುತ್ತಿದ್ದೇವೆ ಅನ್ನೋದು ತಪ್ಪು. ಅವರವರೇ ಜಗಳ ಮಾಡಿಕೊಂಡು ಹೊರಗೆ ಬರುತ್ತಿದ್ದಾರೆ. ಮಮತಾ ಬ್ಯಾನರ್ಜಿಯ ಅನ್ಯಾಯ, ಅತ್ಯಾಚಾರಕ್ಕೆ ತುತ್ತಾಗಿರುವುದು ಬಿಜೆಪಿ. ಮಮತಾ ನಮ್ಮ ಮಾತು ಕೇಳುತ್ತಾರಾ? ನಿಮ್ಮ ರಾಹುಲ್ ಗಾಂಧಿಗೆ ಅಪಕ್ವತೆ ಇರುವುದರಿಂದ ನಿಮ್ಮ ಪಕ್ಷ ನಂಬಿ ಬರಲು ಯಾರೂ ತಯಾರಿಲ್ಲ. ಇದೊಂದು ಅವಕಾಶವಾದಿಗಳ ಕೂಟ ಅಂತ ಆರಂಭದಲ್ಲಿ ನಾವು ಹೇಳಿದ್ದೇವು. ಇದೊಂದು ಫೋಟೋಶೂಟ್ ಆಗುತ್ತೆ, ಮುಂದೇನು ಆಗಲ್ಲಾ ಅಂದಿದ್ದೆ ಎಂದು ಕಾಂಗ್ರೆಸ್ ಮಿತ್ರ ಕೂಟಗಳ ವಿರುದ್ಧ ವಾಗ್ದಾಳಿ ಮಾಡಿದರು.

Printed, Published & Owned by N.Venugopal Krishna, Printed at DASHAPRAMATHI MUDRANALAYA, No.433/1, Chikkavitalenahalli Village, Thagachagere Post, Kasaba Hobli, Channapatna Taluk, Ramanagar District, Pin-562160. Published at No.15, Ground Floor, 12th Block, 5th Main, Kumara Park (West), Behind BDA Head Office, Bengaluru-560020. Editor: N.Venugopal Krishna, Mobile No.+91 94835 89085, email: sanjemugilu@gmail.com